ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 18 ಏ 27-ಮೇ 3, 1998 ರೂ.2.00

'ಸಮರ್ಥ' ಆಡಳಿತವೂ ಇಲ್ಲ; 'ಸುಭದ್ರ' ಸರಕಾರವೂ ಇಲ್ಲ

ಬಿಜೆಪಿಯ ಇಬ್ಬಂದಿತನವನ್ನು ಬಯಲಿಗೆಳೆಯಲು ಆಂದೋಲನಕ್ಕೆ ಸಿಪಿಐ(ಎಂ) ಕರೆ

ವಿವಿಧ ಪ್ರಶ್ನೆಗಳು, ಸಮಸ್ಯೆಗಳ ಬಗ್ಗೆ ಬಿಜೆಪಿಯ ಇಬ್ಬಂದಿತನವನ್ನು ಬಯಲಿಗೆಳೆಯಲು ಹಾಗೂ ಅದು ಅನುಸರಿಸುತ್ತಿರುವ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ದೇಶಾದ್ಯಂತ ಮೂರು ತಿಂಗಳ ಚಳುವಳಿ ಹಾಗೂ ಜನಸಂಪರ್ಕ ಕಾರ್ಯಕ್ರಮವನ್ನು ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ಈ ಪ್ರತಿಭಟನಾ ಕಾರ್ಯಕ್ರಮ ಆಗಸ್ಟ್ ತಿಂಗಳವರೆಗೆ ನೆಡೆಯುತ್ತದೆ. ಏಪ್ರಿಲ್ 17 ರಿಂದ 19 ರವರೆಗೆ ನವದೆಹಲಿಯಲ್ಲಿ ಲೋಕ ಸಭಾ ಚುನಾವಣೆಗಳು ಮತ್ತು ನಂತರದ ಬೆಳವಣಿಗೆಗಳನ್ನು ವಿಶ್ಲೇಷಿಸಲು ಸೇರಿದ್ದ ಕೇಂದ್ರ ಸಮಿತಿ ಈ ನಿರ್ಧಾರ ಕೈಗೊಂಡಿದೆ.

ಕೇಂದ್ರ ಸಮಿತಿಯ ನಿರ್ಣಯಗಳ ಬಗ್ಗೆ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಬಿಜೆಪಿ ಅಧಿಕಾರಕ್ಕೆ ಬಂದ ರೀತಿ ಹಾಗೂ ಅಧಿಕಾರ ವಹಿಸಿಕೊಂಡ ಮೇಲೆ ಮೊದಲ ವಾರಗಳಲ್ಲಿ ಅದು ನಡೆದುಕೊಂಡಿರುವ ರೀತಿ ಅದಕ್ಕೆ ನೀತಿಯೆಂಬುದೇ ಇಲ್ಲ ಎಂಬುದನ್ನು ಬಯಲಿಗೆಳೆದಿದೆ ಎಂದು ಹೇಳಿದರು. ಮುಖ್ಯವಾಗಿ ಭ್ರಷ್ಟಾಚಾರಕ್ಕೆ ಅದು ನೀಡಿರುವ ರಕ್ಷಣೆಯತ್ತ ಅವರು ಗಮನ ಸೆಳೆದರು. ವಿರೋಧ ಪಕ್ಷದಲ್ಲಿರುವಾಗ ಅಟಲ್ ಬಿಹಾರಿ ವಾಜಪೇಯಿಯವರು ಭ್ರಷ್ಟಾಚಾರದ ಅನಿಷ್ಟದ ಬಗ್ಗೆ ದೊಡ್ಡ - ದೊಡ್ಡ ಅಣಿಮುತ್ತಗಳನ್ನು ಉದುರಿಸುತ್ತಿದ್ದವರು. ಈಗ ಅವರ ಸರಕಾರ ಭ್ರಷ್ಟರಿಗೆ ಆಶ್ರಯ ನೀಡುವ ಸರಕಾರವಾಗಿದೆ ಎಂದು ಜಯಲಲಿತಾರವರು ಇತ್ತೀಚೆಗೆ ಚಾರ್ಜ್‌ಶೀಟಾದ ಮಂತ್ರಿಗಳ ಮೇಲೆ ವಾಗ್ದಾಳಿ ಮಾಡಿರುವ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು.

'ಸ್ವದೇಶಿ' ಯ ಬಗ್ಗೆ ದೊಡ್ಡ-ದೊಡ್ಡ ಮಾತುಗಳನ್ನಾಡುತ್ತಿದ್ದರೂ ವಾಜಪೇಯಿ ಸರಕಾರ ಅನುಸರಿಸುತ್ತಿರುವುದು ಅದೇ ಉದಾರೀಕರಣ-ಜಾಗತೀಕರಣ ಹಾಗೂ ಖಾಸಗೀಕರಣದ ಕುಖ್ಯಾತ ದಾರಿಯನ್ನು. ಸಂಬಂಧಪಟ್ಟ ರಾಜ್ಯ ಸರಕಾರಗಳೊಡನೆ ಸಮಾಲೋಚಿಸದೆ ಬಿಜೆಪಿಗೆ ನಿಕಟವಾಗಿರುವರನ್ನು ರಾಜ್ಯಪಾಲರಾಗಿ ನೇಮಿಸುತ್ತಿರುವುದು, ತಮಿಳುನಾಡಿನ ಕಾನೂನು-ವ್ಯವಸ್ಥೆ ಪರಿಶೀಲನೆಗೆಂದು ಕೇಂದ್ರ ತಂಡದ ರವಾನೆ ಇತ್ಯಾದಿಗಳ ಮೂಲಕ ತನ್ನ ಸರ್ವಾಧಿಕಾರಿ ಮನೋಭಾವವನ್ನು ತೋರುತ್ತಿದೆ. ಕೇರಳಕ್ಕೂ ಇಂತಹ ಒಂದು ತಂಡವನ್ನು ಕಳಿಸುವ ಮಾತನ್ನು ಸುರ್ಜಿತ್ ಖಂಡಿಸಿದರು.

ಈ ಸರಕಾರ ಹಲವಾರು ಚಾರ್ಜ್‌ಶೀಟಾದ ಮಂತ್ರಿಗಳನ್ನು ಸೇರಿಸಿಕೊಂಡು, ಇತರ ಭ್ರಷ್ಟ ವ್ಯಕ್ತಿಗಳಿಗೆ ಪೋಷಣೆ ನೀಡುತ್ತಾ ಭ್ರಷ್ಟಾಚಾರವನ್ನು ರಕ್ಷಿಸುತ್ತಿದೆ, ಪೋಷಿಸುತ್ತಿದೆ.

ಅಂದು ದುರಂತ - ಈಗ ಪ್ರಹಸನ

"ದಿನ ಬೆಳಗಾದರೆ ಜನ ಕಾಣುತ್ತಿರುವುದು ಸರಕಾರದ ವಿವಿಧ ಮಿತ್ರ ಪಕ್ಷಗಳ ನಡುವೆ ತಿಕ್ಕಾಟ, ಆರೋಪ-ಪ್ರತ್ಯಾರೋಪಗಳು, ನೀತಿ ಬಾಹಿರ ಹಾಗೂ ವಂಚಕ ರಾಜಿಗಳು. ಇಂತಹ ಸರಕಾರ 'ಸ್ಥಿರ' ಹಾಗೂ 'ಸಮರ್ಥ' ಆಡಳಿತ ನೀಡುತ್ತೇನೆ ಎಂದು ಹೇಳಿಕೊಳ್ಳುತ್ತಿರುವುದೇ ದೊಡ್ಡ ತಮಾಷೆಯಾಗಿ ಬಿಟ್ಟಿದೆ" ಎಂದು ಈಗಿನ ಪರಿಸ್ಥಿತಿಯ ಬಗ್ಗೆ ಟಿಪ್ಪಣಿ ಮಾಡುತ್ತಾ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಹೇಳಿದೆ.

ಬಿಜೆಪಿ ಮೊದಲಬಾರಿ ಅಧಿಕಾರ ವಹಿಸಿಕೊಂಡಾಗ 13 ದಿನಗಳ ದುರಂತವಾಗಿ ಕೊನೆಗೊಂಡಿತು. ಈಗ ಅದು ದೇಶದ ಮುಂದೆ, ಜನಗಳ ಮುಂದೆ ಒಂದು ಪ್ರಹಸನದ ಪ್ರದರ್ಶನವನ್ನೇ ನಡೆಸಿದೆ. ಎಐಎಡಿಎಂಕೆ ಮುಖ್ಯಸ್ಥೆ ಜಯಲಲಿತಾರವರ ಧಾಳಿಗೆ ಬೂಟಾಸಿಂಗ್ ರನ್ನು ಬಲಿಪಶು ಮಾಡಲಾಯಿತು. ಇಲ್ಲಿ ಬೂಟಾಸಿಂಗ್‌ರವರನ್ನು ಸಮರ್ಥಿಸಿಕೊಳ್ಳುವ ಅವಶ್ಯಕತೆಯೇನೂ ಇಲ್ಲ. ಮೊದಲನೆಯದಾಗಿ, ಅವರು ಕೇಂದ್ರ ಸಂಪುಟದಲ್ಲೇ ಇರಬಾರದಾಗಿತ್ತು. ಆದರೆ ಇದು ಇನ್ನೂ ಹಲವು ಮಂತ್ರಿಗಳ ಬಗ್ಗೆಯೂ ಅಷ್ಟೇ ಸತ್ಯ. ಎಂತಹಾ ಅಪಮಾರ್ಗಗವನ್ನಾದರೂ ಹಿಡಿದು ಅಧಿಕಾರ ಪಡೆಯ ಹೊರಟ ಬಿಜೆಪಿಗಂತೂ ಈಗ ಈ ಬಗ್ಗೆ ಮಾತಾಡಲು ಯಾವ ನೈತಿಕ ಆಧಾರವೂ ಇಲ್ಲ.

ಅಸಂಬದ್ಧ ವ್ಯತ್ಯಾಸ

ಆದರೆ ಇದು ಬೂಟಾಸಿಂಗ್‌ರವರ ನಿರ್ಗಮನದಿಂದಲೇ ಮುಗಿಯುತ್ತದೆಯೇ? ಜಯಲಲಿತಾರವರು ರಾಮಕೃಷ್ಣ ಹೆಗ್ಗಡೆ, ರಾಮ್‌ಜೇಠ್ಮಲಾನಿಯವರ ಮೇಲೂ ಗುರಿಯಿಟ್ಟಿದ್ದಾರೆ. ಈ ಇಬ್ಬರು ಪ್ರತಿಯಾಗಿ ಜಯಲಲಿತಾರನ್ನು ಟೀಕಿಸಿದರು. ಅದಕ್ಕೆ ಎಐಎಡಿಎಂಕೆ ಮಂತ್ರಿಗಳು ಹೆಗ್ಗಡೆಯವರ 'ಬಾಯ್ಮುಚ್ಚಿಸಿ ಇಲ್ಲವೆ ಹೊರಗೆ ಹಾಕಿ' ಎಂದು ಪ್ರಧಾನಿಗೆ ಹೇಳುತ್ತಾ ಪ್ರತಿಧಾಳಿ ಮಾಡಿದ್ದಾರೆ. ಯಾವ ಆಪಾದನೆಗೊಳಗಾದ ಮಂತ್ರಿಯೂ ಇರಬಾರದು, ಇದನ್ನು ಯಾವುದೇ ಪಕ್ಷಪಾತಕ್ಕೂ ಅವಕಾಶವಿಲ್ಲದಂತೆ ಎಲ್ಲರಿಗೂ ಅನ್ವಯಿಸಬೇಕು - ಇದನ್ನು ಜನ ನಿರೀಕ್ಷಿಸುತ್ತಾರೆ.

ಇವರಲ್ಲಿ ಅತ್ಯಂತ ಗುರುತರವಾದ ಆಪಾದನೆ ಎದುರಿಸುತ್ತಿರುವವರು ಅಡ್ವಾಣಿ, ಮುರಳಿ ಮನೋಹರ ಜೋಷಿ ಮತ್ತು ಉಮಾ ಭಾರತಿ. ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಪಿತೂರಿಯಲ್ಲಿ ಶಾಮೀಲಾಗಿದ್ದರು ಎಂಬ ಆಪಾದನಾ ಪಟ್ಟಿ ಅವರ ಮೇಲಿದೆ. ಆದರೆ ಬಿಜೆಪಿ ಇವರ ಮೇಲಿರುವುದು 'ರಾಜಕೀಯ' ಕೇಸು, ಇದು ಭ್ರಷ್ಟಾಚಾರದ ಆಪಾದನಾ ಪಟ್ಟಿಗಳಿಗಿಂತ ಭಿನ್ನವಾದದ್ದು ಎಂಬ ಅಸಂಬದ್ಧ ವ್ಯತ್ಯಾಸ ಕಾಣಲು ಪ್ರಯತ್ನಿಸುತ್ತಿದೆ.

ಈ ರೀತಿ ವ್ಯತ್ಯಾಸ ಕಾಣುವುದೇ ಒಂದು ಕ್ರಿಮಿನಲ್ ಕ್ರಮ ಎಂದು 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಟಿಪ್ಪಣಿ ಮಾಡಿದೆ. ಬಾಬ್ರಿ ಮಸೀದಿಯ ಧ್ವಂಸ ನಮ್ಮ ದೇಶ, ನಮ್ಮ ಸಂವಿಧಾನ, ನಮ್ಮ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವದ ಆಧುನಿಕ ಭಾರತವನ್ನು ವಿಕಾಸಗೊಳಿಸಿದ ಮೂಲಭೂತ ಮೌಲ್ಯಗಳ ವಿರುದ್ಧ ಎಸಗಿರುವ ಒಂದು ಅಪರಾಧ - ಇದರ ಪರಿಣಾಮವಾಗಿ ಸಾವಿರಾರು ಮುಗ್ಧರು ಪ್ರಾಣ ಕಳಕೊಂಡರು, ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ-ಪಾಸ್ತಿ, ವ್ಯಾಪಾರ ವಹಿವಾಟು ನಷ್ಟವಾದವು. ಆದರೂ ಬಿಜೆಪಿ ಇದು ಭ್ರಷ್ಟಾಚಾರದಂತೆ ಅಪರಾಧವಲ್ಲ ಎನ್ನುವ ಹಮ್ಮು ತೋರುತ್ತಿದೆ.

ಬೂಟಾಸಿಂಗ್ ಹೋದರು,
ಬೇರೆ ಎಲ್ಲರೂ ಹೋಗಬೇಕು.

ಜನಗಳಿಗೆ ಒಂದು ಶುದ್ಧ ಆಡಳಿತ ನೀಡುವೆನೆಂಬ ತನ್ನ ಆಶ್ವಾಸನೆಯ ಬಗ್ಗೆ ಬಿಜೆಪಿಗೆ ಲವಲೇಶವಾದರೂ ಪ್ರಾಮಾಣಿಕತೆ ಇದ್ದರೆ ಈ ಎಲ್ಲಾ ಮಂತ್ರಿಗಳನ್ನು ಸಂಪುಟದಿಂದ ಕೈ ಬಿಡಬೇಕು ಎಂದು ಸಿಪಿಐ(ಎಂ) ಆಗ್ರಹಪಡಿಸಿದೆ.

ಇದರಲ್ಲೂ ಅಡ್ವಾಣಿಯವರ ಕೇಸಂತೂ ಅತಿ ಗಂಭೀರವಾಗಿದೆ. ಏಕೆಂದರೆ ಕೇಂದ್ರ ಗೃಹಮಂತ್ರಿಯಾಗಿ ಬಾಬ್ರಿ ಮಸೀದಿ ಧ್ವಂಸದಂತಹ ಕಾನೂನು ಬಾಹಿರ ಕೃತ್ಯಗಳ ತನಿಖೆ ಮಾಡುವ ಇಲಾಖೆಯ ಮುಖ್ಯಸ್ಥರೇ ಅವರು. ಅವರೇ ಆಪಾದಿತರೂ ಕೂಡಾ! ಅವರನ್ನು ಸಂಪುಟದಲ್ಲಿಟ್ಟುಕೊಂಡು ವಾಜಪೇಯಿಯವರ ಸರಕಾರ ಸಂಸದೀಯ ಪ್ರಜಾಪ್ರಭುತ್ವ ಮತ್ತು ಸಾರ್ವಜನಿಕ ಜವಾಬುದಾರಿಕೆಯ ಅತಿ ಕೆಟ್ಟ ಅಪಹಾಸ್ಯವಾಗಿ ಬಿಟ್ಟಿದೆ ಎಂದು ಸಿಪಿಐ(ಎಂ) ಹೇಳಿದೆ.

ಈ ಆಧಾರದಲ್ಲಿ ಎಐಎಡಿಎಂಕೆ ಮುಖ್ಯಸ್ಥರು ಹೇಳುತ್ತಿರುವುದು ಸರಿ. ಬೂಟಾಸಿಂಗ್ ಕೊನೆಗೂ ಹೋದರು. ಇತರರು ಎಲ್ಲರೂ ಕೂಡಾ ಹೋಗಲೇಬೇಕು.

ಸರಕಾರದ ಕೆಲಸ ಆಳುವಂತದ್ದು. ಅದು ಒಳ್ಳೆಯದಿರಬಹುದು, ಕೆಟ್ಟದಿರಬಹುದು, ಸಾಮಾನ್ಯವಿರಬಹುದು. ಆದರೆ ಈ ಸರಕಾರ ಆಡಳಿತದ ಜವಾಬ್ದಾರಿ ಕೂಡಾ ತನಗಿಲ್ಲ ಎಂಬಂತೆ ವರ್ತಿಸುತ್ತಿದೆ. ಹೇಗಾದರೂ ಮಾಡಿ ಅಧಿಕಾರಕ್ಕೆ ಅಂಟಿಕೊಂಡು ಅಧಿಕಾರದ ವಿವಿಧ ಅಂಗಗಳಲ್ಲಿ ತೂರಿಕೊಂಡು ಅಂತಿಮವಾಗಿ ತನ್ನ ಬಚ್ಚಿಟ್ಟ ಅಜೆಂಡಾ 'ಹಿಂದೂರಾಷ್ಟ್ರ' ವನ್ನು ಸಾಧಿಸುವುದರಲ್ಲೇ ಅದಕ್ಕೆ ಆಸಕ್ತಿ. ಅದಕ್ಕಾಗಿ ರಾಜಕೀಯ ಅನೈತಿಕತೆಯ ಪ್ರಪಾತಕ್ಕೆ ಇಳಿಯಲೂ ಅದು ಸಿದ್ಧವಾಗಿದೆ.

ಈ ಎಲ್ಲದರ ನಡುವೆಯೂ ಅದು ಇನ್ನಷ್ಟು ಜನ-ವಿರೋಧಿ ಆರ್ಥಿಕ ನೀತಿಗಳ ಹೊರೆಗಳನ್ನು ಹಾಕುತ್ತಿದೆ. ವಿಶ್ವಾಸಾರ್ಹತೆಯನ್ನು, ಆಡಳಿತ ಸಾಮರ್ಥ್ಯವನ್ನು ತ್ವರಿತವಾಗಿ ಕಳಕೊಳ್ಳುತ್ತಿರುವ ಒಂದು ಸರಕಾರ ಇಂತಹ ನೀತಿಗಳನ್ನು ಹೇರಲು ಬಿಡಬಾರದು ಎಂದು ಅಭಿಪ್ರಾಯ ಪಟ್ಟಿರುವ ಸಿಪಿಐ(ಎಂ) ಇದನ್ನು ಜನ ಬಲವಾಗಿ ಪ್ರತಿರೋಧಿಸಬೇಕು ಎಂದು ಕರೆ ನೀಡಿದೆ.

ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ?

ಎಸ್.ಕೆ.ಉಪಾಧ್ಯಾಯ

ಬೀದರ್-ಗುಲ್ಬರ್ಗ ಜಿಲ್ಲೆಗಳಲ್ಲಿ ಬೆಳೆ ಹಾನಿಯಿಂದಾಗಿ ಹಲವಾರು ರೈತರು ಆತ್ಮಹತ್ಯೆಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಆತ್ಮ ಹತ್ಯೆಯಂಥ ಭೀಕರವಾದ ಹೀನಾಯ ಕೃತ್ಯಕ್ಕೆ ತನ್ನ ಜೀವವನ್ನೆ ಒಳಪಡಿಸಿಕೊಳ್ಳಲು ನೆಮ್ಮದಿಯಿಂದ ತನ್ನ ಹೊಲ ನೋಡಿಕೊಳ್ಳುತ್ತಿರುವ ನಿರಪರಾಧಿ ರೈತ ಯಾಕೆ ಮನಸ್ಸು ಮಾಡುತ್ತಿದ್ದಾನೆ ಎಂಬುದರ ಕುರಿತು ಸತ್ಯಾಂಶವನ್ನು ಕಂಡುಕೊಂಡು ಅದಕ್ಕೆ ಪರಿಹಾರ ಒದಗಿಸಲು ಪ್ರಯತ್ನಿಸದೆ ಬಡರೈತರ ಆತ್ಮಹತ್ಯೆಯನ್ನು ರಾಜಕೀಯಕರಣ ಗೊಳಿಸುವ ದುಸ್ಸಾಹಸಕ್ಕೆ ಹೊರಟಿದ್ದಾರೆ ಕಾಂಗ್ರೆ ಮತ್ತು ಬಿಜೆಪಿ ಮುಖಂಡರು. ಈ ವರ್ಷ ಲೋಕ ಸಭೆ ಚುನಾವಣೆ ನಡೆಯುತ್ತಿರುವಾಗಲೇ ಬೀದರ್ ಗುಲ್ಬರ್ಗ ಜಿಲ್ಲೆಗಳಲ್ಲಿ ರೈತರು ಬೆಳೆ ಹಾನಿ ಮತ್ತು ಸಾಲದ ಭಾರದಿಂದಾಗಿ ಆತ್ಮ ಹತ್ಯೆ ಮಾಡಿಕೊಂಡ ಘಟನೆ ನಡೆಯಿತು ಮುಂದೆ ಅದು ರಾಯಚೂರು, ಧಾರವಾಡ ಜಿಲ್ಲೆಗಳಿಗೂ ಹಬ್ಬಿತು. ತೊಗರಿ, ಸೂರ್ಯಕಾಂತಿ, ಹತ್ತಿ ಜೋಳ ಮಾತ್ರವಲ್ಲದೆ ಧಾರವಾಡ ಜಿಲ್ಲೆಯ ಬ್ಯಾಡಗಿಯಲ್ಲಿ ಮೆಣಸಿನಕಾಯಿ ಬೆಳೆ ನಾಶವಾಗಿ ರೈತರೆಲ್ಲ ಕಂಗಾಲಾಗಿದ್ದಾರೆ.

ಸರಕಾರದ ಹೇಳಿಕೆ ಪ್ರಕಾರ ರಾಜ್ಯದಲ್ಲಿ 107 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಿದ್ದು ಅದರಲ್ಲಿ ಕೇವಲ 71.6 ಲಕ್ಷ ಹೆಕ್ಟೇರಿನಲ್ಲಿ ಮುಂಗಾರು ಬೆಳೆ ಬೆಳೆಯಲಾಗುತ್ತಿದೆ. ಮಳೆ ಬಾರದೆ ಇರುವುದರಿಂದ 950 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಂಗಾರು ಬಿತ್ತನೆಯನ್ನೇ ಮಾಡಿಲ್ಲ. ಬರಗಾಲದಿಂದ ಸುಮಾರು 17.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಸಂಪೂರ್ಣ ನಾಶವಾಗಿದ್ದು ಅಧಿಕ ಮಳೆಯಿಂದ 4.5 ಲಕ್ಷ ಹೆಕ್ಟಾರಿನಲ್ಲಿ ಬೆಳೆ ಹಾನಿಯಾಗಿದೆ. ಇದರಲ್ಲಿ ಶೇ 90 ರಷ್ಟು ಬೆಳೆ ಕಲ್ಬುರ್ಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ನಷ್ಟಕ್ಕೆ ಒಳಗಾಗಿದೆ. ರಾಜ್ಯದಲ್ಲಿ 4.65 ಲಕ್ಷ ಹೆಕ್ಟಾರ್ ಪ್ರದೇಶದಲ್ಲಿ ಹಿಂಗಾರು ಬೆಳೆ 2.41 ಲಕ್ಷ ಹೆಕ್ಟಾರ್ ಪ್ರದೇಶದಲ್ಲಿ ಮುಂಗಾರು ಬೆಳೆ ಅಧಿಕ ಮಳೆಯಿಂದ ಹಾನಿ ಗೊಳಗಾಗಿದೆ. ಅನಾವೃಷ್ಟಿಯಿಂದ 17.65 ಲಕ್ಷ ಹೆಕ್ಟಾರ್ ಹಿಂಗಾರು ಬೆಳೆಗೆ ನಷ್ಟ ಉಂಟಾಗಿದೆ. ರಾಜ್ಯದ ಒಟ್ಟು ಕೃಷಿ ಭೂಮಿಯಲ್ಲಿ ಶೇ 23 ರಷ್ಟು ಪ್ರದೇಶ ನೀರಾವರಿಗೊಳ ಪಟ್ಟಿದೆ.


ರಾಜ್ಯದಲ್ಲಿ ಕೃಷಿಗೆ ಸಾಕಷ್ಟು ಉತ್ತಮ ಭೂಮಿ ಲಭ್ಯವಿದೆ. ಹತ್ತಿಪ್ಪತ್ತು ನದಿಗಳು ರಾಜ್ಯಾದ್ಯಂತ ನೀರು ತುಂಬಿ ಹರಿಯುತ್ತಿವೆ. ಆದರೆ ರಾಜ್ಯದ ಬಹುಭಾಗ ರೈತರೆಲ್ಲ ನೀರಿನ ಬವಣೆಯಿಂದ ಬಳಲುತ್ತಿದ್ದಾರೆ. ಬೀದರ್-ಗುಲ್ಬರ್ಗ ಜಿಲ್ಲೆಗಳಲ್ಲಿ ಹಾಗೆಯೇ ರಾಯಚೂರು ಬಿಜಾಪುರ ಜಿಲ್ಲೆಗಳಲ್ಲಿ ಕೂಡ ರೈತ ಮೂರು ಮುಖ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ. 1). ನದಿಗಳಲ್ಲಿ ನೀರಿದ್ದೂ ಕೃಷ್ಣ ಕಾರಂಜ ಮೊದಲಾದ ಯೋಜನೆಗಳಿಂದ ರೈತನಿಗೆ ನೀರು ಲಭ್ಯವಾಗದಿರುವುದು. 2) ಅಕಾಲಿಕ ಮಳೆ 3) ನಿರುಪಯೋಗಿ ಬೀಜ, ಗೊಬ್ಬರ, ಕ್ರಿಮಿ ನಾಶಕ ಹಾಗೂ ಸಾಲ ನೀಡುವಿಕೆ ಮತ್ತು ವಸೂಲಿಯಲ್ಲಿ ಅವ್ಯವಸ್ಥೆ. ಈ ಸಮಸ್ಯೆಗಳ ಕುರಿತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಕರ್ನಾಟಕ ಪ್ರಾಂತ ರೈತ ಸಂಘಗಳು ನಿರಂತರ ಹೋರಾಟ ನಡೆಸುತ್ತಲೇ ಬಂದಿವೆ. ಸರಕಾರಕ್ಕೆ ಎಚ್ಚರಿಕೆ ಕೊಡುತ್ತಲೇ ಬಂದಿವೆ. ಕಳೆದ 35-40 ವರ್ಷಗಳಿಂದಲೂ ಈ ಭಾಗದ ಮುಖ್ಯ ನೀರಾವರಿ ಯೋಜನೆಗಳತ್ತ ಸರಕಾರಗಳು ಗಮನ ಹರಿಸದೆ ರೈತ ಸಮುದಾಯಕ್ಕೆ ದ್ರೋಹ ಬಗೆದಿವೆ. ನೀರಾವರಿ ಯೋಜನೆಗಳು ಪೂರ್ಣಗೊಂಡಿದ್ದರೆ ಸದಾಕಾಲ ಬರಗಾಲಕ್ಕೆ ತುತ್ತಾಗುತ್ತಿರುವ ಈ ಜಿಲ್ಲೆಗಳ ರೈತರಿಗೆ ಸ್ವಲ್ಪ ಮಟ್ಟಿಗಾದರೂ ಸಹಾಯವಾಗುತ್ತಿತ್ತು. ಅತಿವೃಷ್ಟಿ-ಅನಾವೃಷ್ಟಿಗೆ ತುತ್ತಾಗುತ್ತಿರುವ ರೈತರಿಗೆ ಪರಿಹಾರಕ್ಕಾಗಿ ಕೇಂದ್ರ ರಾಜ್ಯಗಳು ಸೇರಿ ಪ್ರತ್ಯೇಕ ನೀತಿ ರೂಪಿಸಬೇಕು, ಅಸಮರ್ಪಕ ಮತ್ತು ಅಪಾಯಕಾರಿ ಬೀಜ, ಗೊಬ್ಬರ, ಕ್ರಿಮಿನಾಶಕಗಳನ್ನು ಒದಗಿಸುತ್ತಿರುವ ಕಂಪನಿಗಳ ಮೇಲೆ ತೀವ್ರಕ್ರಮ ಕೈಗೊಂಡು, ಸರಕಾರವೇ ಇವುಗಳನ್ನು ಮಾರುವ ವ್ಯವಸ್ಥೆ ಮಾಡಬೇಕು. ತನ್ನ ಕೃಷಿಯ ಸಾಲಕ್ಕಾಗಿ ರೈತ ಖಾಸಗಿ ಬಡ್ಡಿ ವ್ಯವಹಾರಗಳನ್ನು ಅವಲಂಬಿಸುವಂತೆ ಮಾಡದೆ, ಸಹಕಾರಿ ಬ್ಯಾಂಕುಗಳ ಮೂಲಕ ಕಡಿಮೆ ಬಡ್ಡಿಯಲ್ಲಿ ಸಾಲ ಸಿಗುವಂತಾಗ ಬೇಕು ಮತ್ತು ಆತ ಪ್ರಾಕೃತಿಕ ವಿಕೋಪಕ್ಕೊಳಗಾಗಿ ಸಾಲ ತೀರಿಸುವ ಪರಿಸ್ಥಿತಿ ಯಲ್ಲಿಲ್ಲದಿದ್ದರೆ ಸಾಲ ಮರುಪಾವತಿಗೆ ಕಾಲಾವಕಾಶ ಮಾಡಿಕೊಡಬೇಕು. ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಎಷ್ಟು ಪರಿಹಾರ ಕೊಡಬೇಕೆಂಬ ವಿಷಯಕ್ಕೆ ಮಾತ್ರ, ಕಾಂಗ್ರೆಸ್, ಬಿ.ಜೆ.ಪಿ. ಮುಖಂಡರು ವಿಧಾನ ಸಭೆಯ ಒಳಗೆ ಮತ್ತು ವಿಧಾನ ಸಭೆಯ ಹೊರಗೆ ಗುಲ್ಲೆಬ್ಬಿಸುತ್ತಿದ್ದಾರೆ; ಗಲಾಟೆ ಮಾಡುತ್ತಿದ್ದಾರೆ. ಆದರೆ ಈ ಭಾಗದ ರೈತ ಸಮುದಾಯ ಕಳೆದ ಹಲವಾರು ವರ್ಷಗಳಿಂದಲೂ ಎದುರಿಸುತ್ತಾ ಬರುತ್ತಿರುವ ಮೇಲೆ ವಿವರಿಸಿದ ಸಮಸ್ಯೆಗಳ ಕುರಿತು ಚಕಾರ ಕೂಡಾ ಎತ್ತುತ್ತಿಲ್ಲ. ಬಿ.ಜೆ.ಪಿ. ಕಾಂಗ್ರೆಸ್ ಪಕ್ಷಗಳು ಮಾತ್ರವಲ್ಲ, ಆಳುವ ಜನತಾದಳ ಸರಕಾರ ಕೂಡಾ

ಪುಟ 6 ನೋಡಿ

ಖಾಸಗೀಕರಣ - ಜಾಗತೀಕರಣ - ಉದಾರೀಕರಣ ನೀತಿಗಳನ್ನು ಸೋಲಿಸಿ

ಕೋಮುವಾದವನ್ನು ಹಿಮ್ಮೆಟ್ಟಿಸಿ

ಭ್ರಷ್ಟಾಚಾರವನ್ನು ಪ್ರತಿಭಟಿಸಿ



ಮೇ ದಿನ

ಕರ್ನಾಟಕದ ಸಮಸ್ತ ಶ್ರಮಜೀವಿಗಳಿಗೆ
'ಐಕ್ಯರಂಗ'ದ ಶುಭಾಶಯಗಳು



ಭಾರತೀಯ ವಿಮೋಚನಾಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ. ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

1930 ರ ದಶಕದಲ್ಲಿ ಹಾಜೊಂಗ್ ಬುಡಕಟ್ಟು ಜನರ ಆಂದೋಲನ ಆರಂಭವಾಗಿದ್ದ ಮೈಮನ್‌ಸಿಂಗ್‌ನಲ್ಲಿ ಈಗ ಗಾರೋ ಗುಡ್ಡಗಳ ದಕ್ಷಿಣ ಭಾಗದಲ್ಲಿ ಈ ಹೋರಾಟ ಹರಡಿತು. ಇಲ್ಲಿ ಹೋರಾಟ ಜೋತೇಗಾರರ ವಿರುದ್ಧವಾಗಿರಲಿಲ್ಲ, ಸುಸಾಂಗ್ ಜಮೀನ್ದಾರರ ವಿರುದ್ಧವಾಗಿತ್ತು. ಜನವರಿ 21, 1947 ರಂದು ಗಾರೋನಿಂದ ಗಾಡಿ ತುಂಬಿಸಿ ಧಾನ್ಯ ಒಯ್ಯುತ್ತಿದ್ದ ಜಮೀಂದಾರರ 'ಮುಹರಿ' ಯ ಮೇಲೆ ಹಾಜೊಂಗ್ ಬುಡಕಟ್ಟು ಜನ ಧಾಳಿ ಮಾಡಿದರು. ಇದಕ್ಕೆ ಪ್ರತಿಯಾಗಿ ಪೋಲೀಸರು ನಡೆಸಿದ ಧಾಳಿ, ಆ ಕಾಲದಲ್ಲಿ ಬುಡಕಟ್ಟು ಮಹಿಳೆಯರ ಮೇಲೆ ನಡೆಸಲು ಪ್ರಯತ್ನಿಸಿದ ಅತ್ಯಾಚಾರಗಳ ವಿರುದ್ಧ ಈ ಬುಡಕಟ್ಟು ಜನ ವೀರಾವೇಶದಿಂದ ಹೋರಾಡಿದರು. ರೈತ ಮಹಿಳಾ ಮುಖಂಡರಾದ ಲಾಕ್ಮೋಣಿ ಸಿಂಹಿಣಿಯಂತೆ ಪೋಲೀಸರ ಮೇಲೆ ಎರಗಿದಳು. ಇತರರೂ ಸೇರಿಕೊಂಡು ಪೋಲೀಸರ ರೈಫಲ್ ಕಿತ್ತುಕೊಂಡು ಓಡಿಸಿದರು.

ಮರುದಿನ ಪೂರ್ವ ಗಡಿ ರೈಫಲ್ಸ್ ಪಡೆಯ ಸೈನಿಕರನ್ನು ಕಳಿಸಿ ಬ್ರಿಟಿಶರು ಭಯೋತ್ಪಾದನೆ ನಡೆಸಿದರು. ಮನೆಗಳನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಆದರೆ ಬುಡಕಟ್ಟಿನ ಯಾವುದೇ ಮುಖಂಡನನ್ನು ಬಂಧಿಸಲು ಪೋಲೀಸರಿಗಾಗಲಿಲ್ಲ.

ತೆಭಾಗಾ ಭಾಗ ಬೆಳೆಗಾರರ ಬೇಡಿಕೆಯಾಗಿದ್ದರೂ, ಕೃಷಿ ಕೂಲಿಕಾರರಿಗೆ ಈ ಬೇಡಿಕೆಯಿಂದ ಪ್ರಯೋಜನವಿಲ್ಲದಿದ್ದರೂ ದೊಡ್ಡ ಸಂಖ್ಯೆಯಲ್ಲಿ ಅವರು ಈ ಆಂದೋಲನದಲ್ಲಿ ಭಾಗವಹಿಸಿದರು. ಹೆಚ್ಚಿನ ಸ್ವಯಂಸೇವಕರು ಕೃಷಿಕೂಲಿಕಾರರ ವಿಭಾಗದಿಂದಲೇ ಬಂದಿದ್ದರು.

ನಿರ್ದಯ ದಬ್ಬಾಳಿಕೆ ನಡೆಸಿ ಆ ಹೋರಾಟವನ್ನು ಸದ್ಯಕ್ಕೆ ದಮನ ಮಾಡಿದರೂ ನಂತರ ಹಲವು ಪ್ರದೇಶಗಳಿಗೆ 2/3 ಭಾಗ ಪಾಲನ್ನು ಒಪ್ಪಲಾಯಿತು. ದೇಶ ವಿಭಜನೆಯ ನಂತರ ಪಶ್ಚಿಮಬಂಗಾಳದಲ್ಲಿ, ಅತ್ತ ಪೂರ್ವ ಪಾಕಿಸ್ತಾನದಲ್ಲೂ ಈ ಬಗ್ಗೆ ಶಾಸನ ತರಬೇಕಾಗಿ ಬಂತು.

ಇಷ್ಟೆ ಅಲ್ಲ, ಈ ರೈತ ಹೋರಾಟದ ಕೊಡುಗೆ ಕಲ್ಕತ್ತಾದಲ್ಲಿ ಭೀಕರವಾದ ಹತ್ಯೆ, ನೋವಾಖಲಿಯಲ್ಲಿ ಕೋಮು ಹತ್ಯಾಕಾಂಡ ನಡೆದಾಗ ಈ ಕೋಮು ವಿಷ ಗ್ರಾಮಾಂತರ ಬಂಗಾಳಕ್ಕೆ ಹರಡದಂತೆ ತಡೆಯಲು ಸಾಧ್ಯವಾದದ್ದು ತೆಭಾಗಾ ಹೋರಾಟದಲ್ಲಿ ಬೆಸೆದ ಹಿಂದೂ ಮುಸ್ಲಿಂ ರೈತ-ಕೃಷಿಕೂಲಿಕಾರರ ಐಕ್ಯತೆಯಿಂದಾಗಿ.

ಹಸ್ನಾಬಾದ್ ಇಂತಹ ಐಕ್ಯತೆಗೆ ಒಂದು ಜ್ವಲಂತ ಉದಾಹರಣೆ. ನೋವಾಖಲಿಯಲ್ಲಿ ಕೋಮುಗಲಭೆ ನಡೆಸಿದವರು ಹಸ್ನಾಬಾದ್ ಪ್ರವೇಶಿಸಲು ಪ್ರಯತ್ನಿಸಿದಾಗ ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾದ ಕರೆಯ ಮೇರೆಗೆ 10 ಸಾವಿರ ಹಿಂದೂ ಮುಸ್ಲೀಂ ಸ್ವಯಂಸೇವಕರು ಲಾಠಿಗಳಿಗೆ ಕೆಂಬಾವುಟ ಕಟ್ಟಿಕೊಂಡು ದಂಗೆಕೋರರನ್ನು ಎದುರಿಸಿ ಹಿಮ್ಮೆಟ್ಟಿಸಿದರು - ಕೋಮುಜ್ವಾಲೆ ಹರಡದಂತೆ ತಡೆದರು.

ಅತ್ತ ಕೋಮುಗಲಭೆ ಆವರಿಸಿದ್ದ ಕಲ್ಕತ್ತೆಯಲ್ಲೂ ಕಾರ್ಮಿಕರು, ಅದರಲ್ಲೂ ಟ್ರಾಮ್ ವೇ ಕಾರ್ಮಿಕರು ನಿರಾಸೆಯ ಕಾರ್ಗತ್ತಲಲ್ಲಿ ಆಶಾದೀಪಗಳಂತೆ ಕೆಲಸ ಮಾಡಿದರು. ಇಬ್ಬರು ಟ್ರಾಂ ವೇ ಕಾರ್ಮಿಕರಾದ ರೆರುಖಾನ್ ಮತ್ತು ಚತುರ್ ಅಲಿ ರಾಜಾಬರುಖಾರ್ ಪ್ರದೇಶದಲ್ಲಿ ಹಲವಾರು ಹಿಂದೂ ಕಾರ್ಮಿಕರ ಜೀವ ಉಳಿಸಿದರೆ ಆ ಕಡೆ ದೋಲಕ್ ಲೇನ್‌ನಲ್ಲಿ ಇನ್ನಿಬ್ಬರು ಟ್ರಾಮ್ ವೇ ಕಾರ್ಮಿಕರಾದ ಬಿಜೋಯ್ ಚಕ್ರವರ್ತಿ ಮತ್ತು ರಾಜೆನ್ ಪಹಾರಿ ಹಲವು ಮುಸ್ಲಿಮರ ಜೀವ ಉಳಿಸಿದರು.

ಇಂತಹ ಕೋಮುಗಲಭೆಯ ವಾತಾವರಣದಲ್ಲೂ ಜನವರಿ 21, 1947 ಹಿಂದೂ-ಮುಸ್ಲಿಂ ಟ್ರಾಮವೇ ಕಾರ್ಮಿಕರು ಒಟ್ಟಾಗಿ 85 ದಿನಗಳ ಸಾರ್ವತ್ರಿಕ ಮುಷ್ಕರ ನಡೆಸಿದರು.

ಯುದ್ಧಾನಂತರ ಭುಗಿಲೆದ್ದ ಹೋರಾಟಗಳಲ್ಲಿ ಇನ್ನೊಂದು ಮುಖ್ಯವಾದ ಹೋರಾಟವೆಂದರೆ ಪುನ್ನಪ್ರಾ-ವಾಯಲಾರ್ ಹೋರಾಟ. ತಿರುವಾಂಕೂರು ದೇಶೀ ರಾಜರ ಅಧೀನವಿದ್ದ ಒಂದು ಸಂಸ್ಥಾನವಾಗಿತ್ತು. ಅಲ್ಲಿಯ ದೀವಾನರಾಗಿದ್ದ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್ ದಬ್ಬಾಳಿಕೆಗೆ ಕುಖ್ಯಾತನಾಗಿದ್ದಾತ. ತಿರುವಾಂಕೂರಿನಲ್ಲಿ ಬರ ಪರಿಸ್ಥಿತಿಯಿತ್ತು. ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ತಿರುವಾಂಕೂರು ಸಂಸ್ಥಾನದ ಸರಕಾರದ ವಿರುದ್ಧ ಕಮ್ಯುನಿಸ್ಟರು ಉಪವಾಸ ಮುಷ್ಕರ ಆರಂಭಿಸಿದರು. ಅತ್ತ ಈ ಹಿಂದೆಯೂ ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಬೇಕೆಂಬ ಬೇಡಿಕೆಗೆ ಅಲ್ಲಿನ ಕಾರ್ಮಿಕ ವರ್ಗವೂ ಬೆಂಬಲ ನೀಡಿತ್ತು. ದೀವಾನ ಸಿ.ಪಿ. ರಾಮಸ್ವಾಮಿ ಅಯ್ಯರ್ ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಒಪ್ಪುವ ಹೆಸರಲ್ಲಿ ತಿರುವಾಂಕೂರು ಅಮೇರಿಕನ್ ಮಾದರಿಯ ಅಂದರೆ ಶಾಸಕಾಂಗಕ್ಕೆ ಜವಾಬುದಾರಿಯಿಲ್ಲದ ಕಾರ್ಯಾಂಗವಿರುವ ಒಂದು ಸಂವಿಧಾನ ಪಡೆಯುವುದು ಎಂದೂ, ತಿರುವಾಂಕೂರು ಸ್ವತಂತ್ರ, ಭಾರತದೊಂದಿಗೆ ಸೇರದೆ ಸ್ವತಂತ್ರ ಪ್ರಭುತ್ವವಾಗಿ ಮುಂದುವರೆಯುತ್ತದೆಂದೂ ಪ್ರಸ್ತಾಪವಿಟ್ಟರು. ಇದನ್ನು ತಿರುವಾಂಕೂರಿನ ಜನ ವಿರೋಧಿಸಿದರು. ಅವರ ವಿರೋಧಕ್ಕೆ ದನಿ ನೀಡುವ ಅಲ್ಲಿನ ಕಾರ್ಮಿಕರು ಈ ಎರಡು ಪ್ರಜಾಪ್ರಭುತ್ವ-ವಿರೋಧಿ ಪ್ರಸ್ತಾಪಗಳನ್ನು ವಿರೋಧಿಸಿ ಹೋರಾಟಕ್ಕಿಳಿದರು-"ಅಮೇರಿಕನ್ ಮಾದರಿ ಬೇಡವೇ ಬೇಡ", "ಸ್ವತಂತ್ರ, ತಿರುವಾಂಕೂರನ್ನು ಅರಬ್ಬಿ ಸಮುದ್ರಕ್ಕೆ ಎಸೆಯಿರಿ" ಎಂಬ ಘೋಷಣೆಗಳೊಂದಿಗೆ. ಪುನ್ನಪ್ರ ಮತ್ತು ವಾಯಲಾರ್ ಎಡ ಆಂದೋಲನ ಬಲವಾಗಿದ್ದ ಈ ಸಂಸ್ಥಾನದ ಎರಡು ಸ್ಥಳಗಳು. ಕಾರ್ಮಿಕರು ಪ್ರಜಾಪ್ರಭುತ್ವ ಬೇಡಿಕೆಗಳಿಗೆ ದನಿ ನೀಡಿದ್ದನ್ನು ಕಂಡು ರೇಗಿದ ದೀವಾನ ತೀವ್ರ ದಮನಕ್ಕಿಳಿದಿದ್ದ. ಅತ್ತ ಉಪವಾಸ ಸತ್ಯಾಗ್ರಹಕ್ಕಿಳಿದಿದ್ದವರ ಮೇಲೂ ದಮನ ಹರಿಯಬಿಟ್ಟ.

ಅಕ್ಟೋಬರ್ 26, 1946. ದೀವಾನನ ಸೇನೆ ವಾಯಲಾರ್ ಪ್ರವೇಶಿಸಲು ಎರಡು ಬಾರಿ ಪ್ರಯತ್ನಿಸಿ ವಿಫಲವಾಯಿತು. ಕೊನೆಗೆ ಅಕ್ಟೋಬರ್ 27ರ ನಸುಕಿನಲ್ಲಿ ಹರಡಿದ್ದ ಮಂಜಿನ ಪ್ರಯೋಜನ ಪಡೆದು 500 ಸೈನಿಕರು ಮೋಟಾರು ಲಾಂಚಿನಿಂದ ಬಂದು ವಾಯಲಾರ್ ಪ್ರವೇಶಿಸಿದರು. ನಂತರ ನಡೆದದ್ದು ಒಂದು ಮಿನಿ ಜಲಿಯನ್‌ವಾಲಾ ಬಾಗ್.. ಮೆಶಿನ್‌ಗನ್‌ಗಳಿಂದ ಗೋಳೀಬಾರ್ ಆರಂಭಿಸಿದ ದೀವಾನನ ಸೈನಿಕರು 800ಕ್ಕೂ ಹೆಚ್ಚು ರೈತರು, ಕಾರ್ಮಿಕರನ್ನು ಬಲಿತೆಗೆದುಕೊಂಡರು. ಹಿಂದೆಂದೂ ಅಲ್ಲಪುಳಾ ಇಂತಹ ಘೋರ ಘಟನೆ ಕಂಡಿರಲಿಲ್ಲ.

ಕಾರ್ಮಿಕರು ಸಣ್ಣ ಪುಟ್ಟ ಅಸ್ತ್ರಗಳೊಂದಿಗೆ ದೀವಾನನ ಪೋಲಿಸರು ಮಿಲಿಟರಿ ಹಾಗೂ ಗೂಂಡಾಗಳ ವಿರುದ್ಧ 'ವಾಯಲಾರ್ ರಕ್ತ ನಮ್ಮ ರಕ್ತ' ಎಂಬ ಘೋಷಣೆಯೊಂದಿಗೆ ಸೆಣಸಿದರು. ಈ ಹೋರಾಟವನ್ನು ದಮನ ಮಾಡಿಯೂ ಒಂದೇ ವರ್ಷದೊಳಗೆ ದೀವಾನ್ ಸಿ.ಪಿ. ರಾಮಸ್ವಾಮಿ ಅಯ್ಯರ್ ತಿರುವಾಂಕೂರ್ ಬಿಟ್ಟೋಡಬೇಕಾಗಿ ಬಂತು. ಅಲ್ಲಿಯ ಮಹಾರಾಜ ಸ್ವತಂತ್ರ ಭಾರತದಲ್ಲಿ ವಿಲೀನಗೊಳ್ಳಲು ಒಪ್ಪಬೇಕಾಗಿ ಬಂತು.

ಬೇರೆ ಹಲವು ಸಂಸ್ಥಾನಗಳಲ್ಲೂ, ಇನ್ನೇನು ಅಧಿಕಾರ ಹಸ್ತಾಂತರ ಸಮೀಪಿಸಿದೆ ಎಂದು ಅರಿತ ರಾಜ-ಮಹಾರಾಜರುಗಳು ಸಂಸ್ಥಾನಗಳ ಜನರ ಆಂದೋಲನಗಳ ವಿರುದ್ಧ ದಮನ ಹರಿಯ ಬಿಟ್ಟರು. ರಾಜಾಸ್ತಾನದ ಜೈಸಲ್ಮೇರ್‌ನಲ್ಲಿ ಆದಾಗಲೇ ಏಪ್ರಿಲ್ 1946ರಂದು ಜೈಲಿನಲ್ಲಿ ಸಾಗರಮಲ್ ಗೋಪೆ ಎಂಬ ಕಾರ್ಯಕರ್ತನನ್ನು ಗಲ್ಲಿಗೆ ಹಾಕಲಾಯಿತು. ಕಾಶ್ಮೀರದಲ್ಲಿ ಮಹಾರಾಜನ ಆದೇಶದ ಮೇರೆಗೆ ನ್ಯಾಶನಲ್ ಕಾನ್ಫರೆನ್ಸ್ ಮುಖಂಡ ಶೇಖ್ ಅಬ್ದುಲ್ಲಾರನ್ನು ಬಂಧಿಸಲಾಯಿತು. ಕಾಶ್ಮೀರ ಪ್ರವೇಶ ಮಾಡಲು ಪ್ರಯತ್ನಿಸಿದ ಜವಾಹರಲಾಲ್ ನೆಹರೂರನ್ನು ಕಾಶ್ಮೀರ ಮಹಾರಾಜನ ಪೋಲೀಸರು ಬಂಧಿಸಿದರು. ಕೆಲವು ರಾಜ-ಮಹಾರಾಜರು 'ಸ್ವತಂತ್ರ'ವಾಗಿರುವ ಕನಸು ಕಾಣಲಾರಂಭಿಸಿದರು.

(ಮುಂದುವರಿಯುವುದು.)

ಆಮದು, ರಫ್ತು ಅವರಿಗಾಗಿ - ನಮ್ಮದು ಸ್ವದೇಶೀ ನೀತಿ

ಆರ್ಥಿಕ ಟಿಪ್ಪಣಿ

ಜಿ.ಎಸ್.ಮಣಿ

ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರ ಹೊಸ ಆಮದು ರಫ್ತು ನೀತಿಯನ್ನು ಪ್ರಕಟಿಸಿದೆ. ಈ ನೀತಿಯ ತಿರುಳು ಮೇಲೆ ಹೇಳಿದಂತಿದೆ. ಅಮೇರಿಕನ್ ಸಾಮ್ರಾಜ್ಯ ಶಾಹಿ ಐ.ಎಂ.ಎಫ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆಗಳು ನೀಡಿದ ನಿರ್ದೇಶನಗಳ ಜಾರಿಯಂತಿರುವ ಈ ನೀತಿ ದೇಶಕ್ಕೆ ಯಾವುದೇ ಲಾಭ ತರುವ ಬದಲು ಹಾನಿಕಾರಕವಾಗಿದೆ. ಇದು ಸ್ವದೇಶೀ ನೀತಿಗೆ ಅನುಗುಣವಾಗೇ ಇದೆ ಎಂದು ಬೇರೆ ಕೊಂಡಾಟ.

ಕೇಂದ್ರ ವಾಣಿಜ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಹೊಸ ಆಮದು ರಫ್ತು ನೀತಿಯನ್ನು ಪೋಷಿಸಿ ಬಿಜೆಪಿ ಸರ್ಕಾರ ಯಾರಿಗಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಒಡೆದು ಹೇಳಿದ್ದಾರೆ. ಮುಕ್ತ ವ್ಯಾಪಾರಕ್ಕಾಗಿ ಸುಧಾರಣೆ ಮಾಡುವ ಮಾತನಾಡಿರುವ ಈ ನೀತಿ ದೇಶದ ಆರ್ಥಿಕವನ್ನು ಅಧೋಗತಿಗೆ ಕೊಂಡೊಯ್ಯುತ್ತದೆ ಎಂಬ ಬಗ್ಗೆ ಸಂಶಯವೇ ಬೇಡ.

ದೇಶದೊಳಗೆ ಅಪಾರ ವಿರೋಧ ವಿದ್ದರೂ ಅಂದಿನ ನರಸಿಂಹರಾಯರ ಸರ್ಕಾರ 1994 ರಲ್ಲಿ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿತ್ತು. ಆದರೆ ಆ ಒಪ್ಪಂದದ ಪ್ರಕಾರವೇ ದೇಶದ ಆರ್ಥಿಕ ನೀತಿಗಳನ್ನು ಬದಲಾಯಿಸುವುದು ಸಾಧ್ಯವಾಗಿರಲಿಲ್ಲ. ವಿದೇಶೀ ವ್ಯಾಪಾರದಲ್ಲಿ ಹಲವು ಅಡೆತಡೆಗಳಿದ್ದವು. ಇವು ನಮ್ಮ ದೇಶದ ಹಿತಾಸಕ್ತಿಗಳನ್ನು ಕಾಯುವ ಸಲುವಾಗಿ ಮಾಡಿದಂತಹವು. ಅವುಗಳನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲ. ಆದ್ದರಿಂದಲೇ ಆ ಬದಲಾವಣೆಗಳು ಬರಲಿಲ್ಲ. ಸಾಮ್ರಾಜ್ಯಶಾಹಿ ದೇಶಗಳು ಭಾರತದ ವಿರುದ್ಧ ವಿಶ್ವ ವ್ಯಾಪಾರ ಸಂಸ್ಥೆಗೆ ದೂರು ಕೊಂಡೊಯ್ದವು. ವಿಶ್ವ ವ್ಯಾಪಾರ ಸಂಸ್ಥೆಯಿಂದ ಭಾರತದ ಮೇಲೆ ಒತ್ತಡ ಬೆದರಿಕೆಗಳು ಬರತೊಡಗಿದವು. ಈ ಒತ್ತಡಗಳಿಗೆ ಮಣಿದೇ ಈ ಹೊಸ ಆಮದು ರಫ್ತು ನೀತಿಗಳನ್ನು ರೂಪಿಸಿ ಜಾರಿಗೆ ತರಲಾಗಿದೆ: ಈ ನೀತಿಗಳತ್ತ ಕಣ್ಣು ಹಾಯಿಸಿದರೆ ಗೊತ್ತಾಗಿಬಿಡುತ್ತದೆ ಅವು ಯಾರಿಗೆ ಅನುಕೂಲ ಮಾಡಿಕೊಡುವಂತಹವು ಎಂಬುದು.

- 340 ವಸ್ತುಗಳ ಮೇಲಿನ ಆಮದು ನಿರ್ಭಂಧಗಳ ಖಿಲಾಸೆ. ಅವು ಮುಕ್ತ ವಸ್ತುಗಳ ಪಟ್ಟಿಗೆ.
- 300 ವಸ್ತುಗಳ ಮೇಲೆ ಸುಂಕ ರಿಯಾಯಿತಿ ಯೋಜನೆ ಮುಂದುವರೆಯುವುದು.
- ಸುಂಕ ಅರ್ಹತೆ ಪಾಸ್ ಬುಕ್ ಯೋಜನೆಯಡಿಯ ಆಮದು ಸುಂಕ ಕಡಿತ.
- ಉಡುಪು, ಎಲೆಕ್ಟ್ರಾನಿಕ್ಸ್, ಕೃಷಿ ಮತ್ತು ಆಹಾರ ಸಂಸ್ಕರಣ ಘಟಕಗಳ ಹೊಸ್ತಿಲು ಮಿತಿ ಒಂದು ಕೋಟಿ ರೂಪಾಯಿಗೆ ಇಳಿತ.
- ಸಾಫ್ಟ್‌ವೇರ್‌ಗಳ ಮೇಲಿನ ಇಸಿಸಿಜಿ ಹೊಸ್ತಿಲು 10 ಲಕ್ಷ ರೂಪಾಯಿಗಳಿಗೆ ಇಳಿತ.
- ರಫ್ತು ಹೆಚ್ಚಿಸಲು 500 ದೊಡ್ಡ ಕಂಪನಿಗಳೊಂದಿಗೆ ಮಾತು ಕತೆ.
- ಲೈಸೆನ್ಸ್ ನೀಡುವ ಕಾರ್ಯಗಳ ವಿಕೇಂದ್ರೀಕರಣ ರಫ್ತು ಎಲೆಕ್ಟ್ರಾನಿಕ್ಸ್ ಘಟಕ, ರಫ್ತು ಸಂಸ್ಕರಣ ವಲಯದ ಎಲೆಕ್ಟ್ರಾನಿಕ್ಸ್ ಘಟಕಗಳ ಸವಕಳಿ ಮಿತಿ ಏರಿಕೆ.
- ಎಣ್ಣೆಕಾಳು ಮತ್ತು ಎಣ್ಣೆ ರಫ್ತು ಸಡಿಲು ಇತ್ಯಾದಿ.

ಹೀಗೆ ಈ ಎಲ್ಲ ನೀತಿಗಳ ಅಭಿವೃದ್ಧಿ ಹೊಂದಿದ ದೇಶಗಳ ವ್ಯಾಪಾರ ಮತ್ತು ಲಾಭವನ್ನು ಹೆಚ್ಚಿಸುವತ್ತ ರೂಪಿಸಿದ ಕ್ರಮಗಳು. ಕಡಿಮೆ ಬೆಲೆಗೆ ನಮ್ಮ ಸರಕುಗಳನ್ನು ವಿದೇಶಿಯರಿಗೆ ಮಾರಿ ದುಬಾರಿ ಬೆಲೆಗೆ ಅವರ ಸರಕುಗಳನ್ನು ನಾವು ಕೊಳ್ಳುವ ನೀತಿ ಇದು. ಅಷ್ಟೇ ಅಲ್ಲ, ಶ್ರೀಮಂತರ ಭೋಗಕ್ಕಾಗಿ ಬೇಕಾಗುವ ವಸ್ತುಗಳ ಆಮದೇ ಹೆಚ್ಚು. ನಮ್ಮಲ್ಲಿನ ಸರಕುಗಳಲ್ಲಿ ಯಾವುದು ಬೇಕೊ ಅದನ್ನು ಆಯ್ದುಕೊಳ್ಳುವ ಸ್ವಾತಂತ್ರ ಅವರಿಗೆ ಇದ್ದೇ ಇದೆ.

ಐ.ಎಂ.ಎಫ್ ವಿಶ್ವ ವ್ಯಾಪಾರ ಸಂಸ್ಥೆ ಅಮೇರಿಕ ಬಹುರಾಷ್ಟ್ರೀಯ ಕಂಪನಿಗಳು ಇವೆಲ್ಲ ಭಾಗತದ ಮೇಲೆ ತೀವ್ರ ಒತ್ತಡ ಹೇರಿ ಈ ನೀತಿಗಳನ್ನು ತಂದಿದ್ದಾರೆ.

ದೇಶೀ ಉದ್ದಿಮೆ ಮತ್ತು ಆರ್ಥಿಕ ಈ ನೀತಿಗಳಿಂದಾಗಿ ತೀವ್ರ ಹೊಡೆತ ತಿನ್ನಬೇಕಾಗುತ್ತದೆ. ಬಿಜೆಪಿಯ ಸ್ವದೇಶಿ ವಿದೇಶಿಯರ ಲಾಭಕ್ಕಾಗಿ ಎನ್ನೋಣವೆ?

ಸಾಮ್ರಾಜ್ಯ ಶಾಹಿಗಳನ್ನು ಎದುರಿಸಲಾರದ ಹೇಡಿತನ?

ಈ ಹೊಸ ಆಮದು ರಫ್ತು ನೀತಿ ಈ ಸಮಯದಲ್ಲೇ ಯಾಕೆ ಬಂತೆಂಬುದು ಕುತೂಹಲಕರ. ಮೇಲೆ ಹೇಳಿದಂತೆ ವಿಶ್ವ ವ್ಯಾಪಾರ ಸಂಸ್ಥೆ ಅಮೇರಿಕ ಯುರೋಪಿನ ಸಮುದಾಯ ಮತ್ತು ಐ.ಎಂ.ಎಫ್ ಇತ್ಯಾದಿಗಳ ಒತ್ತಡ ಭಾರತದ ಮೇಲೆ ತೀವ್ರವಾಗುತ್ತಲಿತ್ತು. ಜೊತೆಗೆ ಭಾರತದ ವಿರುದ್ಧ ಕ್ರಮಗಳನ್ನು ಕೈಗೊಳ್ಳುವ ಬೆದರಿಕೆಗಳೂ ಇದ್ದವು. ಇವೆಲ್ಲಕ್ಕೂ ಮಿಗಿಲಾಗಿ ವಿಶ್ವ ವ್ಯಾಪಾರ ಸಂಸ್ಥೆಯ ಸಮೀಕ್ಷೆ ಸಭೆ ಈಗ ನಡೆಯುತ್ತಿದೆ.

ಭಾರತದ ಮೇಲಿನ ಒತ್ತಡಗಳ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಈ ಸಭೆಯಲ್ಲಿ ತನ್ನನ್ನು ಸಮರ್ಥಿಸಿಕೊಳ್ಳುವ ಸಾಮ್ರಾಜ್ಯ ಶಾಹಿಗಳ ಕುಕೃತ್ಯಗಳನ್ನು ಬಯಲಿಗೆಳೆದು ಟೀಕಿಸುವ ಛಾತಿ ಇರಲಿಲ್ಲ. ತನ್ನನ್ನು ಇಂತಹ ಸನ್ನಿವೇಶದಿಂದ ರಕ್ಷಿಸಿಕೊಳ್ಳುವ ಸಲುವಾಗಿಯೇ ಇಂತಹ ನೀತಿಯನ್ನು ಅದು ಘೋಷಿಸಿದ್ದು. ಸ್ವದೇಶೀಯ ವೀರಾವೇಶದ ಮಿತಿ ಇದಿರಬಹುದೇ?

ಬಡವರಿಗೆ ಕಹಿ ಸಕ್ಕರೆ ಕೊಡಬೇಕು

ಇದು ಮಹಾಜನ್ ಸಮಿತಿಯ ವರದಿ. ಯಾವುದರ ಮೇಲೆ ಎಂದಿರಾ? ಸಕ್ಕರೆ ಬೆಲೆ ಹತೋಟಿ ತೆಗೆದು ಹಾಕುವ ಬಗ್ಗೆ ಸಕ್ಕರ ಉದ್ಯಮವನ್ನು ಹೇಗೆ ನಿರ್ಬಂಧ ಮುಕ್ತಗೊಳಿಸಬೇಕು ಎಂಬುದನ್ನು ಅಭ್ಯಸಿಸಿ ಈ ಸಮಿತಿ ವರದಿ ನೀಡಿದೆ. ಈ ವರದಿಯ ಮುಖ್ಯ ಅಂಶಗಳು ಕೆಳಗಿನಂತಿವೆ!

- ಸಕ್ಕರೆ ಬೆಲೆ ನಿಗದಿಪಡಿಸುವ ಪದ್ಧತಿಯನ್ನು ಎರಡು ವರ್ಷಗಳ ಅವಧಿಯಲ್ಲಿ ಸಂಪೂರ್ಣವಾಗಿ ತೆಗೆದು ಹಾಕಬೇಕು ಎಂಬುದು ವರದಿಯ ಮುಖ್ಯ ಅಂಶ. ಹೀಗೆ ಹತೋಟಿ ತೆಗೆದು ಹಾಕುವುದೆಂದರೆ ಮಾರುಕಟ್ಟೆಯೇ ಸಕ್ಕರೆ ಬೆಲೆಯನ್ನು ತೀರ್ಮಾನಿಸುತ್ತದೆ.
- ಎರಡನೇ ಮುಖ್ಯ ಅಂಶವೆಂದರೆ ರೇಶನ್ ಮೂಲಕ ಸಕ್ಕರೆ ವಿತರಣೆಯನ್ನು ನಿಲ್ಲಿಸಬೇಕು. ಇದರ ಅರ್ಥವೂ ಅಷ್ಟೇ. ಸಕ್ಕರೆ ಬಳಸುವವರು ಬಡವರಾಗಲಿ ಶ್ರೀಮಂತರಾಗಲಿ ಮಾರುಕಟ್ಟೆಯಿಂದಲೇ ಸಕ್ಕರೆ ಕೊಳ್ಳಲಿ ಎಂದು. ಬೆಲೆ ನಿಗದಿ ಪಡಿಸುವ ಪದ್ಧತಿಯನ್ನು ರದ್ದುಗೊಳಿಸಿದ ಕೂಡಲೇ ಸಕ್ಕರೆ ಬೆಲೆ ಗಗನಕ್ಕೇರಬಹುದು. ಅಲ್ಲಿ ಕಾಳ ಸಂತೆಕೋರರ ಅರ್ಭಟ ಹೆಚ್ಚಾಗಬಹುದು. ಆಗ ಬಡವರೆಲ್ಲಿ ಸಕ್ಕರೆ ಕೊಂಡು ಬಳಸಲು ಸಾಧ್ಯ? ಶ್ರೀಮಂತರು ಮಾತ್ರ ಸಕ್ಕರೆ ಬಳಸುವಂತಾಗುತ್ತದೆ.

ವರದಿ ಕಬ್ಬಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಮಾತ್ರ ಮುಂದುವರಿಸ ಬೇಕೆಂದು ಶಿಫಾರಸು ಮಾಡಿದೆ. ಹೊಸ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಈಗಿರುವ ಲೈಸನ್ಸ್ ಪದ್ದತಿಯನ್ನೇ ಮುಂದುವರಿಸ ಬೇಕೆಂದು ಅದು ಹೇಳಿದೆ. ವಾರ್ಷಿಕ ಒಂದು ದಶಲಕ್ಷ ಟನ್ನುಗಳ ರಫ್ತು ಕೋಟಾವನ್ನು ಸಹ ನಿಗದಿಪಡಿಸಹೇಕೆಂದಿದೆ ಅದು.

ಹೀಗೆ ದೇಶದ ಬಡಜನರಿಗೆ ಸಕ್ಕರೆ ದುಬಾರಿಯಾಗಿ ಕಹಿಯಾಗಬೇಕೆಂದು ಈ ಸಮಿತಿ ಬಯಸಿದೆ. ಉದಾರೀಕರಣದ ಜನವಿರೋಧಿ ನೀತಿಗಳನ್ನೇ ಈ ವರದಿಯೂ ಪ್ರತಿಬಿಂಬಿಸಿದೆ. ಇಂತಹ ವರದಿಯನ್ನು ಅನುಷ್ಠಾನಕ್ಕೆ ತರಲು ಕೇಂದ್ರದ ಬಿಜೆಪಿ ಸರ್ಕಾರ ಉತ್ಸುಕವಾಗಿರಬಹುದಲ್ಲವೆ?

ಹೆಚ್ಚಿನ ಉದಾರೀಕರಣದ ಭರವಸೆ

ಸಿನ್ಹಾ ಅಮೇರಿಕಕ್ಕೆ ಹೋಗಿ ಅಮೇರಿಕದ ಉದ್ಯಮಿಗಳಿಗೆ, ವ್ಯಾಪಾರಸ್ಥರಿಗೆ ಈ ಭರವಸೆ ನೀಡಿದ್ದಾರೆ. ಭಾರತ ಈಗಿನ ಉದಾರಿಕರಣದ ಗತಿಯನ್ನು ಹೆಚ್ಚಿಸುತ್ತದೆ. ಅದೇ ಸಮಯದಲ್ಲಿ ಭಾರತ ಆದ್ಯತೆಯ ವಲಯಗಳಲ್ಲಿ ವಿದೇಶೀ ಹೂಡಿಕೆಯನ್ನು ಬಯಸುತ್ತದೆ ಎಂದು ಅವರು ಹೇಳಿದ್ದಾರೆ ನಿಯಮಗಳನ್ನು ತೆಗೆದು ಹಾಕಿ ಖಾಸಗಿ ವಲಯವನ್ನು ಶಕ್ತಿಯುತ ಹೋಳಿಸುತ್ತದೆ ಎಂದು ಅವರು ಹೇಳಿದ್ದಾರೆ.

ಆದ್ಯತೆಯ ವಲಯವಲ್ಲದ ಆಹಾರ ದಂತಹ ಕ್ಷೇತ್ರಗಳಲ್ಲಿರುವ ವಿದೇಶೀ ಕಂಪನಿಗಳು ದೇಶದಿಂದ ಹೊರ ಹೋಗ ಬೇಕೆಂದು ಆದೇಶಿಸಲಾಗುವುದಿಲ್ಲ ಎಂಬ ಭರವಸೆಯನ್ನು ಅವರು ನೀಡಿದ್ದಾರೆ.

ವಿದೇಶಿ ಹೋಡಿಕೆಯನ್ನು ಪ್ರೋತ್ಸಾಹಿಸುವುದು ಸರ್ಕಾರದ ಉದ್ದೇಶ ಎಂದು ಅವರು ಹೇಳಿದ್ದಾರೆ.

ಹೀಗೆ ಹಿಂದಿನ ಕಾಂಗ್ರೆಸ್ ಸರ್ಕಾರದ ಎಲ್ಲ ಉದಾರೀಕರಣದ ನೀತಿಗಳನ್ನು ತಾವು ವಿರೋಧಿಸುತ್ತೇವೆಂಬ ಪೋಸು ಕೊಡುತ್ತ ಬಂದ ಬಿಜೆಪಿ ಈಗ ತನ್ನ ನಿಜವಾದ ಬಣ್ಣವನ್ನು ಬಯಲು ಮಾಡುತ್ತಿದೆ. ಮುಂಬರುವ ದಿನಗಳಲ್ಲಿ ಈ ಬಣ್ಣ ಇನ್ನೂ ಹೆಚ್ಚೆಚ್ಚು ಬಯಲಾಗುತ್ತದೆ ಅಲ್ಲವೆ?

ಐ.ಎಂ.ಎಫ್ ಧಣಿಯ ವಿಶ್ಲೇಷಣೆ

ಭಾರತದ ಆರ್ಥಿಕ ಬೆಳವಣಿಗೆ ಇನ್ನೂ ಹೆಚ್ಚು ಹಿಂದೆ ಬೀಳಲಿದೆ ಎಂದು ಐ.ಎಂ.ಎಫ್ ಹೇಳಿದೆ. ಅದರ ಪ್ರಕಾರ ಆರ್ಥಿಕ ಬೆಳವಣಿಗೆಯ ದರ ಶೇ 5.2 ರಷ್ಟಕ್ಕೆ ಇಳಿಯುತ್ತದೆ. ಕಳೆದ ಸಾಲಿನಲ್ಲಿ ಅಂದರೆ 1977 ರಲ್ಲಿ ಭಾರತದ ಬೆಳವಣಿಗೆ ದರ ಕುಸಿದದ್ದು ಈ ವರ್ಷದಲ್ಲಿ ಇನ್ನು ಹೆಚ್ಚು ಕುಸಿತ ಕಾಣಲಿದೆಯಂತೆ.

ಇದಕ್ಕೆ ಅದು ನೀಡಿರುವ ಕಾರಣ ಭಾರತದಲ್ಲಿನ ರಾಜಕೀಯ ಅನಿಶ್ಚಿತತೆ ಮತ್ತು ಹೆಚ್ಚಿನ ಬಡ್ಡಿ ದರ ಹಾಗೂ ಹೆಚ್ಚಿರುವ ಹಣಕಾಸು ಕೊರತೆ.

ಹಾಗೆ ಭಾರತದ ಸರ್ಕಾರ ಐ.ಎಂ.ಎಫ್. ಹೇಳಿದ ನೀತಿಗಳನ್ನೇ ಅನುಸರಿಸಿಕೊಂಡು ಬಂದಿದೆ. ಆದ್ದರಿಂದ ಆರ್ಥಿಕದ ಬೆಳವಣಿಗೆಯ ಪ್ರಮಾಣ ತೀವ್ರವಾಗಿ ಏರ ಬೇಕಾಗಿತ್ತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಭಾರತ ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿದೆ. ದೇಶದ ಜನ ಅಪಾರ ನೋವನ್ನು ಅನುಭವಿಸುತ್ತಿದ್ದಾರೆ. ಇದು ಬಂಡವಾಳಶಾಹಿ ವ್ಯವಸ್ಥೆ ತಂದೊಡ್ಡಿರುವ ಬಿಕ್ಕಟ್ಟಲ್ಲವೆ? ಇನ್ನೂ ತ್ವರಿತವಾಗಿ ಉದಾರೀಕರಣ ಮಾಡಿದರೆ ಭಾರತದ ಬೆಳವಣಿಗೆ ಹೆಚ್ಚುತ್ತದೆ ಎಂದೂ ಅದು ಹೇಳಿದೆ. ಆದರೆ ಐ.ಎಂ.ಎಫ್.ನ ಈ ಮಾತಿನಲ್ಲಿ ಸ್ವಲ್ಪವಾದರೂ ತಿಳುವಳಿಕೆಯಿರುವ ಯಾರಿಗಾದರೂ ನಂಬಿಕೆ ಬರಲು ಸಾಧ್ಯವೇ?

ಆಗ್ನೇಯ ಏಶಿಯಾ ದೇಶಗಳಲ್ಲಿನ ಕರೆನ್ಸಿ ಬಿಕ್ಕಟು ಬೇರೆಡೆಗೆ ಹಬ್ಬುವ ಸಾಧ್ಯತೆ ಇದೆಯಾದರೂ ಭಾರತಕ್ಕೆ ಅದರಿಂದ ಧಕ್ಕೆಯಾಗುವುದಿಲ್ಲ ಎಂದಿದೆ ಅದು. ಇದಕ್ಕೆ ಅದು ನೀಡುವ ಕಾರಣ ಭಾರತ ಈ ದೇಶಗಳೊಡನೆ ದೊಡ್ಡ ಪ್ರಮಾಣದ ವ್ಯಾಪಾರವನ್ನು ಹೊಂದಿಲ್ಲ

ಆದರೆ ಈಗಾಗಲೇ ಭಾರತದ ಹಲವು ಉದ್ದಿಮೆಗಳು ಈ ಆಗ್ನೇಯ ಏಶಿಯಾದ ಬಿಕ್ಕಟ್ಟಿನಿಂದಾಗಿ ತೊಂದರೆಗೊಳಗಾಗಿರುವುದನ್ನು ಐ.ಎಂ.ಎಫ್. ಮರೆತು ಬಿಟ್ಟಿದೆಯೇ?

ಕರ್ನಾಟಕದಲ್ಲಿ ಕಳೆದವಾರ

ಏಪ್ರಿಲ್ 17

• ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿದಾರರ ಅರ್ಜಿ ಸ್ವೀಕಾರದ ಸಮಯವನ್ನು ವಿಸ್ತರಿಸುವ ಬಗ್ಗೆ ಸೂಕ್ತ ತಿದ್ದುಪಡಿಯನ್ನು ಈಗಿನ ವಿಧಾನ ಮಂಡಲದ ಅಧಿವೇಶನದೊಳಗೇ ತರಲಾಗುವುದು ಎಂದು ಕಂದಾಯ ಸಚಿವರು.

• ಕೊಪ್ಪಳ ತಾಲೂಕಿನಿಂದ ಹಾರಳ್ಳಿ ಹಾಗೂ ಔರಾದ್ ನ ಸಮೀಪವಿರುವ ಸುತಾಪುರದಿಂದ ಇನ್ನೆರಡು ರೈತರ ಆತ್ಮಹತ್ಯೆ ಘಟನೆ ವರದಿ.

ಏಪ್ರಿಲ್ 18

• ಬೆಳೆ ಹಾನಿ ಸಂದರ್ಭದಲ್ಲಿ ರೈತರಿಗೆ ಪರಿಹಾರ ನೀಡಲು ಶೀಘ್ರದಲ್ಲಿಯೇ 400 ಕೋಟಿ ರೂ. ವಿಶೇಷ ನೆರವು ನೀಡುವಂತೆ ಕೇಂದ್ರ ಸರಕಾರದ ಅಧ್ಯಯನ ತಂಡಕ್ಕೆ ರಾಜ್ಯ ಸರಕಾರದ ಪರಿಷ್ಕೃತ ಮನವಿ.

ಏಪ್ರಿಲ್ 19

• ತಮಿಳುನಾಡು-ಕರ್ನಾಟಕ ವಿಶೇಷ ಕಾರ್ಯಾಚರಣೆ ಪಡೆಯಿಂದ ವೀರಪ್ಪನ್ ಐವರು ಸಹಚರರ ಬಂಧನ.

• ಬೀದರಿನ ಸಿಂಕೋಲ್ ಗ್ರಾಮ ದಿಂದ ಮತ್ತೊಬ್ಬ ರೈತನ ಆತ್ಮಹತ್ಯೆ ವರದಿ.

• ರಾಜ್ಯಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಕೊನೆಗೂ ಈಶ್ವರಪ್ಪ ಆಯ್ಕೆ.

ಏಪ್ರಿಲ್ 20

• ಭಾರತೀಯ ತೈಲ ಮತ್ತು ಅನಿಲ ನಿಗಮ ಬ್ರಿಟನ್ನಿನ ರೋಲ್ಸ್‌ರಾಯ್ಸ್ ನಿಂದ ಖರೀದಿಸಿದ್ದ ಯಂತ್ರ ದೇಶದೊಳಗಿನ ಹೆಚ್.ಎ.ಎಲ್. ದುರಸ್ತಿ ಮಾಡಿದ ದಾಖಲೆ. ದುರಸ್ತಿ ಮಾಡಿದ ಯಂತ್ರದ ಹಸ್ತಾಂತರ.

ಏಪ್ರಿಲ್ 21

• ರಾಜ್ಯ ಸರ್ಕಾರ ಕುಡಿಯುವ ನೀರು ಪೂರೈಕೆಗೆ 173 ಕೋಟಿ ರೂ. ಇಟ್ಟಿದ್ದರೂ ಜನತೆಗೆ ಕುಡಿಯುವ ನೀರು ಒದಗಿಸುವಲ್ಲಿ ವಿಫಲ ಗೊಂಡಿರುವುದನ್ನು ಪ್ರತಿಭಟಿಸಿ. ಪ್ರತಿಪಕ್ಷಗಳ ಸದಸ್ಯರ ಸಭಾತ್ಯಾಗ.

• ಮೈಸೂರು ಮಹಾರಾಜರ ವಂಶಸ್ಥರಿಗೆ ಮೈಸೂರು ಅರಮನೆಯ ಸ್ವಾಧೀನ ನೀಡಲ್ಲು ಸುಪ್ರೀಂ ಕೋರ್ಟ್ ತೀರ್ಪು.

ಏಪ್ರಿಲ್ 22

• ಕೃಷ್ಣಾ ಮೇಲ್ದಂಡೆ ಯೋಜನೆ ಯಿಂದ ಮುಳಗಡೆಯಾಗುವ ಎರಡು ಬೆಳೆ ಬೆಳೆಯುವ ತರಿ ಭೂಮಿಗೆ ಮನೆಯೊಂದಕ್ಕೆ 1.14 ಲಕ್ಷ ರೂ. ಪರಿಹಾರ ನೀಡಲು ರಾಜ್ಯ ಸರ್ಕಾರ ಒಪ್ಪಿಗೆ.

• ಎಐಎಡಿಎಂಕೆ ನಾಯಕಿ ಜಯಲಲಿತಾ ಬೇಡಿಕೆಗೆ ಮಣಿದು ರಾಜಿನಾಮೆ ಕೊಡುವ ಪ್ರಶ್ನೆಯೇ ಇಲ್ಲ ಎಂದು ರಾಮಕೃಷ್ಣ ಹೆಗಡೆಯವರು.

• ವಿಜಾಪುರದ ಹಿರೇಮಸಳಿ ಗ್ರಾಮದಿಂದಲೂ ರೈತರ ಆತ್ಮಹತ್ಯೆ ಪ್ರಕರಣ ವರದಿ.

ಏಪ್ರಿಲ್ 23

• ಬಾಗಲಕೋಟೆಯಲ್ಲಿ ಕೃಷ್ಣಾ ಮೇಲ್ದಂಡೆಗೆ ಯೋಜನೆ ಮುಳುಗಡೆ ಹಿತರಕ್ಷಣಾ ಸಮಿತಿಯು ನಿರಶನ ಸತ್ಯಾಗ್ರಹ ಅಂತ್ಯ.

ಯಾರ ಕಿವಿಗೂ ನಾಟದ ರಾಮಕೃಷ್ಣ ಹೆಗಡೆಯವರ ತುತ್ತೂರಿ

ಎಸ್.ಕೆ.ಉಪಾಧ್ಯಾಯ

ಹನ್ನೆರಡನೆಯ ಲೋಕಸಭೆ ಚುನಾವಣೆ ಪ್ರಾರಂಭವಾಗುತ್ತಿದ್ದಂತೆಯೇ ಕರ್ನಾಟಕದಲ್ಲಿ ಜನತಾದಳ ಸರಕಾರವನ್ನು ಉರುಳಿಸಿ ಜನತಾದಳ ರಾಜ್ಯದಲ್ಲಿ ಇಲ್ಲದಂತೆ ಮಾಡುವ ಹೊಂಚಿನಿಂದ ರಾಮಕೃಷ್ಣ ಹೆಗಡೆಯವರು ತಮ್ಮ ನಿಷ್ಠಾವಂತ ಮಂತ್ರಿಗಳೂ ಶಾಸಕರೂ ಜನತಾದಳ ಬಿಟ್ಟು ಲೋಕಶಕ್ತಿ ಸೇರಬೇಕೆಂಬ ಕರೆಗೆ ಓಗೊಟ್ಟು ಮಂತ್ರಿಗಳಾದ ದೇಶಪಾಂಡೆ, ಜಿಗಜಿಣಗಿ, ಸರನಾಯ್ಕ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ನವ ನಿರ್ಮಾಣ ವೇದಿಕೆ ಸೇರಿ ಲೋಕಶಕ್ತಿ, ಬಿ.ಜೆ.ಪಿ. ಉಮೇದುವಾರರನ್ನು ಚುನಾವಣೆಯಲ್ಲಿ ಬೆಂಬಲಿಸಿದರು. ಹೆಗಡೆ-ದೇಶಪಾಂಡೆ ಯವರ ಕರೆಗೆ ಜನತಾದಳ ಶಾಸಕರಾಗಲೀ ಮಂತ್ರಿಗಳಾಗಲೀ ಸ್ಪಂದಿಸಲಿಲ್ಲ. ಬಿ.ಜೆ.ಪಿ. ಜೊತೆ ಸೇರಿ ಲೋಕಸಭೆ ಚುನಾವಣೆಯಲ್ಲಿ ಮೂರು ಸ್ಥಾನಗಳನ್ನು ಪಡೆದ ಹುಮ್ಮಸ್ಸಿನಲ್ಲಿ ಜನತಾದಳದ 60 ಶಾಸಕರು ಪಕ್ಷ ಬಿಟ್ಟು ಹೊರಬರುತ್ತಾರೆ, ಲೋಕಶಕ್ತಿ ಸೇರುತ್ತಾರೆ. ಬಿ.ಜೆ.ಪಿ.-ಲೋಕಶಕ್ತಿ ಸೇರಿ ಆರ್.ವಿ. ದೇಶಪಾಂಡೆಯವರ ನೇತೃತ್ವದಲ್ಲಿ ರಾಜ್ಯದಲ್ಲಿ ಸರಕಾರ ರಚಿಸಲಾಗುವುದೆಂಬ ಗುಲ್ಲೆಬ್ಬಿಸಲಾಯಿತು. ಈ ವಿಷಯದಲ್ಲಿ ಬಿ.ಜೆ.ಪಿ.-ಲೋಕಶಕ್ತಿ ಏಕಾಭಿಪ್ರಾಯಕ್ಕೆ ಬರಲಿಕ್ಕೆ ಸಾಧ್ಯವಾಗಲಾರದಾದಾಗ ಅದೇ ಸಮಯದಲ್ಲಿ ರಾಮಕೃಷ್ಣ ಹೆಗಡೆಯವರು ವಾಜಪೇಯಿ ಸರಕಾರದಲ್ಲಿ ಮಂತ್ರಿ ಸ್ಥಾನವನ್ನು ಗಿಟ್ಟಿಸಿಕೊಂಡ ನಂತರ ಜೆ.ಹೆಚ್. ಪಟೇಲರ ಸರಕಾರವನ್ನು ಉರುಳಿಸುವ ಕೂಗಿಗೆ ಹಿನ್ನಡೆಯಾದಂತಾಯಿತು. ರಾಜ್ಯದಲ್ಲಿ ದೇವೇಗೌಡರ ಪರ-ವಿರೋಧ ಗುಂಪುಗಳು ಚುರುಕುಗೊಂಡಂತಾಗಿ ದೇವೇಗೌಡರ ಮಗ ಕುಮಾರಸ್ವಾಮಿ ಲೋಕಸಭಾ ಚುನಾವಣೆಯಲ್ಲಿ ಸೋಲುಂಡ ಹಿನ್ನಲೆಯಲ್ಲಿ ಜನತಾದಳದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಗೊಂದಲ ಉಂಟುಮಾಡಿದರೂ ಕೂಡ ಜನತಾದಳ ಶಾಸಕರು ಲೋಕಶಕ್ತಿ ಸೇರುವ ಧೈರ್ಯ ಮಾಡಲಿಲ್ಲ.

ಲೋಕಸಭೆ ಚುನಾವಣೆಯಲ್ಲಿ ಮೂರು ಸ್ಥಾನ ಗೆದ್ದು, ಕೇಂದ್ರದಲ್ಲಿ ಕ್ಯಾಬಿನೆಟ್ ಮಂತ್ರಿಯಾದರೂ ಕೂಡಾ ಕರ್ನಾಟಕದ ಜನತಾದಳ ಶಾಸಕರು ತಮ್ಮ ಕರೆಗೆ ಓಗೊಡದಿರುವುದನ್ನು ಕಂಡು ಹತಾಶರಾದ ರಾಮಕೃಷ್ಣ ಹೆಗಡೆಯವರು "ಜನತಾದಳ ಸರಕಾರ ಇನ್ನು ಅಧಿಕಾರದಲ್ಲಿ ಇರಬೇಕೆ ಎಂಬುದನ್ನು ಜನತಾದಳದ ಶಾಸಕರೇ ನಿರ್ಧರಿಸಲಿ ಎಂಬ ಹತಾಶ ಭಾವದ ಉದ್ಗಾರ ತೆಗೆದರು. ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ಗೆಲುವಿಗಾಗಿ ಶ್ರಮಿಸಿದ ಲೋಕಶಕ್ತಿ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಲು ಬೆಂಗಳೂರಿನಲ್ಲಿ ಏರ್ಪಡಿಸಿದ್ದ "ಕೃತಜ್ಞತಾ ಸಮಾವೇಶ"ದಲ್ಲಿ ಭಾಷಣ ಮಾಡುತ್ತಾ ಪಕ್ಷಾಂತರ ಮಾಡಿ ತಮ್ಮ ಗುಂಪು ಸೇರಿದ ಜನತಾದಳ ಶಾಸಕರ ಮೇಲಿನ ಸಿಟ್ಟನ್ನು ಜೆ.ಹೆಚ್. ಪಟೇಲ ಸರಕಾರದ ಮೇಲೆ ಹಾಕಿ ಬೆಂಕಿ ಕಾರಿದ್ದರು. 'ಒಂದು ಕಡೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ವಿದ್ಯುಚ್ಛಕ್ತಿ ಪೂರೈಕೆ ಸಮರ್ಪಕವಾಗಿಲ್ಲ ಎಂದು ಕಿಡಿಗಾರಿದ್ದಾರೆ. ಮುಂಬರುವ ವಿಧಾನ ಸಭೆ ಚುನಾವಣೆಯಲ್ಲಿ ಆರಿಸಿ ಬರಬೇಕಾದರೆ ಒಗ್ಗಟ್ಟಾಗಿರಬೇಕು ಎಂದು ಕರೆ ನೀಡಿದ್ದಾರೆ. ಈ ಸಮಸ್ಯೆಗಳು ಪರಿಹಾರಕ್ಕೆ ತಾನು ಮುಖ್ಯಮಂತ್ರಿಯಾಗಿದ್ದಾಗ ಏನೂ ಮಾಡಲಿಲ್ಲವೆಂಬುದನ್ನು ಅವರು ಹೇಳುವುದಿಲ್ಲ. ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಾಗ ನೀರಾವರಿ ಯೋಜನೆ ಗಳಿಗೆ ಸಾಕಷ್ಟು ಹಣ ಮೀಸಲಿಟ್ಟಿದ್ದರೆ. ರೈತರು ಬೆಳೆ ಹಾನಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಅಗತ್ಯವಿರಲಿಲ್ಲ. ರಾಮಕಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೂ ತೊಗರಿ ಬೆಳೆ ಬೆಳೆಗಾರರು ಅನುಭವಿಸುತ್ತಿರುವ ಸಂಕಷ್ಟಗಳ ಕುರಿತು ಹೋರಾಟ ಮಾಡುತ್ತಲೇ ಬಂದಿದ್ದರೂ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿ ಸುವ ಕುರಿತು, ಉತ್ತಮ ಬೀಜ, ರಸ ಗೊಬ್ಬರ ಒದಗಿಸುವ ಕುರಿತು, ಕಳಪೆ ಕ್ರಿಮಿನಾಶಕ ಮಾರಾಟದ ಕುರಿತು ಸರಕಾರವನ್ನು ಎಚ್ಚರಿಸುತ್ತಲೇ ಬಂದಿದ್ದಾರೆ. ರೈತ ಸಾಲದ ಭಾರ ಹೊರಲಾರದಂಥ ಪರಿಸ್ಥಿಯಲ್ಲಿದ್ದಾರೆಂಬುದನ್ನು ಅವರ ಗಮನಕ್ಕೆ ತರಲಾಗಿತ್ತು. ಆಗ ಮುಖ್ಯ ಮಂತ್ರಿಯಾಗಿದ್ದ ಹೆಗಡೆಯವರಿಗೆ ರೈತರ ಕೂಗು ಕೇಳಿಸಲಿಲ್ಲ. ಪ್ರತಿ ವರ್ಷ ರೈತರ ಬವಣೆ ಹೆಚ್ಚಾಗುತ್ತಾ ಬಂದು ಈ ವರ್ಷ ಕೈಮೀರಿ ನಿಂತಿದೆಂಬುದನ್ನು ಅರ್ಥೈಸಿ ಕೊಳ್ಳದೆ ರಾಮಕೃಷ್ಣ ಹೆಗಡೆಯವರು ತಮ್ಮ ಗುಂಪಿಗೆ ಸೇರಲು ನಿರಾಕರಿಸುತ್ತಿರುವ ಪಟೇಲ ಸರಕಾರದ ಮೇಲೆ ಕಿಡಿ ಕಾರಲಾರಂಭಿಸಿದ್ದಾರೆ. ಇವುಗಳೆಲ್ಲ ತಮ್ಮ ನೇತೃತ್ವದ ಕಾಂಗ್ರೆಸ್ ಮತ್ತು ಜನತಾದಳಗಳ ಸರಕಾರಗಳ ಪಾಪದ ಕೊಡುಗೆ ಎಂಬುದನ್ನು ಮರೆತು ಅದನ್ನೀಗ ರಾಜಕೀಕರಣಗೊಳಿಸಲು ಹೊರಟಿದ್ದಾರೆ.

ನಮ್ಮ ಸಂವಿಧಾನದಲ್ಲಿ ಮೂಲಭೂತ ಬದಲಾವಣೆ ತಂದು ರಾಷ್ಟ್ರಾಧ್ಯಕ್ಷ ಮಾದರಿಯ ಸರಕಾರ ತರಬೇಕೆಂದಿರುವ ರಾಮಕೃಷ್ಣ ಹೆಗಡೆಯವರು ಬಿ.ಜೆ.ಪಿ. ಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಾನು ವಾಣಿಜ್ಯ ಮಂತ್ರಿಯಾಗಿ ಹಿಂದಿನ ಸರಕಾರಗಳ ಉದಾರೀಕರಣ ನೀತಿಯನ್ನೇ ಮುಂದುವರಿಸುತ್ತಿರುವುದು ಅವರ ಇತ್ತೀಚಿನ ಪರಿಷ್ಕೃತ ರಫ್ತು-ಆಮದು ನೀತಿಯಿಂದ ಬಹಿರಂಗವಾಗಿದೆ.

ಇಂತಹ ರಾಮಕೃಷ್ಣ ಹೆಗಡೆಯವರು ಚುನಾಯಿತ ಜೆ.ಹೆಚ್. ಪಟೇಲ್ ಸರಕಾರವನ್ನು ಉರುಳಿಸುವ ಹೊಂಚು ಹಾಕುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಜನತಾದಳ ಶಾಸಕರು ಬಿ.ಜೆ.ಪಿ. ಜೊತೆ ಕೈ ಜೋಡಿಸಿ, ಸಂವಿಧಾನ ಬದಲಾವಣೆ, ಉದಾರೀಕರಣ ನೀತಿಗಳನ್ನು ಬೆಂಬಲಿ ಸುತ್ತಿರುವ ರಾಮಕೃಷ್ಣ ಹೆಗಡೆಯವರ ಮಾತಿಗೆ ಮರುಳಾಗದಿರುವುದು ಸ್ವಾಗತಾರ್ಹ.

ಲೋಕಸಭಾ ಚುನಾವಣೆಯಲ್ಲಿ ಬಲವಾದ ಪೆಟ್ಟು ತಿಂದ ಜನತಾದಳದ ಅಧ್ಯಕ್ಷ ಬಿ.ಎಲ್.ಶಂಕರ್, ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಮೊದಲಾದವರು ಎಚ್ಚರಗೊಂಡಂತಿದೆ. ತಮ್ಮಲ್ಲಿಯ ಗುಂಪುಗಾರಿಕೆಯನ್ನು ತಡೆಗಟ್ಟಿ, ಬಂಡುಕೋರರನ್ನು ಹಿಡಿತದಲ್ಲಿಟ್ಟುಕೊಂಡು ಜನರ ಮಧ್ಯೆ ಸಂಪರ್ಕ ಬೆಳೆಸಿ, ಎಡ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಕೇಂದ್ರ ಸರಕಾರದ ನೀತಿಯನ್ನು ಬಟ್ಟಾ ಬಯಲು ಗೊಳಿಸಿ, ಕೋಮುವಾದಿಗಳ ವಿರುದ್ಧ ಪ್ರಭಾವಿ ಪ್ರಚಾರ ನಡೆಸಿದರೆ ಮಾತ್ರ ರಾಮಕೃಷ್ಣ ಹೆಗಡೆಯಂಥವರ ಕುಚೋದ್ಯತನವನ್ನು ಬಯಲುಗೊಳಿಸಲು ಸಾಧ್ಯ ಎಂಬಂಶವನ್ನು ಬಿ.ಎಲ್. ಶಂಕರ್ ಮತ್ತು ಜೆ.ಹೆಚ್. ಪಟೇಲ್ ಮತ್ತಿತರ ಮುಖಂಡರು ಅರ್ಥೈಸಿಕೊಳ್ಳುವುದು ಅಗತ್ಯ.

ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿ ಅಣೆಕಟ್ಟಿನಿಂದಾಗಿ ಮಳುಗಡೆ

ಪುಟ 6 ಕ್ಕೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಫಲಿಸದ ಕುದುರೆ ವ್ಯಾಪಾರ

ಬಿ.ಜೆ.ಪಿ.ಗೆ ಮುಖಭಂಗ

ನಿತ್ಯಾನಂದ ಸ್ವಾಮಿ

ಜನತಾದಳ ಮತ್ತು ಕಾಂಗ್ರೆಸ್ಸಿನ ಕೆಲವು ಸದಸ್ಯರ ಅಪಹರಣ, ಅವರಿಗೆ ತಲಾ ಒಂದು ಲಕ್ಷದಿಂದ ಮೂರು ಲಕ್ಷ ರೂಪಾಯಿಗಳ ಆಮಿಷ, ಚುನಾವಣಾ ದಿನ ಸದಸ್ಯರ ಮಾರಾಮಾರಿ, ಕುರ್ಚಿ ಮೇಜುಗಳ ತೂರಾಟ ಇತ್ಯಾದಿಗಳನ್ನು ಯಶಸ್ವಿಯಾಗಿ ನಡೆಯಿಸಲಾಯಿತಾದರೂ ಮೇಯರ್ ಗಾದಿ ಗಿಟ್ಟಿಸಿಕೊಳ್ಳಲಾಗದೆ ಇಲ್ಲಿಯ ಬಿಜೆಪಿ -ಲೋಕಶಕ್ತಿ ಮೈತ್ರಿ ಕೂಟ ಇಂಗು ತಿಂದ ಮಂಗನಂತಾಗಿದೆ. ಇದೆಲ್ಲಾ ನಡೆದದ್ದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮೇಯರ್, ಉಪಮೇಯರ್ ಚುನಾವಣೆಯಲ್ಲಿ.

ಒಟ್ಟು 67 ಚುನಾಯಿತ ಸದಸ್ಯರಿರುವ ಮಹಾನಗರ ಪಾಲಿಕೆಯಲ್ಲಿ ಜನತಾದಳದ 29, ಬಿಜೆಪಿಯ 24, ಕಾಂಗ್ರೆಸ್ಸಿನ 10 ಮತ್ತು 4 ಪಕ್ಷೇತರ ಸದಸ್ಯರಿದ್ದಾರೆ. ಬಿಜೆಪಿಯ ಮೂವರು ಶಾಸಕರು ಮತ್ತು ಒಬ್ಬ ಸಂಸದರು, ಲೋಕಶಕ್ತಿ, ಜನತಾದಳ ಮತ್ತು ಕಾಂಗ್ಸಿನ ತಲಾ ಒಬ್ಬ ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಮತದಾನ ಅಧಿಕಾರ ಹೊಂದಿರುವವರ ಒಟ್ಟು ಸಂಖ್ಯೆ 74. ಇವರಲ್ಲದೆ ಐದು ಜನ ನಾಮ ನಿರ್ದೇಶಿತ ಸದಸ್ಯರಿದ್ದರೂ ಅವರಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.

ಮೂರು ಜನ ಶಾಸಕರನ್ನು ಮತ್ತು ಒಬ್ಬ ಸಂಸತ್ ಸದಸ್ಯನನ್ನು ಹೊಂದಿರುವ ಬಿಜೆಪಿಗೆ ಮಹಾನಗರ ಪಾಲಿಕೆಯಲ್ಲಿ ಬಹುಮತ ದಕ್ಕದಿರುವುದು ನುಂಗಲಾರದ ತುತ್ತಾಗಿತ್ತು. ಕಳೆದ ವರ್ಷ ನಡೆದ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಸದಸ್ಯರೊಬ್ಬರನ್ನು ಬೆಂಬಲಿಸುವುದಾಗಿ ಆಸೆ ತೋರಿಸಿದ ಬಿಜೆಪಿ ನಂತರ ಕೈಕೊಟ್ಟಿತು.

ಕೇಂದ್ರದಲ್ಲಿ ವಾಜಪೇಯಿ ಸರ್ಕಾರ ಅಧಿಕಾರ ವಹಿಸಿಕೊಂಡ ಪರಿಣಾಮವಾಗಿ ಈ ಸಲ ಪಕ್ಷಾಂತರ ಮಾಡಿಸಲು ಅಷ್ಟೇನು ಕಷ್ಟಪಡಬೇಕಾಗಿಲ್ಲ ಎಂದು ಕೊಳ್ಳಲಾಗಿತ್ತು. ಬಿಜೆಪಿ ಮೂಲದಿಂದ 8 ಲಕ್ಷ ರೂಪಾಯಿಗಳನ್ನು ಮತ್ತು ಲೋಕಶಕ್ತಿ ಮೂಲದಿಂದ 10 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತೆಂದು ಹೇಳಲಾಗಿದೆ. ಜನತಾದಳದಲ್ಲಿ ಮೇಯರ್ ಸ್ಥಾನಕ್ಕೆ ಆಂಕಾಕ್ಷಿಯಾಗಿದ್ದ ಸದಸ್ಯರೊಬ್ಬರನ್ನು ಸಂಪರ್ಕಿಸಲು ಬಿಜೆಪಿ ತಡಮಾಡಲಿಲ್ಲ. ಜನತಾದಳದಿಂದ ಅವಕಾಶ ದೊರೆಯದಿದ್ದರೆ ಬಂಡುಕೋರ ಅಭ್ಯರ್ಥಿಯಾಗಿ ಸ್ಪರ್ಧಿಸುವಂತೆ ಅವರ ಮನವೊಲಿಸುವಲ್ಲಿ ಬಿಜೆಪಿ ಯಶಸ್ವಿಯಾಯಿತು. ಜನತಾದಳದ ಇನ್ನೂ ಕೆಲವು ಸದಸ್ಯರನ್ನು ತಮ್ಮ ಬೆಂಬಲಕ್ಕೆ ಕರೆತರಲು ಅವರಿಗೆ ಸೂಚಿಸಲಾಯಿತು.

ಜನತಾದಳದ 6ಜನ ಸದಸ್ಯರನ್ನು ಪುಸಲಾಯಿಸುವುದು ಬಿಜೆಪಿ ಲೋಕಶಕ್ತಿ ಮೈತ್ರಿ ಕೂಟಕ್ಕೆ ಸಾಧ್ಯವಾಯಿತು. ಈ 6 ಜನ ಸದಸ್ಯರನ್ನು ರಾತ್ರೋರಾತ್ರಿ ಕಲಘಟಗಿಗೆ ಸಾಗಿಸಲಾಯಿತು. ಇತ್ತೀಚೆಗೆ ಲೋಕಶಕ್ತಿಗೆ ಸೇರಿರುವ ಸ್ಥಳೀಯ ಶಾಸಕರ ರಕ್ಷಣೆಯಲ್ಲಿ ಅವರು ಸುರಕ್ಷಿತರಾಗಿದ್ದರು! ಕಾಂಗ್ರೆಸ್ಸಿನ ಇಬ್ಬರು ಮಹಿಳಾ ಸದಸ್ಯರನ್ನು ಲೋಕಶಕ್ತಿ ಶಾಸಕರ 'ನಿಸರ್ಗ' ದಲ್ಲಿ ಇಡಲಾಗಿತ್ತು.

ಕಾಣೆಯಾಗಿದ್ದ ಸದಸ್ಯರು ಚುನಾವಣೆಯ ದಿನ ಬಿಜೆಪಿ ಮತ್ತು ಲೋಕಶಕ್ತಿ ಶಾಸಕರೊಂದಿಗೆ ಆಗಮಿಸಿದಾಗ ಮಹಾನಗರ ಪಾಲಿಕೆ ಆವರಣದಲ್ಲಿ ಸಹಜವಾಗಿ ಕಾವೇರಿತು. ಜನತಾದಳ ಮತ್ತು ಕಾಂಗ್ರೆಸ್ ಪಕ್ಷಗಳು ಹಿಂದಿನಂತೆ ಪರಸ್ಪರ ಹೊಂದಾಣಿಕೆ ಮಾಡಿಕೊಂಡಿದ್ದರೂ ಅಪಹರಿಸಲಾದ ಅವರ ಸದಸ್ಯರು ಮರಳಿ ಬರುವುದು ಅವಶ್ಯವಾಗಿತ್ತು. ಬಿಜೆಪಿ ಲೋಕಶಕ್ತಿ ಕೂಟದಲ್ಲಿ ಬಂಧಿಯಾಗಿದ್ದ ಜನತಾದಳ ಮತ್ತು ಕಾಂಗ್ರೆಸ್ ಪಕ್ಷಗಳ ಸದಸ್ಯರನ್ನು ಬಿಡುಗಡೆ ಮಾಡಿ ಸದನಕ್ಕೆ ಹೊತ್ತೊಯ್ಯಲು ಆಯಾ ಪಕ್ಷಗಳ ಸದಸ್ಯರು ಮುಗಿಬಿದ್ದಾಗ ಬಿಜೆಪಿ ಮತ್ತು ಲೋಕಶಕ್ತಿ ಸದಸ್ಯರು ಹತಾಶರಾಗಿ ತಮ್ಮ ವಶದಲ್ಲಿದ್ದ ಆ ಸದಸ್ಯರನ್ನು ತಮ್ಮೊಂದಿಗೆ ಎಳೆದೊಯ್ಯಲು ಪ್ರಯತ್ನಿಸತೊಡಗಿದರು. ಇದರಿಂದಾಗಿ ಮಹಾನಗರ ಪಾಲಿಕೆಯ ಮೆಟ್ಟಲುಗಳ ಬಳಿಯಲ್ಲಿಯೇ ರಣರಂಗ ಆರಂಭವಾಯಿತು. ಪರಸ್ಪರ ಜಗ್ಗಾಟ ಜಗ್ಗಾಟದಲ್ಲಿ ಸದಸ್ಯರ ಪ್ಯಾಂಟು, ಶರ್ಟುಗಳು ಹರಿದು ಹೋದವು. ಇತ್ತೀಚೆಗೆ ಬಿಜೆಪಿ ಕೂಟಕ್ಕೆ ಸೇರಿದ ಸದಸ್ಯನೊಬ್ಬನನ್ನು ಕೇವಲ 'ಚಿಡ್ಡಿ'ಯ ಮೇಲೆ ನಿಲ್ಲಿಸಲಾಗಿತ್ತು. ಹಲ್ಲೆಯಲ್ಲಿ ಗಾಯಗೊಂಡ ಕೆಲವು ಸದಸ್ಯರು ಚಿಕಿತ್ಸೆಗಾಗಿ ಓಡಿದರು.

ನಿಗದಿಯಾದಂತೆ ಮಹಾಪೌರರು ಚುನಾವಣೆಯ ಪ್ರಕ್ರಿಯೆಯನ್ನು ಆರಂಭಿಸಿದರು. ಆಗ ಬಿಜೆಪಿ ಸದಸ್ಯರು ಆಸ್ಪತ್ರೆಯಲ್ಲಿ ದಾಖಲಾದ ಸದಸ್ಯರೊಬ್ಬರ ನೆಪವನ್ನು ಮುಂದೆ ಮಾಡಿ ಚುನಾವಣೆ ಬೇಡ ಎಂದು ಕೂಡತೊಡಗಿದರು. ಕಾಂಗ್ರೆಸ್ ಮತ್ತು ಜನತಾದಳದ ಸದಸ್ಯರು 'ಚುನಾವಣೆ ನಡೆಯಲೇಬೇಕು' ಎಂದು ಅಷ್ಟೇ ಜೋರಾಗಿ ಕೂಗತೊಡಗಿದರು. ಬಿಜೆಪಿಯ ಶಾಸಕರೊಬ್ಬರು ಮಹಾಪೌರರ ಮೇಜಿನ ಮೇಲಿದ್ದ ಮೈಕನ್ನು ಕಿತ್ತಸೆದರು. ಟೇಬಲ್‌ಗಳನ್ನು ಬೀಳಿಸಲಾರಂಭಿಸಿದರು. ಮಹಾಪೌರರು ಸದನದಿಂದ ಹೊರ ನಡೆದರು. ಬಿಜೆಪಿ ಸದಸ್ಯನೊಬ್ಬನು ಬೀಸಿ ಎಸೆದ ಕುರ್ಚಿಯೊಂದು ಪ್ರೇಕ್ಷಕರ ಗ್ಯಾಲರಿಯಲ್ಲಿ ಬಿತ್ತು. ಮಹಾಪೌರರ ಕುರ್ಚಿಯನ್ನು ಸಹ ಬೀಳಿಸಲಾಯಿತು. ಬಿಜೆಪಿ ಶಾಸಕರಲ್ಲಿ ಒಬ್ಬರು ಬೀಳಿಸಿದ ಮೇಜೊಂದು ಉಪ ಮಹಾಪೌರ ಶ್ರೀಮತಿ ಶಾರದಾ ವಾರದ ಅವರಿಗೆ ತಗುಲಿ ಅವರು ಗಾಯಗೊಂಡರು.

ಮಧ್ಯಾಹ್ನ 3.30 ಕ್ಕೆ ಸದನದ ಕಲಾಪ ಮತ್ತೆ ಆರಂಭವಾದಾಗಲೂ ಗದ್ದಲ ಕಡಿಮೆಯಾಗಿರಲಿಲ್ಲ. ಪರಸ್ಪರ ಆರೋಪ ಪ್ರತ್ಯಾರೋಪಗಳ ನಡುವೆ ಯಾರು ಏನು ಹೇಳುತ್ತಿದ್ದಾರೆ ಎಂಬುದು ತಿಳಿಯಲು ಅಸಾಧ್ಯವಾಗಿತ್ತು. ಬಿಜೆಪಿ ಸದಸ್ಯರು ಮಹಾಪೌರರಿಗೆ ಧಿಕ್ಕಾರ ಎಂದು ಕೂಗಿದರಲ್ಲದೆ ಚುನಾವಣೆ ಅಧಿ ಸೂಚನೆಯ ಪ್ರತಿಯನ್ನು ಹರಿದು ಹಾಕಿದರು. ಮಹಾಪೌರರು ಮತ್ತೆ ಸದನವನ್ನು ಮುಂದೂಡಿದರು.

ಸಂಜೆ 4.20 ಕ್ಕೆ ಸದನ ಪುನಃ ಪ್ರಾರಂಭವಾದಾಗ ಮಹಾಪೌರರು ಜನತಾದಳದ ಅಭ್ಯರ್ಥಿ ವಿಜಯಾನಂದ ಹೊಸಕೋಟೆ ಪರವಾಗಿ ಇರುವವರು ಕೈ ಎತ್ತುವಂತೆ ಸೂಚಿಸಿದರು. ಜನತಾದಳ ಮತ್ತು ಕಾಂಗ್ರೆಸ್ ಸದಸ್ಯರು ಕೈ ಎತ್ತಿದರು. ಇದನ್ನು ವಿಡಿಯೋದಲ್ಲಿ ಚಿತ್ರೀಕರಿಸಲಾಯಿತು. ಹೊಸಕೋಟೆ ಪರವಾಗಿ 30 ಮತಗಳು ಬಿದ್ದವು. ಇನ್ನೋರ್ವ ಅಭ್ಯರ್ಥಿ(ಬಂಡುಕೋರ) ಪ್ರತಾಪ ಚವ್ಹಾಣ್ ಅವರ ಹೆಸರು ಕೂಗಿದಾಗ ಯಾರೂ ಕೈ ಎತ್ತಲಿಲ್ಲ. ಬಿಜೆಪಿ ಸದಸ್ಯರ ಪ್ರತಿಭಟನೆ ತೀವ್ರವಾದಾಗ ಸದನ ಮತ್ತೆ ಸ್ಥಗಿತಗೊಂಡಿತು.


ಸದನದಲ್ಲಿ ಮತ್ತೆ ಕಲಾಪಗಳು ಆರಂಭವಾದಾಗ ಹೊಸಕೋಟೆಯವರನ್ನು ಗೌನ್ ತೊಡಿಸಿ ಕರೆತರಲಾಯಿತು. ಅವರು ಮಹಾಪೌರರ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿರುವಾಗ ಬಿಜೆಪಿ ಸದಸ್ಯರು ಟೇಬಲ್ ಎತ್ತಿ ಒಗೆಯಲು ಪ್ರಯತ್ನಿಸಿದರು. ಆಗ ಪೋಲೀಸರು ಪ್ರವೇಶಿಸಿದರು. ಆ ಗೊಂದಲದೊಳಗೇ ಉಪಮಹಾಪೌರರ ಚುನಾವಣೆಯೂ ನಡೆದು ಕಾಂಗ್ರೆಸ್ಸಿನ ಶ್ರೀಮತಿ ರಜಿಯಾ ಬೇಗಂ ಸಂಗೊಳ್ಳಿಯವರ ಆಯ್ಕೆಯನ್ನು ಘೋಷಿಸಲಾಯಿತು. ಹೀಗೆ ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯಲ್ಲಿ ಉತ್ತರ ಪ್ರದೇಶ ವಿಧಾನಸಭೆಯ ಪುನರಾವರ್ತನೆಯನ್ನು ಯಶಸ್ವಿಗೊಳಿಸಲಾಯಿತಾದರೂ ಬಿಜೆಪಿಗೆ ಅಧಿಕಾರಗಿಟ್ಟಿಸಲು ಸಾಧ್ಯವಾಗಲಿಲ್ಲ.

'ಗಮನಿಸಬೇಕಾದ ಇನ್ನೊಂದು ಅಂಶ ಏನೆಂದರೆ ಈ ಸಲ ಮಹಾಪೌರರಾಗಿ ಚುನಾಯಿತರಾದ ವಿಜಯಾನಂದ ಹೊಸಕೋಟೆಯವರು ವಿವಾದಾಸ್ಪದ ಈದ್ಗಾವನ್ನು ಒಳಗೊಂಡಿರುವ ದೇಶಪಾಂಡೆ ನಗರ ಪ್ರದೇಶದಿಂದ ಚುನಾಯಿತರಾದವರು. ಇವರ ವಿರುದ್ಧ ಬಿಜೆಪಿಯವರು ಈದ್ಗಾ ಗಲಭೆಯಲ್ಲಿ ಪೋಲಿಸ್ ಗೋಳಿಬಾರ್‌ನಲ್ಲಿ ಗಾಯಗೊಂಡ ಸ್ವಯಂ ಸೇವಕನೊಬ್ಬನನ್ನು ನಿಲ್ಲಿಸಿದ್ದರು. ಆತ ತನ್ನ ಪ್ಯಾಂಟನ್ನು ಮೇಲಕ್ಕೆ ಎತ್ತಿ ಕಾಲಿನ ಮೇಲಿನ ಗಾಯದ ಗುರುತನ್ನು ತೋರಿಸುತ್ತಾ ಮತ ಯಾಚಿಸಿದ್ದರೂ ಕರಸೇವಕರನ್ನು ತಿರಸ್ಕರಿಸಿದ ದೇಶಪಾಂಡೆ ನಗರದ ಮತದಾರರು ಪದವೀಧರ ಹೊಸಕೋಟೆಯವರಿಗೆ ಬಹುಮತ ನೀಡಿ ಚುನಾಯಿಸುವ ಮೂಲಕ ತಮ್ಮ ಬುದ್ಧಿವಂತಿಕೆಯನ್ನು ಮೆರೆದಿದ್ದಾರೆ. ○

ನಿಲ್ಲದೆ ಸಾಗಿ… ಬಿಜೆಪಿಯ ಇಬ್ಬಂದಿತನ

- ಸುರ್ಜಿತ್

ಅಡ್ವಾಣಿಯವರಿಂದ 'ಹೊಸ ಬಿಜೆಪಿ'ಯ ಮಾತು, ಮುಖವಾಡ ಬಿಸಾಕಿದ ವಾಜಪೇಯಿ, ಹಳೆ ಭಾಷೆಯಲ್ಲೇ ಬಂದ ರಾಜಕೀಯ ಠರಾವು-ಬಿಜೆಪಿಯ ಇತ್ತೀಚಿನ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆಯ ನಂತರ ಬಿಜೆಪಿಯ ಎರಡು ನಾಲಗೆ ಇನ್ನಷ್ಟು ಸ್ಫುಟಗೊಂಡಿದೆ. ಇದು ಜಾತ್ಯಾತೀತ, ಪ್ರಜಾಪ್ರಭುತ್ವವಾದಿ, ದೇಶಪ್ರೇಮಿಗಳ ಮೇಲೆ ದೊಡ್ಡ ಜವಾಬ್ದಾರಿಯನ್ನು ಹಾಕಿದೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು.



ಏಪ್ರಿಲ್ 11,12 ರಂದು ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆ ನಡೆಯಿತು. ಇದು ಬಿಜೆಪಿ ಅಧಿಕಾರಕ್ಕೆ ಬಂದ ನಂತರದ ಮೊದಲ ಸಭೆ. ಇದರಲ್ಲಿ ಅಡ್ವಾಣಿಯವರು ಅಧ್ಯಕ್ಷ ಪದವಿ ಬಿಡುವ ಮೊದಲಿನ ಕೊನೆಯ ಅಧ್ಯಕ್ಷ ಭಾಷಣ, ವಾಜಪೇಯಿಯವರ ಭಾಷಣ ಮತ್ತು ಕೊನೆಯಲ್ಲಿ ರಾಜಕೀಯ ಠರಾವು ಎಲ್ಲವೂ ಬೇರೆ ಬೇರೆ ಮಾತುಗಳನ್ನು, ಅದೂ ತಂತಮ್ಮ ಪಾತ್ರ ಬದಲಿಸಿಕೊಂಡು ಬೇರೆ ಬೇರೆ ಮಾತುಗಳನ್ನು ಹೇಳಿದ್ದನ್ನು ಬಿಜೆಪಿ ಕಾರ್ಯಕರ್ತರು ಕೇಳಿದರು; ದೇಶವೂ ಕಂಡಿತು. ಇದು ವಾಸ್ತವವಾಗಿ ರಾಜಕೀಯ ಕಾರಣಕ್ಕಾಗಿ ಅದು ಅಂಗೀಕರಿಸಬೇಕಾಗಿ ಬಂದ ರಾಷ್ಟ್ರೀಯ ಅಜೆಂಡಾ ಹಾಗೂ ಅದರ ದೀರ್ಘಕಾಲದ ಅಜೆಂಡಾ ಅಂದರೆ ಚುನಾವಣಾ ಪ್ರಣಾಳಿಕೆಯ ನಡುವಿನ ವಿರೋಧಾಭಾಸಗಳನ್ನು ಮುಚ್ಚಿಡಲಿಕ್ಕಾಗಿ ಸೃಷ್ಟಿಸಿದ ಗೊಂದಲದ ಪರದೆ. ಇಂತಹ ಕುಟಿಲತನ ಹಾಗೂ ಇಬ್ಬಂದಿತನ ಬಿಜೆಪಿ ಕಸರತ್ತಿನ ಮುಖ್ಯ ಲಕ್ಷಣವಾಗಿ ಬಿಟ್ಟಿದೆ ತಾನೆ.

ಇಂಡಿಯನ್ ಎಕ್ಸ್‌ಪ್ರೆಸ್‌ನ ಏಪ್ರಿಲ್ 13 ರ ಸಂಪಾದಕೀಯ ಈ ಆಟವನ್ನು ಚೆನ್ನಾಗಿಯೇ ಗ್ರಹಿಸಿದೆ(ಬಾಕ್ಸ್ ನೋಡಿ)

ಅಡ್ವಾಣಿಯವರ 'ಹೊಸ ಬಿಜೆಪಿ'

ಅಡ್ವಾಣಿ ತಮ್ಮ ಭಾಷಣದಲ್ಲಿ ಒಂದು ಜಾಣ ಕಸರತ್ತು ನಡೆಸಿದರು. ತಾನೊಂದು 'ಹೊಸ ಧೀರ ನಿಲುವನ್ನು ಕಾರ್ಯಕಾರಿ ಸಮಿತಿಯ ಮುಂದಿಡಬಯಸುತ್ತೇನೆ' ಎಂದೇ ತಮ್ಮ ಭಾಷಣ ಆರಂಭಿಸಿದ ಅವರು 'ಬಿಜೆಪಿ ಒಂದು ಹೊಸ ಬಿಜೆಪಿ ಆಗಬೇಕು. ಅದು ನಿನ್ನೆಯ ಪ್ರಶ್ನೆಗಳಿಂದ ಮಾರ್ಗದರ್ಶನ ಪಡೆಯಬಾರದು, ನಾಳೆಯ ಅಜೆಂಡಾದಿಂದ ಪಡೆಯಬೇಕು' ಎಂದರಂತೆ. ಇದೇನು 'ಹೊಸ' ಅಡ್ವಾಣಿಯವರು ಮಾತನಾಡುತ್ತಿದ್ದಾರೆ? ಏನದು ಅವರ ಹೊಸ 'ನಿಲುವು'? 'ನಾಳಿನ ಅಜೆಂಡಾ'?- ಒಂದು ರಾಮಮಂದಿರ ವಲ್ಲ, 'ರಾಷ್ಟ್ರಮಂದಿರ' ಕಟ್ಟುವುದು; ಬಿಜೆಪಿಯನ್ನು 'ಸಮಾಜದ ಎಲ್ಲಾ ವಿಭಾಗಗಳನ್ನು, ಭಾರತದ ಎಲ್ಲಾ ಪ್ರದೇಶಗಳನ್ನು, ಜಾತಿ, ಧರ್ಮ, ಜನಾಂಗ, ಭಾಷೆಯ ಬೇಧವಿಲ್ಲದೆ ಪ್ರತಿಯೊಬ್ಬ ಭಾರತೀಯರನ್ನು ಪ್ರಜ್ಞಾಪೂರ್ವಕವಾಗಿ, ವ್ಯವಸ್ಥಿತವಾಗಿ ಒಳಗೊಳ್ಳುವ'ಒಂದು ಪಕ್ಷವನ್ನಾಗಿ ಮಾಡುವುದು!

ಆದರೆ ಇವೆಲ್ಲಾ ಪೊಳ್ಳು ಮಾತು ಎಂದು ಅದೇ ಭಾಷಣದಲ್ಲಿ ಸ್ವಲ್ಪ ಸಮಯದ ನಂತರ 'ಅಯೋಧ್ಯೆಯಲ್ಲಿ ರಾಮಮಂದಿರದ ಹೆಸರಲ್ಲಿ ನಾವು ಇದನ್ನೇ ಪ್ರತಿಪಾದಿಸುತ್ತಾ ಬಂದಿರುವುದು' ಎಂದಾಗ ಸ್ಪಷ್ಟವಾಗಿತ್ತು. ಅಂದರೆ ಮತ್ತೆ ಎಲ್ಲಿಂದ ಆರಂಭವಾಗಿದ್ದವೋ ಅಲ್ಲಿಗೇ ಮರಳಿದಂತಾಯಿತು - ಹೊಸ ನಿಲುವೂ ಇಲ್ಲ, ಏನೂ ಇಲ್ಲ. ಅಷ್ಟೇ ಅಲ್ಲ, 'ಅಯೋಧ್ಯೆಯನ್ನು ನ್ಯಾಯಾಂಗ ಮತ್ತು ಶಾಸಕಾಂಗ ವಲಯದಿಂದ ಹೊರತೆಗೆಯಬೇಕು' ಎಂಬ ಪ್ರಸ್ತಾಪ ಬೇರೆ. ಇದರ ನಿಜವಾದ ಅರ್ಥ ಏನು? ಸರಕಾರ ಒಂದು ಸುಗ್ರೀವಾಜ್ಞೆ ಹೊರಡಿಸಿ ಅಗತ್ಯ ಜಾಗವನ್ನು ವಹಿಸಿಕೊಂಡು ನಂತರ ಅದೇ ನಿವೇಶನದಲ್ಲಿ ದೇವಸ್ಥಾನ ಕಟ್ಟಲು ಮುಕ್ತ ಅವಕಾಶ ಕಲ್ಪಿಸುವುದು. ಹೇಗೂ ಅಲ್ಪ ಅವಧಿಯಲ್ಲೇ ರಾಮದೇವ ಸ್ಥಾನ ಕಟ್ಟಲು ಉತ್ತರ ಪ್ರದೇಶ, ರಾಜಸ್ಥಾನಗಳಲ್ಲಿ ಭರದ ಸಿದ್ಧತೆ ನಡೆದಿದೆ ಎಂದು ಅವರ ಪತ್ರಿಕೆ 'ಆರ್ಗನೈಸರ್' ಆಗಲೇ ಘೋಷಿಸಿದೆ ತಾನೇ? (ಕಳೆದ ಸಂಚಿಕೆಯನ್ನು ನೋಡಿ). ಅಂದರೆ 'ರಾಷ್ಟ್ರಮಂದಿರ'ದ ಬಗ್ಗೆ ಬಾಯ್ತುಂಬಾ ಮಾತಾಡಿ - ರಾಮಮಂದಿರ ಕಟ್ಟಿ!

ಹಳೇ ಭಾಷೆ, ಹಳೆ ನಿಲುವಿನ ರಾಜಕೀಯ ನಿರ್ಣಯ

ಈ ಸಭೆ ಅಂಗೀಕರಿಸಿದ ರಾಜಕೀಯ ನಿರ್ಣಯದಲ್ಲಿ 'ಹೊಸ ಧೀರ ನಿಲುವಿ'ನ ಪ್ರಸ್ತಾಪವೂ ಇಲ್ಲ. 'ರಾಷ್ಟ್ರ ಮಂದಿರ'ದ ಪ್ರಸ್ತಾಪವೂ ಇಲ್ಲ. 'ಎಲ್ಲಾ ವಿವಾದಾತ್ಮಕ ವಿಷಯಗಳಲ್ಲಿ ವಿಶಾಲ ರಾಷ್ಟ್ರೀಯ ಸರ್ವಸಮ್ಮತಿಗೆ ಬಿಜೆಪಿ ಪ್ರಯತ್ನಿಸುತ್ತದೆ' ಎಂಬ ಮಾತಿದೆಯಷ್ಟೆ. ಅಂದರೆ ವಿವಾದಾತ್ಮಕ ವಿಷಯಗಳನ್ನು ಬಿಟ್ಟು ಕೊಟ್ಟಿಲ್ಲ, ಗುಟ್ಟಾಗಿ ಅವುಗಳನ್ನು ತರಲಾಗುವುದಷ್ಟೆ. 'ಭೂತಕಾಲದ ದುಃಖಕರ ತಪ್ಪುಗಳನ್ನು ಸರಿಪಡಿಸುವ' ಬಗ್ಗೆ ಠರಾವಿನ ಮಾತು ಹಳೆಯ ಭಾಷೆಯಲ್ಲೇ ಇದೆ. ಹಳೆಯ ಗುರಿಗಳನ್ನು ಬಿಟ್ಟುಕೊಡಲಾಗಿಲ್ಲ ಎಂದು ಸಾರಿದೆ.

> ಅಡ್ವಾಣಿ ಕಷ್ಟಪಟ್ಟು ನಿರ್ಮಿಸಿದ ಇಡೀ ಚಿತ್ರಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಭಾಷಣ ವಾಜಪೇಯಿಯವರದ್ದು. ಮುಖವಾಡವನ್ನು ಬಿಸಾಕಿ ಮುಖವನ್ನೇ ಬಹಿರಂಗವಾಗಿ ಪ್ರದರ್ಶಿಸಲಾಯಿತು.

ಈ ಪ್ರಕಾರವೇ ಬಿಜೆಪಿ ಸದಾ ಮಾತಾಡುವ 'ಖೋಟಾ ಜಾತ್ಯಾತೀತತೆ' ಯ ಮೇಲೆ ಪ್ರಹಾರವೂ ಈ ರಾಜಕೀಯ ಠರಾವಿನಲ್ಲಿ ಬಂದಿದೆ. ಈ ಟೀಕೆಯ ಹಿಂದೆ ಉದ್ದೇಶವೂ ಇದೆ. ಜಾತ್ಯಾತೀತತೆಯೆಂದರೆ ರಾಜಕೀಯವನ್ನು ಧರ್ಮದಿಂದ ಪ್ರತ್ಯೇಕಿಸುವುದು ಎಂದು ಸುಪ್ರೀಂಕೋರ್ಟ್ ಯಾವುದೇ ಸಂದೇಹಕ್ಕೆ ಎಡೆಯಿಲ್ಲದಂತೆ ನಿರ್ವಚಿಸಿರುವುದರಿಂದ, ಅದರಿಂದ ತಪ್ಪಿಸಿಕೊಳ್ಳಲು ಬಿಜೆಪಿ ಸದಾ ಬಹಳಷ್ಟು ಟೀಕೆಗೆ ಗುರಿಯಾಗಿರುವ ಮುರಳಿ ಮನೋಹರ ಜೋಷಿ ಕೇಸಿನ ತೀರ್ಪನ್ನು ನೆನಪಿಸುತ್ತಿರುತ್ತದೆ. ಹಿಂದುತ್ವ ಒಂದು ಧರ್ಮವಲ್ಲ, ಜೀವನ ವಿಧಾನ ಎಂದಿರುವ ಆ ತೀರ್ಪಿನ ಮರೆಯಲ್ಲಿ ತಮ್ಮ ದುಷ್ಟ ಯೋಜನೆಗಳನ್ನು ಜಾರಿಗೊಳಿಸಲು ನೆವ ಹುಡುಕುವುದು ಅವರ ಉದ್ದೇಶ.

ವಾಜಪೇಯಿ ಪಾತ್ರ ಬದಲಿಸಿದರೆ?

ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ವಾಜಪೇಯಿಯವರ ಭಾಷಣ ಅವರ ಪಾತ್ರ ಬದಲಾಗಿರುವುದನ್ನು ತೋರಿಸಿತು. ಅಡ್ವಾಣಿ ಕಷ್ಟಪಟ್ಟು ನಿರ್ಮಿಸಿದ ಇಡೀ ಚಿತ್ರಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಭಾಷಣ ವಾಜಪೇಯಿಯವರದ್ದು. ಮುಖವಾಡವನ್ನು ಬಿಸಾಕಿ ಮುಖವನ್ನೇ ಬಹಿರಂಗವಾಗಿ ಪ್ರದರ್ಶಿಸಲಾಯಿತು. ಇಲ್ಲಿ ಎರಡು ಅಂಶಗಳನ್ನು ಮಾತ್ರ ಗಮನಿಸಬೇಕು. ಮೊದಲನೆಯದಾಗಿ, ತನ್ನ ಮಟ್ಟಿಗೆ ಹೇಳುವುದಾದರೆ, ಸರಕಾರಕ್ಕೆ ಮಾರ್ಗದರ್ಶನ ನೀಡುವುದು ಪಕ್ಷ ಅಂದರೆ ಸರಕಾರಕ್ಕಿಂತ ಪಕ್ಷಕ್ಕೇ ಹೆಚ್ಚಿನ ಪ್ರಾಶಸ್ತ್ಯ. ಸರಕಾರಕ್ಕೆ ಪಕ್ಷಕ್ಕಿಂತ ಹೆಚ್ಚಿನ ಪ್ರಾಶಸ್ತ್ಯವಲ್ಲ ಎಂಬ ಅವರ ಮಾತು.

ಎರಡನೆಯದಾಗಿ, ಬಿಜೆಪಿ ತಾನಾಗಿಯೇ ಬಹುಮತ ಪಡೆಯುವವರೆಗೆ ಅದು ಮಿತ್ರ ಪಕ್ಷಗಳ ತೊಂದರೆಗಳನ್ನು ಸಹಿಸಿಕೊಳ್ಳಬೇಕು. ಇಂತಹ ಬಹುಮತ ಸಿಕ್ಕಾಗ ಮಿತ್ರ ಪಕ್ಷಗಳನ್ನು ಕೈ ಬಿಡಬಹುದು! ವಾಜಪೇಯಿಯವರು ತನ್ನ ಪಕ್ಷದ ಹಾಗೂ ಆ ಮೂಲಕ ತನ್ನ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. ಅವರು ನೀಡಿದ ಸಂದೇಶ ಸ್ಪಷ್ಟವಾಗಿತ್ತು. ಅದೇನೆಂದರೆ ಈ ಮಿತ್ರರು ಏನಿದ್ದರೂ 'ತಾತ್ಕಾಲಿಕ' ಬಿಜೆಪಿಯ ಗುರಿ ಸಾಧನೆಗೆ ತತ್ಕಾಲದಲ್ಲಿ ಅಗತ್ಯವಷ್ಟೆ. ಅಂತಹ ಅಗತ್ಯವಿಲ್ಲದಿದ್ದಾಗ ಈ 'ಮಿತ್ರ' ರೂ ಇರುವುದಿಲ್ಲ!

ಕಣ್ಣು ತೆರೆಸೀತೆ?

ಕನಿಷ್ಟ ಈ 'ಸಂದೇಶ' ವಾದರೂ ಕೇವಲ ಅಧಿಕಾರ ಪಡೆಯಲು ಬಿಜೆಪಿಯ ಗಾಡಿಗೆ ತಮ್ಮನ್ನು ತಗುಲಿಸಿಕೊಂಡ ಪಕ್ಷಗಳ, ಗುಂಪುಗಳ ಕಣ್ಣು ತೆರೆಸಬೇಕು. ಈ ಮಿತ್ರರಲ್ಲಿ ಹೆಚ್ಚಿನವು ಪ್ರಾದೇಶಿಕ ಪಕ್ಷಗಳು, ಬಿಜೆಪಿಯ ಬೆದರಿಕೆ, ಆಮಿಷಗಳಿಗೆ ರಾಷ್ಟ್ರೀಯ ಪ್ರಶ್ನೆಗಳನ್ನು ಪರಿಶೀಲಿಸಿದೆ, ಅಥವಾ ಬಿಜೆಪಿ ಅವನ್ನು ಹೇಗೆ ದುರುಪಯೋಗಪಡಿಸಿಕೊಳ್ಳುತ್ತದೆ ಎಂಬುದನ್ನು ಪರಿಶೀಲಿಸದೆ ಬಲಿಯಾದ ಪಕ್ಷಗಳವು. ತಮ್ಮ ಸಿದ್ಧಾಂತಗಳಿಗೂ ಅವು ಬದ್ಧವಾಗಿರದಿರುವುದು ಬಿಜೆಪಿಗೆ ಬಹಳ ಒಳ್ಳೆಯ ಅವಕಾಶ ಒದಗಿಸಿದೆ.

ಅಡ್ವಾಣಿ ತಮ್ಮ ಪಕ್ಷದೊಳಗಿನ ಹಿಂದುತ್ವದ ಭಕ್ತರನ್ನೂ ತೃಪ್ತಗೊಳಿಸಬೇಕಾಗಿತ್ತು. 'ಒಂದು ಬಲವಾದ ಸೈದ್ಧಾಂತಿಕ ಸ್ವರೂಪದಿಂದ ಸ್ಥಿರ ಸರಕಾರ ಕಷ್ಟವಾಗುತ್ತದೆ' ಎಂದ ಅಡ್ವಾಣಿಯವರು 'ಉತ್ತಮ ಆಡಳಿತವನ್ನು ಸಿದ್ಧಾಂತ, ರಾಜಕಾರಣದಿಂದ ಬಿಡಿಸಬೇಕಾಗುತ್ತದೆ' ಎನ್ನುತ್ತಾ 1989-96 ರ ನಡುವೆ ಬಿಜೆಪಿಯ ತ್ವರಿತ ಬೆಳವಣಿಗೆಯ ಹಿಂದಿದ್ದ ಹಾಗೂ ಬಿಜೆಪಿ ಪ್ರಣಾಳಿಕೆಯಲ್ಲಿದ್ದ ಮೂರು ಪ್ರಮುಖ ಸೈದ್ಧಾಂತಿಕ ಅಂಶಗಳನ್ನು ಬಿಟ್ಟಿದುದನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು. ಆದರೂ ಬಿಜೆಪಿ ಅಜೆಂಡಾ ಇದ್ದೇ ಇದೆ. ಈ ಬಗ್ಗೆ ಯಾವುದೇ ಸಂದೇಹ ಬೇಡ. ಈ ಅಜೆಂಡಾಕ್ಕೆ ಬದ್ಧರಾಗಿರುವುದಾಗಿ ಪಕ್ಷದ ಎಲ್ಲಾ ಉನ್ನತ ಮುಖಂಡರು ಸಾರಿದ್ದರೆ - ಸಂಸತ್ತಿನಲ್ಲಿ ವಿಶ್ವಾಸ ಠರಾವು, ರಾಷ್ಟ್ರಪತಿಗಳ ಭಾಷಣದ ಮೇಲಿನ ಚರ್ಚೆಯಲ್ಲಿ ಅಡ್ವಾಣಿ, ವಾಜಪೇಯಿ ಹಾಗೂ ಭಂಡಾರಿ ಆರ್.ಎಸ್.ಎಸ್. ನ್ನು ಸಮರ್ಥಿಸಿಕೊಂಡದಷ್ಟೇ ಅಲ್ಲ, ಹಾಡಿ ಹೊಗಳಿದ್ದಾರೆ.

> ವಾಜಪೇಯಿ ನೀಡಿದ ಸಂದೇಶ ಸ್ಪಷ್ಟವಾಗಿತ್ತು. ಅದೇನೆಂದರೆ ಈ ಮಿತ್ರರು ಏನಿದ್ದರೂ 'ತಾತ್ಕಾಲಿಕ' ಬಿಜೆಪಿಯ ಗುರಿ ಸಾಧನೆಗೆ ತತ್ಕಾಲದಲ್ಲಿ ಅಗತ್ಯವಷ್ಟೆ. ಅಂತಹ ಅಗತ್ಯವಿಲ್ಲದಿದ್ದಾಗ ಈ 'ಮಿತ್ರ' ರೂ ಇರುವುದಿಲ್ಲ! ಕನಿಷ್ಠ ಈ 'ಸಂದೇಶ' ವಾದರೂ ಕೇವಲ ಅಧಿಕಾರ ಪಡೆಯಲು ಬಿಜೆಪಿಯ ಗಾಡಿಗೆ ತಮ್ಮನ್ನು ತಗುಲಿಸಿಕೊಂಡ ಪಕ್ಷಗಳ, ಗುಂಪುಗಳ ಕಣ್ಣು ತೆರೆಸಬೇಕು.

ಅದೇ ರೀತಿ ಸಂಘ ಪರಿವಾರದ ಅಂಗಗಳೆಲ್ಲಾ, ಬಿಜೆಪಿ ರಾಜ್ಯ ಸರಕಾರಗಳೂ ಕೂಡಾ ಬಿಜೆಪಿ ಪ್ರಣಾಳಿಕೆಯ ಅಜೆಂಡಾಕ್ಕೆ ತಾವು ಬದ್ಧ ಎಂದು ಹೇಳುತ್ತಿವೆ. ಒಂದೇ ಸಮಸ್ಯೆಯೆಂದರೆ ಸದ್ಯ ಬಹುಮತವಿಲ್ಲ ವಾದ್ದರಿಂದ ಆ ಪ್ರಣಾಳಿಕೆಯ ಎಲ್ಲಾ ಅಂಶಗಳನ್ನು ಈಗ ಸಾಧಿಸುವುದು ಆಗದು ಎಂದು ಹೇಳುತ್ತಿವೆ.

ಉದಾಹರಣೆಗೆ ವಿ.ಹೆಚ್.ಪಿ.ಯ ಅಶೋಕ್ ಸಿಂಘಾಲ್ ಮೂರು ದಿನಗಳ 'ಸಂತ ಸಮ್ಮೇಳನ'ದ ಕೊನೆಯಲ್ಲಿ ಮಾತನಾಡುತ್ತಾ (ಇದು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆಯ ಮರುದಿನ) ಎಲ್ಲಾ ವಿವಾದಾತ್ಮಕ ಪ್ರಶ್ನೆಗಳು ಬಿಜೆಪಿಯ ಅಜೆಂಡಾದಲ್ಲಿ ಇನ್ನೂ ಇವೆ, ವಿಹೆಚ್‌ಪಿ ತಕ್ಷಣ ಅಯೋಧ್ಯೆಯಲ್ಲಿ ಒಂದು ರಾಮದೇವಸ್ಥಾನ ಕಟ್ಟಲು ಒಂದು ಮಸೂದೆಯನ್ನು ತರುವಂತೆ ವಾಜಪೇಯಿ ಸರಕಾರಕ್ಕೆ ಹೇಳಿದೆ ಎಂದು ತಿಳಿಸಿದರು.

ಅದೇ ರೀತಿ ಬಿಜೆಪಿಯ ಉತ್ತರ ಪ್ರದೇಶದ ರಾಜ್ಯ ಸಮಿತಿ ಮತ್ತು ವಿಶೇಷವಾಗಿ ಕಲ್ಯಾಣ್ ಸಿಂಗ್ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುವ ಕೆಲಸ ತಮ್ಮ ಅಜೆಂಡಾದಲ್ಲಿ ಈಗಲೂ ಇದೆ ಎಂದು ಒತ್ತಿ ಹೇಳಿದ್ದಾರೆ. ಬೇರೆ ಮುಖಂಡರು ಬಿಜೆಪಿಯ ನಿಜ ಅಜೆಂಡಾದಿಂದ 'ಒಂದಿಂಚೂ ಕದಲುವುದಿಲ್ಲ' ಎಂದಿದ್ದಾರೆ. ಹೊಸ ಬಿಜೆಪಿ ಅಧ್ಯಕ್ಷ ಕೇಶುಭಾಯಿ ಠಾಕ್ರೆ ಇನ್ನೂ ಬಲವಾಗಿ ಮಾತನಾಡುವ ಲಕ್ಷಣ ತೋರಿದ್ದಾರೆ.

ಆರಂಭದಿಂದಲೇ ನಾವು ಈ ಸಿದ್ಧಾಂತದ ಹಾಗೂ ಅದರ ವಿವಿಧ ಸ್ವರೂಪಗಳ ಗಂಭೀರ ವಿಚ್ಛಿದ್ರಕಾರಿ ಸ್ವಭಾವದ ಬಗ್ಗೆ ಮತ್ತೆ-ಮತ್ತೆ ಹೇಳುತ್ತಾ ಬಂದಿದ್ದೇವೆ. ಈಗ ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿರುವುದರಿಂದ, ಎಲ್ಲಾ ಅಧಿಕಾರಗಳು ಅದರ ಕೈಯಲ್ಲಿರುವುದರಿಂದ ರಾಷ್ಟ್ರೀಯ ಐಕ್ಯತೆಯನ್ನು ಹಾಗೂ ದೇಶದ ಪ್ರಜಾಸತ್ತಾತ್ಮಕ ಜಾತ್ಯಾತೀತ ಚೌಕಟ್ಟನ್ನು ಉಳಿಸಿಕೊಳ್ಳುವ ಹೋರಾಟ ತೀವ್ರಗೊಳ್ಳಬೇಕಾಗುತ್ತದೆ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮಾತ್ರವಲ್ಲ ನಮ್ಮ ಸಮಾಜದ ಈಗಿನ ಮೌಲ್ಯಗಳು ಹಾಗೂ ನೀತಿಗಳನ್ನು ಎತ್ತಿ ಹಿಡಿಯುವ ಎಲ್ಲಾ ದೇಶಪ್ರೇಮಿಗಳೂ ಕೂಡಾ ಈಗೊಂದು ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಬಲ ಪ್ರತಿಗಾಮಿ ಕೋಮುವಾದಿ ಶಕ್ತಿಗಳ ಪ್ರಹಾರಗಳನ್ನು ಸೋಲಿಸಲು ಹೇಗೆಲ್ಲಾ ಸಾಧ್ಯವೋ ಅವೆಲ್ಲಾ ರೀತಿಗಳಲ್ಲಿ ತಮ್ಮ ಕಾಣಿಕೆ ಸಲ್ಲಿಸಬೇಕಾಗಿದೆ. ○

ಬಿಜೆಪಿಗೆ ಸ್ಥಿತಿ ಹೆಚ್ಚೆಚ್ಚು ಬದಲಾವಣೆಯಾದಂತೆ ಹೆಚ್ಚೆಚ್ಚು ಹಾಗೆಯೇ ಇರುತ್ತದೆ. ಇಲ್ಲವಾದರೆ ಅವರ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕೇಳಿಬಂದ ಹಲವು ದನಿಗಳಿಗೆ ಏನನ್ನೋಣ? ಕಾರ್ಯಕಾರಿಣಿಯಲ್ಲಿ ಬಹಳ ಕುತೂಹಲಕರ ದೃಶ್ಯ ಕಂಡು ಬಂತು. ಎಲ್.ಕೆ.ಅಡ್ವಾಣಿಯವರು ಸಾಮಾನ್ಯವಾಗಿ ಅಟಲ್‌ಬಿಹಾರಿ ವಾಜಪೇಯಿಯವರಿಂದ ನಿರೀಕ್ಷಿಸುವ ದನಿಯಲ್ಲಿ ಮಾತಾಡಿದರು. ಅದರ ಬದಲು ಪ್ರಧಾನಮಂತ್ರಿಗಳ ಭಾಷಣ ಪಕ್ಷದ ಅಧ್ಯಕ್ಷರ ಭಾಷಣದಂತಿತ್ತೇ ಹೊರತು ಅವರ ಮಂದಗಾಮಿ ವ್ಯಕ್ತಿತ್ವದಂತಿರಲಿಲ್ಲ. ಹೀಗೆ ಅಡ್ವಾಣಿ ನಿನ್ನೆಯ ಬದಲು ನಾಳಿನ ಪ್ರಶ್ನೆಗಳ ಬಗ್ಗೆ ಮತ್ತೆ-ಮತ್ತೆ ಮಾತಾಡಿದರೆ ವಾಜಪೇಯಿಯವರು 'ಸರಕಾರ ಪಕ್ಷವನ್ನು ನಡೆಸುವುದಿಲ್ಲ, ಪಕ್ಷ ಸರಕಾರವನ್ನು ನಡೆಸುತ್ತದೆ' ಎಂದು. ಅದು ಸಾಕಾಗರಲಿಲ್ಲವೆಂಬಂತೆ ಸಮ್ಮಿಶ್ರ ಆಳ್ವಿಕೆ ಬಹುಶ ತಾತ್ಕಾಲಿಕ, ಬಿಜೆಪಿ ಏಕಪಕ್ಷ ಆಳ್ವಿಕೆ ಪ್ರಯತ್ನಿಸಬೇಕು ಎಂದರು. ಅಡ್ವಾಣಿ ಮತ್ತು ವಾಜಪೇಯಿಯವರ ಭಾಷಣಗಳು ಇವರಿಬ್ಬರು ಅನುಕ್ರಮವಾಗಿ ಬಿಜೆಪಿಯ ತೀವ್ರಗಾಮಿ ಹಾಗೂ ಮಂದಗಾಮಿ ದನಿಗಳ ಪ್ರತಿನಿಧಿಗಳು ಎಂದು ನಂಬಿದವರನ್ನು ಕಕ್ಕಾಬಿಕ್ಕಿಯಾಗಿಸಬೇಕು"

- ಇಂಡಿಯನ್ ಎಕ್ಸ್‌ಪ್ರೆಸ್‌ನ ಸಂಪಾದಕೀಯ
ಏಪ್ರಿಲ್ 13, 1998

ಬಿಜೆಪಿಯ ಉತ್ತಮ ಆಡಳಿತ ಲೊಳಲೊಟ್ಟೆ

ಇನ್ನೊಂದು ಉದಾಹರಣೆ: ಈಶಾನ್ಯ ಭಾರತದ ಬಗ್ಗೆ ನಿಲುವು

ಬಿಜೆಪಿ ನೇತೃತ್ವದ ಸರಕಾರ ಈಶಾನ್ಯ ಭಾರತದ ಎಂ.ಪಿ.ಗಳ ಬೆಂಬಲದಿಂದ ವಿಶ್ವಾಸ ಠರಾವು ಗೆದ್ದಿರುವುದು ಈ ಪ್ರದೇಶವನ್ನು ಕುರಿತಂತೆ ಹಿಂದಿನ ಸಂಯುಕ್ತ ರಂಗದ ಸರಕಾರದ ಸಮಗ್ರ ಅಭಿವೃದ್ಧಿ ಧೋರಣೆಯನ್ನು ಮುಂದುವರೆಸುತ್ತದೆ ಎಂದು ಭಾವಿಸಲಾಗಿತ್ತು. ಬಿಜೆಪಿ ಕೂಡಾ ಈ ಪ್ರದೇಶಕ್ಕೆ ಆದ್ಯತೆ ನೀಡುವುದಾಗಿ ಹೇಳಿಕೊಂಡಿತ್ತು.

ಆದರೆ ವಿಶ್ವಾಸ ಠರಾವು ಗೆದ್ದ ಮೇಲೆ ಇಲ್ಲಿಯೂ ಅದರ ನಿಜರೂಪ ಬಯಲಿಗೆ ಬಂದಿದೆ.

ಮಿಝೋರಾಂ ನ ಮುಖ್ಯಮಂತ್ರಿ ಲಾಲ್ಥನ್‌ಹಾವ್ಲಾ ಪ್ರಧಾನಮಂತ್ರಿಗಳನ್ನು ತುರ್ತಾಗಿ ಭೇಟಿಯಾಗಲು ದಿಲ್ಲಿಗೆ ಬಂದಿದ್ದರು. ಮೂರು ದಿನ ಕಾದರೂ ಪ್ರಧಾನ ಮಂತ್ರಿಗಳೊಂದಿಗೆ ಭೇಟಿಯ ಅವಕಾಶ ಸಿಗಲಿಲ್ಲ. ನಿರಾಶರಾಗಿ ಹಿಂದಿರುಗಿದರು.

ಮಿಝೋರಾಂ ಮುಖ್ಯಮಂತ್ರಿ ಯಾವ ತುರ್ತು ಸಮಸ್ಯೆಯ ಬಗ್ಗೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಬಯಸಿದ್ದರು ಗೊತ್ತೆ? ಆ ರಾಜ್ಯದಲ್ಲಿ ಸುಮಾರು ಒಂದು ಲಕ್ಷದಷ್ಟಿರುವ ರಿಯಾಂಗ್ ಬುಡಕಟ್ಟು ಜನ ರಾಜ್ಯದೊಳಗೆ ಒಂದು ಸ್ವಾಯತ್ತ ಜಿಲ್ಲೆಯ ಬೇಡಿಕೆಯಿಟ್ಟಿದ್ದಾರೆ. ಆದರೆ ಅವರು ರಾಜ್ಯದ ಒಂದೆಡೆ ವಾಸಿಸುತ್ತಿಲ್ಲ. ಅಲ್ಲಲ್ಲಿ ಚದುರಿ ಹೋಗಿದ್ದಾರೆ. ಆದ್ದರಿಂದ ಇಂತಹ ಸ್ವಾಯತ್ತ ಮಂಡಳಿ ಸಾಧ್ಯವಿಲ್ಲ ಎಂಬುದು ಮಿಜೋರಾಂ ಮುಖ್ಯಮಂತ್ರಿಗಳ ವಾದ. ಇದನ್ನು ತಿಳಿಸಲು ಅವರು ದಿಲ್ಲಿಗೆ ಬಂದಿದ್ದರು.

ಪ್ರಧಾನಮಂತ್ರಿಗಳು ಏಕೆ ಭೇಟಿ ನೀಡಲಿಲ್ಲ? ಈ ಸಮಸ್ಯೆಯಲ್ಲಿ ಸಿಲುಕಿಕೊಳ್ಳಲು ಸಿದ್ಧರಿಲ್ಲವೆಂದೇ? ತಮಗೆ ರಾಜಕೀಯ ಲಾಭ ತರಲು ಹಲವು ರಾಜ್ಯಗಳನ್ನೇ ರಚಿಸಲು ಸಿದ್ಧವಿರುವ ವನಾಂಚಲ, ಉತ್ತಾರಂಚಲ, ಛತ್ತೀಸ್‌ಗಡ್ ಇತ್ಯಾದಿ ರಾಜ್ಯಗಳನ್ನು ರಚಿಸಲು ಸಿದ್ಧವಿರುವ ಬಿಜೆಪಿಗೆ ಈ ವಿಷಯದಲ್ಲೇಕೆ ಹಿಂಜರಿಕೆಯಿರಬಹುದು?

ಪ್ರಧಾನಿಗಳು ಭೇಟಿ ನೀಡದಿರಲು ಮುಖ್ಯ ಕಾರಣ ಈ ಸಮಸ್ಯೆ ಕುರಿತಂತೆ ಆರ್.ಎಸ್.ಎಸ್.ನ ನಿಲುವು ಎಂಬುದೀಗ ಸ್ಪಷ್ಟವಾಗಿದೆ. ರಿಯಾಂಗ್ ಬುಡಕಟ್ಟು ಜನ ತ್ರಿಪುರಾದಿಂದ ಬಂದವರು. ಅವರು ಹಿಂದೂಗಳು. ಮಿಜೋರಾಂನಲ್ಲಿ ಕ್ರಿಶ್ಚಿಯನ್ನರು ಬಲವಂತದ ಮತಾಂತರ ಮಾಡುತ್ತಿದ್ದಾರೆ ಎಂದು ಆರ್.ಎಸ್.ಎಸ್. ಈ ಹಿಂದೆ ಬೊಬ್ಬೆ ಎಬ್ಬಿಸಿತ್ತು. ಕೆಲ ಸಮಯದ ಹಿಂದೆ ಈ ಸೂಕ್ಷ್ಮ ಈಶಾನ್ಯ ಪ್ರದೇಶದಲ್ಲಿ ಸಂಘ ಪರಿವಾರದ ಚಟುವಟಿಕೆಗಳನ್ನು ಕುರಿತಂತೆ ಒಂದು ವರದಿ ಪ್ರಕಟವಾಗಿತ್ತು - ನವದೆಹಲಿಯಲ್ಲಿ ಆರ್.ಎಸ್.ಎಸ್. ಒಂದು ನಿಧಿ ಸಂಗ್ರಹ ಕಾರ್ಯಕ್ರಮ ಆರಂಭಿಸಿದ್ದು. ಅದರ ಉದ್ದೇಶ ಈ ಪ್ರದೇಶದಲ್ಲಿ 'ಸಾಮೂಹಿಕ ಮತಾತಂತರದಲ್ಲಿ ತೊಡಗಿರುವ ವಿದೇಶಿಯರನ್ನು' ಎದುರಿಸುವುದು. ಅರುಣಾಚಲ ಪ್ರದೇಶದಲ್ಲಿ ವಿದೇಶಿಯರಿದ್ದಾರೆಯೇ ಎಂದು ಪತ್ರಕರ್ತರು ಮತ್ತೆ-ಮತ್ತೆ ಕೇಳಿದಾಗ ದಿಲ್ಲಿಯ ಸ್ಥಳೀಯ ಆರ್.ಎಸ್.ಎಸ್. ಮುಖಂಡರು ನಾಗಾಲ್ಯಾಂಡಿನ ನಿವಾಸಿಗಳು ಯುವಜನರಿಗೆ ಕ್ರಿಶ್ಚಿಯನ್ ವಿಚಾರಧಾರೆಯನ್ನು ಬೋಧಿಸುತ್ತಿದ್ದಾರೆ, ಅದನ್ನೆದುರಿಸಲು ಸಂಘ ಪರಿವಾರ ಅಂತಹುದೇ ಶಾಲೆಗಳನ್ನು ಸ್ಥಾಪಿಸಲು ನಿಧಿಯೆಂದು ಹೇಳಿದರಂತೆ. ಅಂದರೆ ಹಿಂದೂಗಳಲ್ಲದವರೆಲ್ಲಾ ವಿದೇಶಿಯವರು ಎಂದು!

ಸ್ವಲ್ಪ ದಿನಗಳ ನಂತರ ಅಲ್ಲಿಂದಲೇ ಇನ್ನೊಂದು ಅಂಶ ಬಯಲಿಗೆ ಬಂತು. ಅದೆಂದರೆ ಬಿಜೆಪಿಯ 'ಉತ್ತರ ಪೂರ್ವ ಸಮನ್ವಯ ಮಂಡಳಿ' ಯ ಕಾರ್ಯದರ್ಶಿ ಬಿ.ಪಿ. ಆಚಾರ್ಯ ಎಂಬುವರು ಅಟಲ್ ಬಿಹಾರಿ ವಾಜಪೇಯಿಯವರಿಗೆ ಬರೆದ ಪತ್ರ - "ನಾವು ಈ ಕ್ರೈಸ್ತಲ್ಯಾಂಡ್‌ನ ಹೃದಯದಲ್ಲಿ ತ್ರಿಶೂಲ ನೆಟ್ಟಿದ್ದೇವೆ" ಎಂದು ಹೆಮ್ಮೆಯಿಂದ ಹೇಳಿಕೊಂಡ ಈ ಪತ್ರ ಬಯಲಿಗೆ ಬಂದಿತ್ತು. ಇದರಲ್ಲಿ ತಮ್ಮ ಚಟುವಟಿಕೆಗಳನ್ನು ಮುಂದುವರೆಸಲು ವಾಜಪೇಯಿ, ಆರ್‌ಎಸ್.ಎಸ್. ಮುಖಂಡರು ಹಾಗೂ ವಿ.ಹೆಚ್.ಪಿ. ಮುಖಂಡರ ಮಾರ್ಗದರ್ಶನವನ್ನು ಕೋರಲಾಗಿತ್ತು.

ಈಗ ಪತ್ರಿಕೆಗಳಲ್ಲಿ ಮತ್ತೊಂದು ಸುದ್ದಿ ಪ್ರಕಟವಾಗಿದೆ. ಸಂಘಪರಿವಾರದ ಇನ್ನೊಂದು ಸದಸ್ಯ ಭಜರಂಗ ದಳ ದೇಶದ 7531 ಬ್ಲಾಕ್‌ಗಳಲ್ಲಿ 'ಬಲ ಉಪಾಸನಾ' ಕೇಂದ್ರಗಳನ್ನು ಸ್ಥಾಪಿಸಲಿದೆಯಂತೆ. ಹಿಂದೂ ಯುವಕರಿಗೆ ಯುದ್ಧ ವಿದ್ಯೆಯಲ್ಲಿ ಶಿಕ್ಷಣ ಕೊಡುವುದು ಇದರ ಉದ್ದೇಶವಂತೆ. 'ಕ್ರಿಶ್ಚಿಯನ್ ಮಿಶನರಿಗಳ ಆಕ್ಷೇಪಾರ್ಹ ಚಟುವಟಿಕೆಗಳಿಗೆ' ಮತ್ತು ಸಾಂಸ್ಕೃತಿಕ ಆಕ್ರಮಣಕೋರರಿಗೆ (ಅಂದರೆ ಮುಸ್ಲಿಮರಿಗೆ) 'ತಕ್ಕ ಉತ್ತರ ನೀಡಲು ಇದು ಅಗತ್ಯವಂತೆ'(ಟೈಂಸ್‌ಆಫ್ ಇಂಡಿಯಾ, ಏಪ್ರಿಲ್ 8, 1998)

ಈ ಸುದ್ದಿಗಳ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿಗಳು ಮಿಜೋರಾಂ ಮುಖ್ಯಮಂತ್ರಿಗಳನ್ನು ಭೇಟಿಯಾಗಲು ನಿರಾಕರಿಸಿದ್ದನ್ನು ಕಾಣಬಹುದು. ರಾಷ್ಟ್ರೀಯ ಅಜೆಂಡಾದ ಆದ್ಯತೆಗಳಲ್ಲ, ಆರ್.ಎಸ್.ಎಸ್. ನ ಕೋಮುವಾದಿ ಆದ್ಯತೆಗಳು ಬಿಜೆಪಿ ನೇತೃತ್ವದ ಸರಕಾರದ ನಿಲುವನ್ನು ನಿರಾಕರಿಸುತ್ತದೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆಯಲ್ಲವೇ?

'ಇದಕ್ಕಿಂತಲೂ ಹೆಚ್ಚಿನ ಅಪಾಯದ ಸಂಗತಿಯೆಂದರೆ ಆರ್.ಎಸ್.ಎಸ್. ತನ್ನ ಗುರಿಸಾಧನೆಗೆ ಯುವಜನರ ಒಂದು ಖಾಸಗಿ ಸೇನೆಗೆ ತರಬೇತಿ ನೀಡುವ ವಿಧಾನ. ಇದು ಹಿಟ್ಲರ್ ರಚಿಸಿದ 'ಬ್ರೌನ್ ಶರ್ಟ್ಸ್' ಗಳ ಪಡೆಯ ಮಾದರಿಯಲ್ಲೇ ಇದೆ ಎಂದು ಸಿಪಿಐ(ಎಂ) ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ ಆತಂಕ ವ್ಯಕ್ತಪಡಿಸಿದೆ.

'ಉತ್ತಮ ಆಡಳಿತ ನೀಡುವ ಬಿಜೆಪಿ ನೇತೃತ್ವದ ಸರಕಾರ ಹೇಳಿಕೊಂಡಿರುವುದು ರಾಷ್ಟ್ರೀಯ ಅಜೆಂಡಾದಲ್ಲಿನ ಇತರ ಹಲವು ಗುರಿಗಳಿಗೆ ಅದರ ಬದ್ಧತೆಯಷ್ಟೇ ಟೊಳ್ಳು ಎಂದು ಕಾಣಬರುತ್ತಿದೆ. ಅದರ ನಿಜವಾದ ಅಜೆಂಡಾ ಆರ್.ಎಸ್.ಎಸ್. ನ ಅಸಹಿಷ್ಣು ಮತೀಯ 'ಹಿಂದೂರಾಷ್ಟ್ರ'ದ ಕಣ್ಣೋಟದ್ದು ಎಂಬುದು ಈ ಮೊದಲ ಕೆಲವು ವಾರಗಳಲ್ಲೇ ಸ್ಪಷ್ಟವಾಗುತ್ತಿದೆ. ಆದರೆ ಈ ಪಾಠಗಳನ್ನು ಬೇಗನೇ ಕಲಿಯಬೇಕು ಎಂದು ಈ ಸಂಪಾದಕೀಯ ಟಿಪ್ಪಣಿ ಮಾಡಿದೆ.

ಪುಸ್ತಕ ಚಿಕ್ಕದಾದರೂ, ಮಹತ್ವ ದೊಡ್ಡದು

ಪುಸ್ತಕ ಪರಿಚಯ

ವಿಠ್ಠಲ ಭಂಡಾರಿ

ತಲಾಕ್ ಕೊಟ್ಟರೆ ಬಾರೇಟು ಶಿಕ್ಷೆ
ಲೇ: ರಂಜಾನ್ ದರ್ಗಾ
ಬೆಲೆ 10 ರೂ.
ಸೌಹಾರ್ದ ಪ್ರಕಾಶನ,
ಕಾರವಾರ

ಮನುಷ್ಯ ತನ್ನ ಬದುಕನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಕಂಡುಕೊಂಡ, ರೂಢಿಸಿಕೊಂಡ ಅನೇಕ ಅಂಶಗಳಲ್ಲಿ 'ಧರ್ಮ ಕಲಾಪ ಒಂದು. ಇದು ಬದುಕಿನಲ್ಲಿ ಒಂದಂಶ ಮಾತ್ರ ಆಗಿತ್ತು. ಆದರೆ ಚರಿತ್ರೆಯ ಬೆಳವಣಿಗೆಯ ಹೊತ್ತಿನಲ್ಲಿ ಇದು ತಿರುವು ಮುರುವಾಗಿದೆ. ಮನುಷ್ಯನ ಬದುಕೇ 'ಧರ್ಮ'ದ ಒಂದಂಶವಾದಂತ ವೈರುಧ್ಯದ ಸ್ಥಿತಿ ತಲುಪಿದ್ದೇವೆ.

ಹಾಗಾಗಿ ಧರ್ಮದ ಮುಂದೆ ಮನುಷ್ಯ ಕ್ಷುಲ್ಲಕನಾದ. ಧರ್ಮದ ಉಳಿವಿಗಾಗಿ ಈತನ ಪ್ರಾಣದ ಬಳಕೆಯಾಗ ಹತ್ತಿತು. ಧರ್ಮದ ವ್ಯಾಖ್ಯಾನವೇ ಬದಲಾಯಿತು. ಧರ್ಮದ ಕಾರ್ಯವೂ ಬದಲಾಯಿತು. 'ದಯವೇ ಧರ್ಮದ ಮೂಲವಾಗುವ ಬದಲು, ಹಿಂಸೆ, ಶೋಷಣೆ, ದಬ್ಬಾಳಿಕೆ, ಕಂದಾಚಾರ, ಮೌಲ್ಯಗಳು ಇದರ ಕೇಂದ್ರಗಳಾದವು.

ತಂತಾನೆ ಒಂದು ಧರ್ಮ ಹೀಗೆಲ್ಲಾ ಪರಿವರ್ತನೆ ಆಯಿತೆ? ಯಾಕಾಯಿತು? ಎನ್ನುವ ಪ್ರಶ್ನೆಗಳಿಗೆ ಚರ್ಚೆ ನಡೆಯುತ್ತಲೇ ಇದೆ. ಇಡೀ ಸಮಾಜವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬಯಸುವ, ಅಧಿಕಾರಶಾಹಿ, ಧನದಾಹಿಯಾದ ಒಂದು ವರ್ಗ ಮನುಷ್ಯನನ್ನು ನಿರ್ವೀರ್ಯಗೊಳಿಸಲು ಸಮಾಜದಲ್ಲಿ ತಮ್ಮ ವಿರುದ್ಧ ಎದ್ದ ಪ್ರತಿಭಟನೆಯನ್ನು ಬಲಪ್ರಯೋಗ ಇಲ್ಲದೆ ಅಡಗಿಸಲು ಒಂದು ಅಸ್ತ್ರವಾಗಿ ಬಳಸಿ ಕೊಂಡಿದ್ದು ಸ್ಪಷ್ಟವಾಗಿಯೇ ಇದೆ. ಧರ್ಮ ಅನ್ನುವುದು ಒಂದು ಅಪೌರುಷೇಯವಾದ ಚೌಕಟ್ಟೆಂದೂ, ಅದನ್ನು ಮೀರುವುದು ಪಾಪ ಕಾರ್ಯವೆಂದೂ, ಮಾತೆತ್ತದೆ ಅವನ್ನು ಅನುಸರಿಸಬೇಕೆಂದು ಭಯದ ವಾತಾವರಣವನ್ನು ನಿರ್ಮಿಸಿದರು. ಆಗ ಸಮಾಜ ಆರೋಗ್ಯಪೂರ್ಣವಾಗಿ ನಡೆಯುತ್ತದೆ ಎಂಬ ಘೋಷಣೆ ಬೇರೆ.

ಇದು ಈ ಜಗತ್ತಿನ ಯಾವುದೋ ಒಂದು ಧರ್ಮದ ಕತೆಯಲ್ಲ. ಎಲ್ಲಾ ಧರ್ಮಗಳ ಹುರುಳು ಕೂಡಾ ಇದೇ ಆಗಿದೆ. ಒಂದು ಧರ್ಮ ಕೊಳೆತು ಅಸಹನೀಯ ಆದಾಗ ಕೆಲವು ಸಂದರ್ಭದಲ್ಲಿ ಇನ್ನೊಂದು ಧರ್ಮ ಮೊದಲಿನದನ್ನು ವಿರೋಧಿಸಿ ಹುಟ್ಟಿಕೊಂಡಿದೆ. ಆದರೆ ಹಿಡಿದದ್ದು ಮಾತ್ರ ಮೊದಲಿನ ಧರ್ಮದ ಮಾರ್ಗವನ್ನೇ.

ಈ ಹಿನ್ನೆಲೆಯಲ್ಲಿ ವೈದಿಕ, ಜೈನ, ಬೌದ್ಧ ಕ್ರೈಸ್ತ, ಇಸ್ಲಾಂ ಮುಂತಾದ ಧರ್ಮಗಳನ್ನು ನೋಡಬಹುದು.

ಸದ್ಯದ ಭಾರತವನ್ನು ನೋಡಿದರಂತೂ ಧರ್ಮ ಮತ್ತು ರಾಜಕೀಯದ ಒಡನಾಟ ಧರ್ಮದ ಹೆಸರಿನಲ್ಲಿ ಉದ್ರೇಕಿಸುವ ಕ್ರಿಯೆಗಳು ಒಂದು ಧರ್ಮದ ಮೇಲೆ ಇನ್ನೊಂದು ಧರ್ಮದ ಮೇಲಾಟ, ಕೋಮುವಾದಿ ಶಕ್ತಿಗಳ ಬಲಾಬಲ ಪ್ರದರ್ಶನ, ಒಟ್ಟಾರೆ ರಾಷ್ಟ್ರೀಯ ಏಕತೆಗೆ ಕಂಟಕಪ್ರಾಯವಾಗಿ ಅಭಿವೃದ್ಧಿಗೆ ಮಾರಕವಾದಂತ ಸ್ಥಿತಿಯನ್ನು ನೋಡುತ್ತೇವೆ.

ಇಲ್ಲಿ ಹಿಂದೂ-ಮುಸ್ಲಿಂರ ನಡುವಿನ ಕಾದಾಟ, ಅನೇಕ ಅಮಾಯಕರ ಬಲಿ ಭಯವನ್ನೂ, ಹೇಸಿಗೆಯನ್ನೂ ಏಕಕಾಲಕ್ಕೆ ಹುಟ್ಟಿಸುವಂತಹುದು.

ಇಂತ ಸಂದರ್ಭದಲ್ಲಿ ಪುರೋಗಾಮಿ ಆದವರ ಜವಾಬ್ದಾರಿ ದೊಡ್ಡದು. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬೇಕಾದ ವೈಚಾರಿಕ ಜಾಗ್ರತೆಯನ್ನು ಮುಂದಿಡಬೇಕಾದ ಜವಾಬ್ದಾರಿ ಇವರದು. ಪ್ರತಿ ಧರ್ಮದ ಆಚರಣೆಯಿರುವ ಕೊಳಕುಗಳನ್ನು, ಹುಳುಕುಗಳನ್ನು ತೆರದಿಡಬೇಕಾಗಿದೆ. ಹಾಗಾದಾಗ ಎಲ್ಲಾ ಧರ್ಮದ ಜಾತಿಯ ಶೋಷಿತರು ತಮ್ಮೆಲ್ಲರನ್ನು ಕಾಡುತ್ತಿರುವ ರೋಗ ಒಂದೇ ಎಂದು ಅರ್ಥಮಾಡಿಕೊಳ್ಳುತ್ತಾರೆ. ಪರಸ್ಪರರದಲ್ಲಿರುವ ಅನುಮಾನದ ತಡೆಗೋಡೆಯನ್ನು ಒಡೆದು ಬದಲಾವಣೆಯ ಧ್ವಜ ಹಿಡಿಯಬಹುದು. ಎಲ್ಲಾ ಶೋಷಿತರು ಒಂದೆಡೆ ಸೇರುವ, ಎಲ್ಲಾ ಶೋಷಿತರು ಒಂದಾಗಿ ಗುರುತಿಸುವ ಪ್ರಕ್ರಿಯೆ ನಡೆಯುವುದರಲ್ಲಿ ಸಂಶಯವಿಲ್ಲ.

ಈ ನಿಟ್ಟಿನಲ್ಲಿ ಕವಿ, ಪತ್ರಕರ್ತ ರಂಜಾನ್ ದರ್ಗಾ ಅವರು ಬರೆದ 'ತಲಾಕ್ ಕೊಟ್ಟರೆ ಬಾರೇಟು' ಶಿಕ್ಷೆ ತೀರಾ ಮಹತ್ವದ್ದು. 'ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿನ ಮುಸ್ಲಿಂ ಸ್ವಾರ್ಥಸಾಧಕರು ಬೇರೆ ಮತ್ತು ಎಲ್ಲ ಗೊಂದಲಗಳಿಂದ ದೂರವಿರಬಯಸುವ ಬಹುಪಾಲು ಮುಸ್ಲಿಂ ಜನಸಾಮಾನ್ಯರು ಬೇರೆ' ಎನ್ನುವುದನ್ನು ಈ ಪುಸ್ತಕದಲ್ಲಿ ಸ್ಪಷ್ಟಪಡಿಸುತ್ತಾರೆ. ಒಂದು ರೀತಿಯಲ್ಲಿ ಅಲ್ಪಸಂಖ್ಯಾತರ ಬಗ್ಗೆ ಬಹುಸಂಖ್ಯಾತರಿಗಿದ್ದ ಗುಮಾನಿ ನಿರಾಧಾರಎಂದು ತಿಳಿ ಹೇಳುವುದು.

ಎಡಪಂಥೀಯ ವಿಚಾರವಾದಿ, ಕವಿ ರಂಜಾನ್ ದರ್ಗಾ ನಮ್ಮ ಜಿಲ್ಲೆಗೆ(ಉತ್ತರ ಕನ್ನಡ) ಪರಿಚಿತರು. ಕೆಲವು ವರ್ಷಗಳ ಹಿಂದೆ 'ಪ್ರಜಾವಾಣಿಯ' ಜಿಲ್ಲಾ ವರದಿಗಾರರಾಗಿ ಕೆಲಸ ಮಾಡುತ್ತಿದ್ದವರು. ಭಟ್ಕಳದಲ್ಲಿ ಕೋಮುಜ್ವಾಲೆ ಹೊತ್ತಿಕೊಂಡಾಗ ಸಮಾನ ಮನಸ್ಕರೊಂದಿಗೆ ಸೇರಿ ಅದನ್ನು ನಂದಿಸಲು ಪ್ರಯತ್ನ ಪಟ್ಟವರು. ಸದಾ ದುಡಿವ ಜನರ ಜೊತೆ ತನ್ನನ್ನು ಗುರುತಿಸಿಕೊಳ್ಳುವುದರಲ್ಲಿಯೇ ಈವರೆಗೆ ಅವರು ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡವರು. ಸಮಯ ಸಿಕ್ಕಾಗೆಲ್ಲಾ ಪ್ರತಿ ಧರ್ಮದಲ್ಲಿರುವ ಧರ್ಮಸಹಿಷ್ಣುತೆಯ ಬಗ್ಗೆ ಹೇಳುತ್ತಾ ಪ್ರತಿಧರ್ಮದಲ್ಲಿಯ ಮತಾಂಧರ ಬಗ್ಗೆ ಎಚ್ಚರ ಕೊಡುವುದನ್ನು ಎಂದೂ ಮರೆಯದ ರಂಜಾನ್ ದರ್ಗಾ 'ಹಿಂದೂ ಮುಸ್ಲಿಂ ಸಿಖ್‌ರ ಮಧ್ಯೆ ಮನುಷ್ಯರನ್ನು ಹುಡುಕಿಕೊಳ್ಳುತ್ತೇವೆ. ದ್ವೇಷ ದಳ್ಳುರಿಯಲ್ಲೂ ಪ್ರೀತಿಯೊಡನೆ ಮಾತ್ರ ರಾಜಿ ಮಾಡಿಕೊಳ್ಳುತ್ತೇವೆ' ಎಂದು ತನ್ನ ಕವಿತೆಯಲ್ಲಿ ಹೇಳಿದಂತೆ ಮನುಷ್ಯನ ಹುಡುಕಾಟದಲ್ಲಿ ತಲ್ಲೀನ ಆದವರು. ಮನುಷ್ಯ ಸಿಕ್ಕಾಗ ಅಪ್ಪಿಕೊಂಡವರು. ಹಾಗಾಗಿ ಈ ಪುಸ್ತಕಕ್ಕೆ ವಿಶೇಷ ಮಹತ್ವ ಇದೆ.

ಹಿಂದೂ ಧರ್ಮದಂತೆ ಮುಸ್ಲಿಂ ಧರ್ಮ ಕೂಡ ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿಯೇ ನೋಡಿಕೊಳ್ಳುತ್ತದೆ. ವಂಚಿತ, ಅಸಹಾಯಕ ಬದುಕಿನ ಮೇಲೆ ಬೆಳಕು ಚೆಲ್ಲುವ ಈ ಚಿಕ್ಕ ಹೊತ್ತಿಗೆಯಲ್ಲಿ 'ತಲಾಖ್ ಕೊಡುವ ಗಂಡಂದಿರಿಗೆ ಬಾರೇಟು ಶಿಕ್ಷೆ', 'ಅಸಹಾಯಕ ಮುಸ್ಲಿಂ ಮಹಿಳೆಯರು', 'ಷರಿಯತ್ ಮತ್ತು ಮುಸ್ಲಿಂ ಮಹಿಳೆ' ಎನ್ನುವ ಮೂರು ಲೇಖನಗಳಿವೆ. ಈ ಮೂರು ಲೇಖನಗಳಲ್ಲಿಯೂ ಲೇಖಕರು ಮುಸ್ಲಿಂ ಧರ್ಮಾಂಧರು ಹೇಗೆ ಕುರಾನಿನ ಹೆಸರಿನಲ್ಲಿ ಕುರಾನ್‌ಗೆ ವಿರುದ್ಧವಾಗಿ ಹೆಣ್ಣನ್ನು ಬಲಿಪಶು ಮಾಡುತ್ತಿದ್ದಾರೆ ಎನ್ನುವುದನ್ನು ಉದಾಹರಣೆಯೊಂದಿಗೆ ಸ್ಪಷ್ಟಪಡಿಸುತ್ತಾರೆ. ಇದರೊಂದಿಗೆ ರಾಷ್ಟ್ರೀಯ ಏಕತೆಯ ಬಗ್ಗೆ ಅಪಾರ ಕಾಳಜಿ ಮತ್ತು ಗಂಭೀರತೆಯನ್ನು ಕಾಣಬಹುದು.

ಪುಸ್ತಕದ ಉದ್ದೇಶ

1988 ರಲ್ಲಿ ಶಾಬಾನು ಪ್ರಕರಣದ ಬಿಸಿ ಇಡೀ ದೇಶಕ್ಕೆ ತಗುಲಿತು. ಆಗ ಮುಸ್ಲಿಂ ಮತಾಂಧರು 'ಇಸ್ಲಾಂ ಗಂಡಾಂತರದಲ್ಲಿದೆ' ಎಂದು ಹುಚ್ಚೆದ್ದು ಕುಣಿದರು. ರಾಜೀವ ಗಾಂಧಿಯವರು ಮುಸ್ಲಿಂ ಮೂಲಭೂತವಾದಿಗಳನ್ನು ಸಂತುಷ್ಟಗೊಳಿಸಲು 1986 ರಲ್ಲಿ ಮುಸ್ಲಿಂ ಮಹಿಳೆಯರ (ವಿವಾಹ ವಿಚ್ಛೇದನದ ಹಕ್ಕುಗಳ ಸಂರಕ್ಷಣೆ) ಕಾಯ್ದೆಯನ್ನು ಜಾರಿಗೆ ತಂದರು. ಈ ಕಾಯ್ದೆಯ ಪರ ವಿರೋಧಿ ಚರ್ಚೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಲೇಖಕರು ಇಲ್ಲಿಯ ಲೇಖನಗಳನ್ನು ಬರೆದು ಈ ಕಾಯ್ದೆ ಹೇಗೆ ಮಹಿಳೆಯರ ಹಕ್ಕುಗಳನ್ನು ಮೊಟಕುಗೊಳಿಸುವಂತಹದ್ದು ಎಂದು ಹೇಳುತ್ತಾ 'ಈ ಹೊಸ ಕಾಯ್ದೆ ಮುಸ್ಲಿಂ ಮಹಿಳೆಯರನ್ನು ಭಿಕ್ಷುಕಿಯ ಸ್ಥಾನದಲ್ಲಿ ನಿಲ್ಲಿಸಿತು' ಎಂದು ಹೇಳುತ್ತಾರೆ.

ಪುಸ್ತಕ ಪ್ರಕಟಿಸಿದ ಉದ್ದೇಶದ ಬಗ್ಗೆ ಹೇಳುತ್ತಾ 'ಅಲಹಾಬಾದ್ ಹೈಕೋರ್ಟ್' ಮೂರು ಬಾರಿ ತಲಾಕ್ ಹೇಳಿ ವಿವಾಹ ವಿಚ್ಛೇದನ ಪಡೆಯುವುದು ಸಂವಿಧಾನ ಪರಿಚ್ಛೇದ 14(ಕಾನೂನಿನ ಮುಂದೆ ಎಲ್ಲರೂ ಒಂದೇ) ಪರಿಚ್ಛೇದ 15(ಧರ್ಮ, ಕುಲ, ಜಾತಿ, ಲಿಂಗ ಮತ್ತು ಹುಟ್ಟಿನ ಆಧಾರದ ಮೇಲೆ ತಾರತಮ್ಯ ಸಲ್ಲದು) ಮತ್ತು ಪರಿಚ್ಛೇದ 21(ಬದುಕು ಮತ್ತು ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆ) ಕ್ಕೆ ವಿರೋಧವಾಗಿದೆ ಎಂದು ತೀರ್ಪು ನೀಡಿದರು. ಇಂಥ ತಲಾಖ್ ಇಸ್ಲಾಂ ಧರ್ಮಕ್ಕೂ ವಿರುದ್ಧವಾಗಿದೆ ಎಂಬುದನ್ನು ತೋರಿಸಿಕೊಡುವುದೇ ಈ ಪುಸ್ತಕ ಪ್ರಕಟಿಸುವುದರ ಮುಖ್ಯ ಉದ್ದೇಶವಾಗಿದೆ' ಎನ್ನುತ್ತಾರೆ.

ಇಸ್ಲಾಂ ಧರ್ಮ ಪಂಡಿತರ ಸಮಯ ಸಾಧಕತನದ ಬಗ್ಗೆ ಬರೆಯುತ್ತಾ 'ಇಸ್ಲಾಂ ಧರ್ಮಕ್ಕೆ ವಿರುದ್ಧವಾಗಿ ಕಳ್ಳತನ ಮಾಡುವ, ಮದ್ಯಪಾನ ಮಾಡುವ, ಸಾಲಕೊಟ್ಟು ಬಡ್ಡಿ ಪಡೆಯುವ ಭ್ರಷ್ಟಾಚಾರದ ಜೀವನ ಸಾಗಿಸುವ, ವರದಕ್ಷಿಣೆ ಪಡೆಯುವ ಮತ್ತು ಧರ್ಮಕ್ಕೆ ವಿರುದ್ಧವಾಗಿ ತಲಾಖ್ ಕೊಡುವ ಮುಸ್ಲಿಂರ ಬಗ್ಗೆ ಮುಸ್ಲಿಂ ಧರ್ಮ ಪಂಡಿತರು ಬಾಯಿ ಮುಚ್ಚಿಕೊಂಡಿರುತ್ತಾರೆ. ಮುಸ್ಲಿಂ ಮಹಿಳೆ ನ್ಯಾಯಕ್ಕಾಗಿ ಕೂಗಿದಾಗ ಇಸ್ಲಾಂ ಗಂಡಾಂತರದಲ್ಲಿದೆ ಎಂದು ಘೋಷಿಸುತ್ತಾರೆ" ಎಂದು ಅವರನ್ನು ಖಂಡಿಸುತ್ತಾರೆ.

ಗಂಡಿನ ಅಡಿಯಲ್ಲಿ ಚಿತ್ರಹಿಂಸೆ ಅನುಭವಿಸುತ್ತಿದ್ದ ಮಹಿಳೆಯರನ್ನು ಬಿಡುಗಡೆಗೊಳಿಸಲು ಕುರಾನಿನಲ್ಲಿ ಮಾಡಿದ ಪ್ರಯತ್ನಗಳೆಲ್ಲಾ ಮಹಿಳೆಯರಿಗೇ ತಿರುಗು ಬಾಣಗಳಾಗಿರುವುದು ಒಂದು ದುರಂತವೇ ಸರಿ.

ಬಾರೇಟು ತಿಂದ ದಾಖಲೆಯಿಲ್ಲ

ಕುರಾನ್ ಮಹಿಳೆಯರಿಗೆ ಒಂದು ರಕ್ಷಾಕವಚ ಇದ್ದಂತೆ. ಆದರೆ ತಲಾಖ್ ಮತ್ತು 'ಬಹುಪತ್ನಿತ್ವ' ದಂತಹ ಖಡ್ಗಗಳನ್ನು ಮಾಡಿ ಈ ರಕ್ಷೆಯನ್ನು ಒಡೆದು ಮಹಿಳೆಯನ್ನು ಅನಾಥರನ್ನಾಗಿಸುವ ಕಾರ್ಯವನ್ನು ಮುಸ್ಲಿಂ ಜನಾಂಗದ ಕೆಲವು ಸ್ವಾರ್ಥಿಗಳು ಮಾಡುತ್ತಿರುವುದರ ಕಡೆ ಗಮನ ಸೆಳೆಯುತ್ತಾ ಕುರಾನಿನ ಈ ಸೂರಾವನ್ನು ಉಲ್ಲೇಖಿಸುತ್ತಾರೆ- 'ಸುಶೀಲೆಯರಾದ ಸ್ತ್ರೀಯರ ಮೇಲೆ ಯಾರು ಆರೋಪ ಹೊರಿಸುತ್ತಾರೋ ಮತ್ತು ನಾಲ್ಕು ಮಂದಿ ಸಾಕ್ಷಿದಾರರನ್ನು ಅವರು ತರುವುದಿಲ್ಲವೋ ಅವರಿಗೆ 80 ಬಾರೇಟುಗಳನ್ನು ಹೊಡೆಯಿರಿ ಮತ್ತು ಅವರ ಸಾಕ್ಷ್ಯಗಳನ್ನು ಸ್ವೀಕರಿಸಬೇಡಿ - ಅವರೇ ಧರ್ಮಭ್ರಷ್ಟರು'(24ನೇ ಸೂರಾ 4ನೇ ಆಯರ್). ಮುಂದುವರಿಯುತ್ತಾ ಲೇಖಕರು 'ಈ ಸೂರಾದ ಪ್ರಕಾರ ತಲಾಖ್ ಕೊಡುವ ಬಹುಪಾಲು ಗಂಡಸರು 80 ಬಾರೇಟುಗಳಿಗೆ ಅರ್ಹರಾಗಿದ್ದಾರೆ. ಆದರೆ ಒಬ್ಬರೂ ಬಾರೇಟು ತಿಂದ ದಾಖಲೆಯಿಲ್ಲ' ಎನ್ನುತ್ತಾರೆ.

'ಕುರಾನ್ ಎಲ್ಲ ದೃಷ್ಟಿಯಿಂದಲೂ ಸ್ತ್ರೀಯರ ಪಕ್ಷಪಾತಿಯಾಗಿದೆ. ರತಿ ಕ್ರೀಡೆಯಲ್ಲೂ ಹೆಣ್ಣನ್ನು ಹಿಂಸಿಸಬಾರದು, ಮದುವೆಗೆ ಕನ್ಯೆಯ ಸಮ್ಮತಿ ಇರಬೇಕು, ತಲಾಖ್ ಪಡೆದವರು ಮತ್ತು ವಿಧವೆಯರು ಮರು ಮದುವೆಯಾಗಬಹುದು. ಗಂಡಸರ ಕಿರುಕುಳಕ್ಕೆ ಒಳಗಾಗುವ ಸಾಧ್ಯತೆ ಇರುವುದರಿಂದ ಹೊರಗೆ ಹೋಗುವಾಗ ಅವರು ಮೈ ಮುಚ್ಚಿಕೊಂಡಿರಬೇಕು. ಸ್ತ್ರೀಯರಿಗೆ ಆಸ್ತಿಯ ಪಾಲಿದೆ. ಅವರು ಗಂಡನನ್ನು ಬಿಡಬಹುದು. ತಲಾಖ್ ಕೊಟ್ಟಲ್ಲಿ ಜೀವನಾಂಶ ಕೊಡಬೇಕು. ಹೀಗೆ ಸ್ತ್ರೀ ರಕ್ಷಣೆಯ ಬಗ್ಗೆ ಹೇಳಲಾಗಿದೆ' ಎಂದು ಕುರಾನ್ ಹೆಣ್ಣಿನ ಬಗ್ಗೆ ಹೇಳಿರುವ ಕಾಳಜಿಯ ಮಾತುಗಳ ಪಟ್ಟಿ ಮಾಡಿದ್ದಾರೆ.

'ಅಸಹಾಯಕ ಮುಸ್ಲಿಂ ಮಹಿಳೆಯರು' ಲೇಖನದಲ್ಲಿ ಶಾಬಾನು ಪ್ರಕರಣದ ವಿವೇಚನೆ ಇದೆ. ಕೋರ್ಟಿನ ತೀರ್ಪನ್ನು ಸ್ವಾಗತಿಸುತ್ತಾ ನಂತರ ಬಂದ ಕಾಯ್ದೆ ಹೇಗೆ ಸ್ತ್ರೀ ವಿರೋಧಿ ಆಗಿತ್ತು ಎಂದು ಹೇಳುತ್ತಾ ಈ ಕಾನೂನಿನ ಪರವಾಗಿ ನಿಂತ ಮೂಲಭೂತವಾದಿಗಳು ಮತ್ತು ವಿರೋಧವಾಗಿ ನಿಂತ ಪುರೋಗಾಮಿ ಮುಸ್ಲಿಂರ ಬಗ್ಗೆ ಇಲ್ಲಿ ಚರ್ಚಿಸುತ್ತಾರೆ.

'ವೈಯಕ್ತಿಕ ಕಾನೂನುಗಳು ಆಯಾ ಧರ್ಮಗಳ ಸಾಂಸ್ಕೃತಿಕ ಪರಂಪರೆಯನ್ನು ಬಳಸಿಕೊಳ್ಳಲಿಕ್ಕೆ ಹೊರತಾಗಿ ಕಂದಾಚಾರವನ್ನು ರಕ್ಷಿಸುವುದಕ್ಕಲ್ಲ. ದೇಶದ ಏಕತೆಗೆ ಎಲ್ಲ ಸಂಸ್ಕೃತಿಗಳ ರಕ್ಷಣೆ ಅವಶ್ಯವಾಗಿದೆ. ಆದರೆ ಕಂದಾಚಾರಿಗಳನ್ನು ರಕ್ಷಿಸುತ್ತಾ ಪಟ್ಟಭದ್ರ ಹಿತಾಸಕ್ತಿಗಳಿಗೆ ಸೋಲುತ್ತಾ ಹೋಗುವುದು ದೇಶದ ಏಕತೆಗೆ ವಿರುದ್ಧವಾಗಿದೆ ಎಂದು ಆಳುವ ಸರಕಾರಕ್ಕೆ ಕಿವಿ ಮಾತನ್ನು ಹೇಳುತ್ತಾರೆ. ಅಮಾಯಕ ಜನಸಾಮಾನ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳದೆ ಅವರ ಬವಣೆಗಳ ಕಡೆಗೆ ಗಮನ ಹರಿಸದೆ ಕೇವಲ ಓಟ್ ಬ್ಯಾಂಕ್‌ನ್ನು ದೃಷ್ಟಿಯಲ್ಲಿಟ್ಟುಕೊಂಡು ತಾವೇ ಅವರ ಮುಂದಾಳುಗಳೆಂದು ಹೇಳಿಕೊಳ್ಳುತ್ತಿರುವ ಕೆಲವೇ ಕೆಲವು ಮತಾಂಧರ ತಾಳಕ್ಕೆ ಗೆಜ್ಜೆ ಕಟ್ಟಿಕೊಂಡಿರುವ ಒಬ್ಬಾರ್

ಪುಟ 8 ಕ್ಕೆ

ದೇಶದೊಳಗೆ

ಹಿಮಾಚಲದಲ್ಲಿ ಅಸ್ಥಿರತೆಯ ತೂಗುಗತ್ತಿ

ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಎಚ್.ವಿ.ಸಿ(ಹಿಮಾಚಲ ವಿಕಾಸ ಕಾಂಗ್ರೆಸ್) ಸಮ್ಮಿಶ್ರ ಸರಕಾರ ಸ್ಥಾಪನೆಯಾಗಿದ್ದರೂ ಅದು ಅಸ್ಥಿರತೆಯ ತೂಗುಗತ್ತಿಯಡಿಯಲ್ಲಿ ನಡೆಯುತ್ತಿದೆ.

ಆಳುವ ಕೂಟದ ಮುಖ್ಯ ಅಂಗ ಪಕ್ಷವಾದ ಬಿಜೆಪಿಯಲ್ಲಿನ ಆಂತರಿಕ ಅಸಮಾಧಾನ ಹಾಗೂ ಎಚ್.ವಿ.ಸಿ ನಾಯಕ ಸುಖರಾಮ್ ಅಂಶಗಳು ಅಸ್ಥಿರತೆಗೆ ಮುಖ್ಯ ಕಾರಣವಾಗಿವೆ.

ಬಿಜೆಪಿ ಮುಖ್ಯಮಂತ್ರಿ ಪ್ರೇಂಕುಮಾರ್ ಧುಮಾಲ್ ಮತ್ತು ಮಾಜಿ ಮುಖ್ಯಮಂತ್ರಿ ಶಾಂತಕುಮಾರ ಬಣಗಳ ನಡುವಿನ ಭಿನ್ನಮತ ಚಟುವಟಿಕೆಗಳು ತೀವ್ರ ಗತಿಯಲ್ಲಿ ನಡೆಯುತ್ತಿದ್ದು ಸಂಪುಟ ವಿಸ್ತರಣೆ ವೇಳೆ ಅದು ತಾರಕಕ್ಕೇರಿತು.

ಇದರ ಜೊತೆಗೆ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಮಾಜಿ ಕೇಂದ್ರ ಸಚಿವ ಸುಖರಾಮರ ಅಂಶ ಹಿಮಾಚಲ ಸರಕಾರವನ್ನು ಬಹಳ ಇಕ್ಕಟ್ಟಿಗೆ ಸಿಲುಕಿಸಿದೆ. ಸುಖರಾಮ್ ಯಾವ ಕ್ಷಣದಲ್ಲಿ ಕೈಕೊಡುತ್ತಾರೋ ಎಂಬ ಭೀತಿ ಬಿಜೆಪಿಯನ್ನು ಕಾಡುತ್ತಿದೆ. ಸುಖರಾಮ್ ಈಗ ರಾಜ್ಯದ ಲೋಕೋಪಯೋಗಿ (ಪಿಡಬ್ಲ್ಯೂಡಿ) ಮಂತ್ರಿಯಾಗಿದ್ದು ತಮ್ಮ ಪಕ್ಷಕ್ಕೆ ಕೇವಲ ನಾಲ್ಕು ಶಾಸಕರಿದ್ದರೂ ಸರಕಾರವನ್ನು ತನ್ನ ಅಂಗೈ ಬೆರಳಿನಲ್ಲಿ ಆಟವಾಡಿಸುತ್ತಿದ್ದಾರೆ. ಸುಖರಾಮರಿಗೆ ಭಾರೀ ಪ್ರಾಮುಖ್ಯ ನೀಡುತ್ತಿರುವುದಕ್ಕೆ ಬಿಜೆಪಿ ಕಾರ್ಯಕರ್ತರಲ್ಲಿ ಅತೃಪ್ತಿ ಅಸಮಾಧಾನ ಹೊಗೆಯಾಡತೊಡಗಿದೆ.

ಸುಖರಾಮ್ ಕೈ ಕೊಡುತ್ತಾರೇನೋ ಎಂಬ ಚಿಂತೆ ಬಿಜೆಪಿಯನ್ನು ಕಾಡಲು ಕಾರಣವೂ ಇದೆ. ಕಾಂಗ್ರೆಸ್‌ನಲ್ಲಿದ್ದಾಗ ತನ್ನ ಪ್ರಬಲ ಪ್ರತಿಸ್ಪರ್ಧಿಯಾಗಿದ್ದ ವೀರಭದ್ರ ಸಿಂಗರನ್ನು ಪಕ್ಷದ ನಾಯಕತ್ವದಿಂದ ತೆಗೆದು ಹಾಕಿದರೆ ರಾಜ್ಯದಲ್ಲಿ ತಾನು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಸುಖರಾಮ್ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಗೆ ತಿಳಿಸಿದ್ದಾರೆ ಎಂದು ಹೇಳಲಾಗಿದೆ.

ವೀರಭದ್ರ ಸಿಂಗರಿಗೆ ತಮ್ಮ ಪಕ್ಷದ ವಿರೋಧವಿದೆಯೇ ಹೊರತು ಕಾಂಗ್ರೆಸ್ ಪಕ್ಷದ ಬಗ್ಗೆ ಅಲ್ಲ ಎಂದು ಎಚ್.ವಿ.ಸಿ.ಯ ಹೊಸ ಕಾರ್ಯಾಧ್ಯಕ್ಷ ವಿಜಯ ಜೋಷಿ ಹೇಳಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದಕರಿಂದ ನರಮೇಧ

ಜಮ್ಮು ಮತ್ತು ಕಾಶ್ಮೀರದ ಪ್ರತ್ಯೇಕತಾವಾದಿ ಭಯೋತ್ಪಾದಕರು ಮತ್ತೆ ನರಸಂಹಾರದ ಕುಕೃತ್ಯಕ್ಕೆ ಇಳಿದಿದ್ದಾರೆ. ಏಪ್ರಿಲ್ 17 ರಂದು ಉಧಾಮಪುರ ಜಿಲ್ಲೆಯ ಪ್ರಾಣಕೋಟ್ ಎಂಬಲ್ಲಿ ಉಗ್ರಗಾಮಿಗಳು ಹಠಾತ್ತಾಗಿ ದಾಳಿ ನಡೆಸಿ ಅನೇಕ ಜನರನ್ನು ಗುಂಡಿಟ್ಟು ಸಾಯಿಸಿದರು. ಈ ಹತ್ಯಾಕಾಂಡ ನಡೆದ ಹಳ್ಳಿ ತೀರಾ ಒಳ ಪ್ರದೇಶದಲ್ಲಿದ್ದು ಈ ಘೋರ ಕೃತ್ಯದ ವಿಷಯ ಸುಮಾರು 36 ಗಂಟೆಗಳ ನಂತರವಷ್ಟೇ ಹೊರ ಜಗತ್ತಿಗೆ ತಿಳಿಯಿತು.

ಸಾಕಷ್ಟು ಪ್ರಕಾರದ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಭಯೋತ್ಪಾದಕರು ರಾತ್ರಿ 10.30 ರ ಸುಮಾರಿಗೆ ಹಳ್ಳಿಗೆ ನುಗ್ಗಿ ಎರಡು ಮನೆಗಳನ್ನು ಸುತ್ತುಗಟ್ಟಿ ಮನೆಯಲ್ಲಿದ್ದವರಿಗೆ ಹೊರಬರುವಂತೆ ತಿಳಿಸಿದರು. ಹೊರಬರುತ್ತಿದ್ದಂತೆಯೇ ಎರಡೂ ಕುಟುಂಬಗಳ ಸದಸ್ಯರ ಮೇಲೆ ಗುಂಡಿನ ಮಳೆಗರೆದು ಹತ್ತಾರು ಜನರ ಪ್ರಾಣಹರಣ ಮಾಡಿದರು.

ಒಟ್ಟು 26 ಜನರು ಬಲಿಯಾಗಿದ್ದಾರೆಂದು ಅಂದಾಜು ಮಾಡಲಾಗಿದೆ.

ಜಮ್ಮು ಕಾಶ್ಮೀರದಲ್ಲಿ ಕಳೆದ ಒಂದು ವರ್ಷದಲ್ಲಿ ನಡೆದಿರುವ ಅಲ್ಪಸಂಖ್ಯತರ ಮೂರನೇ ಹತ್ಯಾಕಾಂಡ ಇದಾಗಿದೆ.

ಪಾಕಿಸ್ತಾನದ ಬೆಂಬಲವಿರುವ ಭಯೋತ್ಪಾದಕರು ಹೇಯ ಹತ್ಯಾಕಾಂಡ ನಡೆಸಿರುವುದು ಸ್ಪಷ್ಟವಾಗಿದೆ.

ವಿಶ್ವ

ಬೂಟಾಸಿಂಗ್ ವಜಾವೂ ಬಿಜೆಪಿಯ ಇಬ್ಬಗೆ ನೀತಿಯೂ

ಬಿಜೆಪಿ ನೇತೃತ್ವದ ಸಮ್ಮಿಶ್ರ ಕೂಟ ಸರಕಾರ ಅಧಿಕಾರಕ್ಕೆ ಬರುತ್ತಲೇ ಹಾಗೆ ನೋಡಿದರೆ ಅಧಿಕಾರಕ್ಕೆ ಬರುವ ಮಂಚೆಯೇ ಅಸ್ಥಿರತೆಯ ಅಂಶಗಳನ್ನು ಹೊತ್ತುಕೊಂಡೇ ಬಂದಿದೆ. ಅಸ್ಥಿರತೆಗೆ ಕಾರಣ ಕೂಟದ ಹೊರಗಿನ ಶಕ್ತಿಗಳಲ್ಲ ಮೈತ್ರಿಕೂಟದ ಒಳಗಿನ ಅಂಶಗಳೇ ಎನ್ನುವುದು ನಾವು ಇಲ್ಲಿ ಗಮನಾರ್ಹ.

ಆದಾಯಕ್ಕಿಂತಲೂ ಹೆಚ್ಚಿನ ಆಸ್ತಿಪಾಸ್ತಿ ಹೊಂದಿದ್ದಾರೆಂಬ ಮೊಕದ್ದಮೆಯ ಹಿನ್ನೆಲೆಯಲ್ಲಿ ಭೂಸಾರಿಗೆ ಸಚಿವ ಸೇಡಪಟ್ಟಿ ಆರ್ ಮುತ್ತಯ್ಯರ ವಿರುದ್ಧ ವಿಶೇಷ ನ್ಯಾಯಾಲಯವೊಂದು ಆರೋಪಪಟ್ಟಿ ಸಲ್ಲಿಸಲು ಆದೇಶ ನೀಡುತ್ತಲೇ ಅಣ್ಣಾ ಡಿ.ಎಂ.ಕೆ ನಾಯಕಿ ಜಯಲಲಿತಾ ಸೂಚನೆ ಮೇರೆಗೆ ಮುತ್ತಯ್ಯ ಕೇಂದ್ರ ಸಂಪುಟಕ್ಕೆ ರಾಜಿನಾಮೆ ಕೊಟ್ಟಿದ್ದರು.

ಎದುರಾದ ಒಂದು ಕಂಟಕ ಕಳೆಯಿತು ಎಂದು ಬಿಜೆಪಿ ರಾಜಕೀಯ ನಿಟ್ಟುಸಿರು ಬಿಡುತ್ತಿರುವಾಗಲೇ ಜಯಲಲಿತಾ ಇನ್ನೊಂದು ಬಾಂಬ್ ಹಾಕಿದರು. ಯಾವುದೇ ಪ್ರಕರಣದಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿರುವ ಕೇಂದ್ರ ಮಂತ್ರಿಗಳು ರಾಜಿನಾಮೆ ಕೊಡಬೇಕು ಇಲ್ಲವೇ ಅಂಥವರನ್ನು ಪ್ರಧಾನಿ ವಜಾ ಮಾಡಬೇಕು ಎಂದು ಅವರು ಆಗ್ರಹಪಡಿಸಿದರು.

ಜೆ.ಎಂ.ಎಂ. ಸಂಸತ್ ಸದಸ್ಯರಿಗೆ ಲಂಚ ನೀಡಿದ್ದ ಪ್ರಕರಣದಲ್ಲಿ ಆರೋಪಿಯಾಗಿರುವ ಸಂಸತ್ ಸಚಿವ ಬೂಟಾಸಿಂಗ್ ಸಹಿತ ಮೂವರನ್ನು ಗುರಿ ಯಾಗಿಸಿ ಅವರು ಈ ಬೇಡಿಕೆ ಮಂಡಿಸಿ ದ್ದರು. ರಾಮಕೃಷ್ಣ ಹೆಗಡೆ ಮತ್ತು ಜಾರ್ಜ್ ಫರ್ನಾಂಡಿಸ್ ಇಬ್ಬರೂ ಜಯರ ಗುರಿ ಆಗಿದ್ದರು

ಜಯಾರ ಒತ್ತಾಯದಿಂದ ಉದ್ಭವಿಸಿದ ಬಿಕ್ಕಟ್ಟು ಹಲವು ದಿನ ಮುಂದುವರಿದಿತ್ತು. ಕೊನೆಗೆ ರಾಜೀನಾಮೆ ಕೊಡಲು ನಿರಾಕರಿಸಿದ ಬೂಟಾಸಿಂಗ್‌ರನ್ನು ಪ್ರಧಾನಿ ವಾಜಪೇಯಿ ಏಪ್ರಿಲ್ 20 ರಂದು ಕೇಂದ್ರ ಸಚಿವ ಸಂಪುಟದಿಂದ ವಜಾ ಮಾಡಿದರು.

ಬೂಟಾಸಿಂಗ್‌ರನ್ನು ವಜಾ ಮಾಡಿದಷ್ಟಕ್ಕೆ ಪ್ರಕರಣ ಮುಕ್ತಾಯವಾಗಿಲ್ಲ ಇದು ಇನ್ನೂ ಹಲವು ಪ್ರಶ್ನೆಗಳ ಉದ್ಭವಕ್ಕೆ ಕಾರಣವಾಗಿದೆ. ಆರೋಪಿ ಮಂತ್ರಿಗಳನ್ನು ಕೈಬಿಡಬೇಕೆಂಬ ಬೇಡಿಕೆಗೆ ಸಂಬಂದಿಸಿದಂತೆ; ಹಾಗೆ ನೋಡಿದರೆ ನೈತಿಕತೆಗೆ ಸಂಬಂಧಿಸಿದ ವಿಚಾರದಲ್ಲಿ ಬಿಜೆಪಿ-ಪ್ರಾಧಾನಿ ವಾಜಪೇಯಿ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿದ್ದಾರೆ ಎನ್ನುವುದು ಬೂಟಾ ಒಬ್ಬರನ್ನೇ ವಜಾ ಮಾಡಿರುವುದರಿಂದ ಸ್ಪಷ್ಟವಾಗುತ್ತದೆ.

ಬಾಬ್ರಿ ಮಸೀದಿ ನಾಶ ಪ್ರಕರಣದಲ್ಲಿ ಆರೋಪಿಗಳಾಗಿರುವ ಗೃಹ ಸಚಿವ ಎಲ್.ಕೆ.ಅಡ್ವಾಣಿ ಮಾನವ ಸಂಪನ್ಮೂಲ ಖಾತೆ ಸಚಿವ ಮುರಳಿ ಮನೋಹರ್ ಜೋಷಿ ಮತ್ತು ಆ ಖಾತೆಯ ಉಪ ಸಚಿವೆ ಉಮಾಭಾರತಿಯವರನ್ನು ಕೂಡ ಕೈಬಿಡಬೇಕೆಂಬ ಸಂದೇಶ ಸ್ಪಷ್ಟವಾಗಿದ್ದರೂ ಪ್ರಧಾನಿ ಈ ಹೊಣೆಯಿಂದ ನುಣುಚಿಕೊಳ್ಳುತ್ತಿದ್ದಾರೆ.

ವಾಮಮಾರ್ಗದಿಂದ ಅಧಿಕಾರಕ್ಕೆ ಬಂದ ಈ ಸಮಯಸಾಧಕರ ಕೂಟದಿಂದ ಸರಕಾರ ಹೇಗಾದರೂ ಮಾಡಿ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂಬ ಹವಣಿಕೆಯಲ್ಲಿದೆ.

ಬೂಟಾಗೆ ಬೆದರಿಕೆ

ಸಂಪರ್ಕ ಖಾತೆ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡುವಂತೆ ತಮಗೆ ಬೆದರಿಕೆ ಹಾಕಲಾಗಿತ್ತು ಎಂದು ವಜಾ ಆದಮೇಲೆ ನಡೆದ ಸುದ್ದಿಗೋಷ್ಠಿಯಲ್ಲಿ ಬೂಟಾಸಿಂಗ್ ವಿವರಿಸಿದರು.

ಇನ್ನು ಹತ್ತು ನಿಮಿಷದಲ್ಲಿ ರಾಜಿನಾಮೆ ನೀಡಲು ವಿಫಲರಾದಲ್ಲಿ ನೀವು ಮತ್ತು ನಿಮ್ಮ ಕುಟುಂಬ ತೊಂದರೆಗೆ ಸಿಲುಕಬೇಕಾಗುತ್ತದೆ. ಪರಿಣಾಮ ಗಂಭೀರವಾಗುತ್ತದೆ ಎಂದು ಪ್ರಾಧಾನಿಯ ರಾಜಕೀಯ ಸಲಹೆಗಾರ ಪ್ರಮೋದ್ ಮಹಾಜನ್ ಬೆದರಿಕೆ ಹಾಕಿದರು ಎಂದು ಬೂಟಾಸಿಂಗ್ ತಿಳಿದರು.

ಇದು ಬಿಜೆಪಿಯ ಯಾವ ಸಂಸ್ಕೃತಿಯನು, ಯಾವ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ ಎನ್ನುವುದು ಸುಸ್ಪಷ್ಟ.

ಶಾಂತಿಯ ರಕ್ಷಣೆ: ಸಮೃದ್ಧಿಯ ಹಾದಿ...

ಬಿಮಲ್ ಸಿನ್ಹಾಗೆ ನೈಜ ಶ್ರದ್ಧಾಂಜಲಿ

ತ್ರಿಪುರಾ ರಾಜಧಾನಿ ಅಗರ್ತಲಾದಲ್ಲಿ ಏಪ್ರಿಲ್ 9ರಂದು ಕಾರ್ಮಿಕರ ಎಲ್ಲಾ ವಿಭಾಗಗಳ ಬೃಹತ್ ರ್‍ಯಾಲಿಯೊಂದು ನಡೆಯಿತು. ಸಿ.ಐ.ಟಿ.ಯು ಅಖಿಲಭಾರತ ನಾಯಕ ಹಾಗೂ ರಾಜ್ಯದ ಆರೋಗ್ಯ ಸಚಿವ ಕಾಂ|| ಬಿಮಲ್ ಸಿನ್ಹಾ ಅವರ ಘೋರ ಹತ್ಯೆಯನ್ನು ಪ್ರತಿಭಟಿಸಿ ಈ ಪ್ರದರ್ಶನ ವ್ಯವಸ್ಥೆಗೊಂಡಿತ್ತು.

ಸಿ.ಐ.ಟಿ.ಯು ಕರೆಯ ಮೇರೆಗೆ ಸುಮಾರು 56 ಕಾರ್ಮಿಕ ಸಂಘಟನೆಗಳ ಸದಸ್ಯರು ಪಾಲ್ಗೊಂಡಿದ್ದ ಭಾರೀ ಪ್ರಮಾಣದ ಮೆರವಣಿಗೆಯಿಂದಾಗಿ ರಾಜಧಾನಿಯ ವಾಹನ ಸಂಚಾರ ಹಾಗೂ ಪಾದಚಾರಿಗಳ ಓಡಾಟ ವಸ್ತುಶಃ ಸ್ಥಗಿತಗೊಂಡಿತ್ತು. ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಬಹುತೇಕ ಜನರು ಸದರ್ ಮತ್ತು ವಿಶಾಲಗಢ್ ಸಬ್ ಡಿವಿಜನ್‌ಗಳಿಗೆ ಸೇರಿದ್ದರು. ಇತರ ಕಡೆಗಳಿಂದಲೂ ದುಡಿಯುವ ವರ್ಗದ ಪ್ರತಿನಿಧಿಗಳು ಬಂದಿದ್ದರು.

ಕಾಂ|| ಸಿನ್ಹಾರ ಹಂತಕರಿಗೆ ಕಠಿಣ ಶಿಕ್ಷೆ ನೀಡುವಂತೆ ಒತ್ತಾಯಿಸುವ ಭಿತ್ತಿಪತ್ರಗಳು ಮತ್ತು ಕೆಂಬಾವುಟಗಳನ್ನು ಹಿಡಿದಿದ್ದ ಪ್ರದರ್ಶನಕಾರರು ಬಟ್-ತಲಾದಲ್ಲಿ ರ್‍ಯಾಲಿ ನಡೆಸಿದರು.

ದುಡಿಯುವ ವರ್ಗದ ಹಕ್ಕು ಮತ್ತು ಏಕತೆಯನ್ನು ರಕ್ಷಿಸುವ ನಿಟ್ಟಿನಲ್ಲಿ ಸಿ.ಐ.ಟಿ.ಯು. ನಡೆಸುತ್ತಿರುವ ದೇಶವ್ಯಾಪಿ ಆಂದೋಲನವನ್ನು ಒಡೆಯುವ ಆಂತರಿಕ ಹಾಗೂ ಅಂತರ್ರಾಷ್ಟ್ರೀಯ ಪಿತೂರಿಯ ಭಾಗವಾಗಿ ಕಾಮ್ರೇಡ್ ಸಿನ್ಹಾರ ಹತ್ಯೆ ನಡೆದಿದೆ ಎಂದು ರ್‍ಯಾಲಿಯಲ್ಲಿ ಮಾತನಾಡಿದ ಸಿ.ಐ.ಟಿ.ಯು. ಅಖಿಲ ಭಾರತ ಕಾರ್ಯದರ್ಶಿ ಕಾಂ|| ಚಿತ್ತವ್ರತ ಮುಜುಂದಾರ್ ಹೇಳಿದರು.

ಕಾಂ|| ಸಿನ್ಹಾರ ಈ ಹುತಾತ್ಮತೆಯಿಂದ ಚಳವಳಿಗೆ ಹತಾಶೆಯಾಗುವ ಬದಲು ಇನ್ನಷ್ಟು ಸ್ಫೂರ್ತಿಯಿಂದ ಮುಂದೆ ಸಾಗಲಿದೆ ಎಂದು ಮುಜುಂದಾರ್ ಘೋಷಿಸಿದರು.

ಉಗ್ರಗಾಮಿಗಳೊಂದಿಗೆ ಗೆಳೆತನ ಬೆಳೆಸುವ ಮೂಲಕ ಆತ್ಮಹತ್ಯಕಾರಿ ತಂತ್ರವನ್ನು ಅನುಸರಿಸುತ್ತೀರಿ ಎಂದು ಅವರು ಕಾಂಗ್ರೆಸ್‌ಗೆ ಎಚ್ಚರಿಕೆ ನೀಡಿದರು.

ಕಾಂ|| ಸಿನ್ಹಾ ಸಾಮೂಹಿಕ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದ ಬಗೆ, ಬುಡಕಟ್ಟು ಜನರೊಂದಿಗೆ ಬೆರೆಯುತ್ತಿದ್ದ ಬಗೆ, ಅವರ ಸಮರ್ಪಣಾ ಮನೋಭಾವ ಮೊದಲಾದವುಗಳನ್ನು ವಿವರಿಸಿದವರು ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷ ಹಾಗೂ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಬೈದ್ಯನಾಥ್ ಮುಜುಂದಾರ್.

ಶಾಂತಿಯನ್ನು ರಕ್ಷಿಸುವ ಮೂಲಕ ಹಾಗೂ ಯಾವುದೇ ಬೆಲೆ ತೆತ್ತಾದರೂ ತ್ರಿಪುರಾವನ್ನು ಸಮೃದ್ಧಿಯತ್ತ ಕೊಂಡೊಯ್ಯುವ ಮೂಲಕ ಕಾಂ|| ಸಿನ್ಹಾರ ಹುತಾತ್ಮತೆಯ ಸೇಡನ್ನು ತೀರಿಸಿಕೊಳ್ಳುವಂತೆ ಮುಜುಂದಾರ್ ರಾಜ್ಯದ ಜನತೆ ಮತ್ತು ಸರಕಾರಕ್ಕೆ ಕರೆಕೊಟ್ಟರು.

ಜನತೆಯ ಪ್ರತಿನಿಧಿಯ ಹತ್ಯೆಯಿಂದ ಸಾಮೂಹಿಕ ಚಳುವಳಿಯನ್ನು ಯಾವತ್ತೂ ದುರ್ಬಲಗೊಳಿಸಲು ಆಗುವುದಿಲ್ಲ. ಯಾಕೆಂದರೆ ಬಿಮಲ್ ಸಿನ್ಹಾರಂಥ ನಾಯಕರು ಅವರ ಅಸಂಖ್ಯಾತ ಬೆಂಬಲಿಗರಲ್ಲಿ ಬಹುಪಟ್ಟು ಹೆಚ್ಚುತ್ತಾರೆ ಎಂದು ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ಮಾಣಿಕ್ ಡೇ ಆತ್ಮವಿಶ್ವಾಸದಿಂದ ಹೇಳಿದರು.

ಪುಟ 3 ರಿಂದ

......ಹೆಗಡೆಯವರ ತುತ್ತೂರಿ

ಯಾಗಿರುವ ಬಾಗಲಕೋಟೆ ಮತ್ತಿತರ ನಗರ-ಗ್ರಾಮಗಳ ಭೂಮಾಲಕರು, ರೈತರೂ ನಗರವಾಸಿಗಳೂ ಹೆಚ್ಚಿನ ಪರಿಹಾರಕ್ಕಾಗಿ ಹೋರಾಟ ನಡೆಸಿದ್ದಾರೆ. ಆಲಮಟ್ಟಿ ಯೋಜನೆಯನ್ನು ವಿರೋಧಿಸುತ್ತಿದ್ದವರೇ, ಈಗಾಗಲೇ ಪರಿಹಾರ ಪಡೆದು ಅಸಮಾಧಾನಗೊಂಡವರೇ ಬಾಗಲಕೋಟೆ ಮುಳುಗಡೆಯಾಗುತ್ತದೆಂದು ತಿಳಿದೂ ಕಟ್ಟಡ ಕಟ್ಟಿ ಬಾಡಿಗೆ ತಿಂದವರೇ ದೊಡ್ಡ ಭೂಮಾಲಕರೇ ಮುಖಂಡತ್ವ ವಹಿಸಿದ್ದಾರೆ. ಮುಳುಗಡೆ ಪ್ರದೇಶದ ಜನರಿಗೆ ಪರಿಹಾರ, ಪುನರ್ವಸತಿ ವ್ಯವಸ್ಥೆಯಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತಾ ಬಂದಿದೆ. ಪಕ್ಕಾ ಮನೆ, ಅದರಂತೆಯೇ ಸರಕಾರಿ ಜಾಗದಲ್ಲಿ ಅನಧಿಕೃತವಾಗಿ ಮನೆ-ಗುಡಿಸಲು ಕಟ್ಟಿಕೊಂಡಿರುವವರಿಗೆಲ್ಲ ಪರಿಹಾರ, ಪುನರ್ವಸತಿ ವ್ಯವಸ್ಥೆಯಾಗಬೇಕೆಂದು ಒತ್ತಾಯಿಸುತ್ತಲೇ ಬಂದಿದ್ದೇವೆ. ಅದರ ಪರಿಣಾಮವಾಗಿಯೇ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಕೋರೆ ಎಂಬುವರಿಗೆ ರೂ. 2 ಕೋಟಿ ಕೊಟ್ಟು ಬಾಗಲಕೋಟೆ ನವ ನಗರ ನಕಾಶೆ ತೆಗೆದಿದ್ದಾರೆ. ಆದರೆ ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ, ಧನ ಸಹಾಯವ ಮಾಡುವ ಗೋಜಿಗೆ ಹೋಗಲಿಲ್ಲ. ಅಧಿಕಾರದಲ್ಲಿದ್ದಾಗ ಜನರ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸದೆ ಈಗ ಚುನಾಯಿತ ಸರಕಾರದ ಮೇಲೆ ಗೂಬೆ ಕೂಡಿಸಿ ಪಕ್ಷಾಂತರಕ್ಕೆ ಎಡೆ ಮಾಡಿಕೊಡುವ ನೀತಿ ಖಂಡನೀಯ.

ರಾಮಕೃಷ್ಣ ಹೆಗಡೆಯವರ ನಿಲುಮೆ ಮತ್ತು ನೀತಿಯನ್ನು ಖಂಡಿಸುವಾಗ, ಜೆ.ಹೆಚ್.ಪಟೇಲ್ ಸರಕಾರವನ್ನು ಹೊಗಳುತ್ತೇವೆಂದು ತಿಳಿಯಬಾರದು. ನೀರಾವರಿ ಯೋಜನೆಗೆ ಸಾಕಷ್ಟು ಹಣ ಮೀಸಲಿಟ್ಟಿಲ್ಲೆಂದು ಆಪಾದಿಸಿ ಅವರ ಮಂತ್ರಿ ಮಂಡಳದಲ್ಲಿ ಲೋಕೋಪಯೋಗಿ ಮಂತ್ರಿಗಳಾಗಿದ್ದ ದೇವೇಗೌಡರು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವ ಸಂಗತಿ ಓದುಗರಿಗೆ ಗೊತ್ತು. ಹಾಗೆಯೇ ಸಂಯುಕ್ತ ರಂಗ ಸರಕಾರದಲ್ಲಿ ಪ್ರಧಾನ ಮಂತ್ರಿಯಾಗಿದ್ದ ದೇವೇಗೌಡರು ಕೃಷ್ಣ ಮೇಲ್ದಂಡೆ ಯೋಜನೆಗಾಗಿ ಕೇಂದ್ರದಿಂದ ರೂ. 300 ಕೋಟಿ ಕೊಡ ಮಾಡಿದ್ದು ನಿಮಗೆಲ್ಲ ಗೊತ್ತು. ಕೃಷ್ಣ-ಕಾವೇರಿಗಳಂಥ ದೊಡ್ಡ ಯೋಜನೆಗಳಿಗೆ ಕೇಂದ್ರದಿಂದ ಬಂದ ಸಹಾಯ ಅತ್ಯಲ್ಪವಾಗಿದ್ದರೂ ಕೂಡ, ಮೊದಲನೇ ಸಲ ದೇವೇಗೌಡರು ಪ್ರಧಾನ ಮಂತ್ರಿಯೂ ಆದಾಗ ಈ ಸಹಾಯ ಧನ ಬಂದಿದೆಯೆಂಬುದರಲ್ಲಿ ಮಹತ್ವವಿದೆ. ಅದರಂತೆಯೇ ಕೃಷ್ಣ ನಿಗಮ ರಚಿಸಿ ಅದರ ಹೆಸರಿನಲ್ಲಿ ಬಾಂಡ್ ಮುಲಕ ಧನ ಸಂಗ್ರಹಿಸಿ ನೆರೆ ರಾಜ್ಯಗಳ ಒತ್ತಡಕ್ಕೆ ಮಣಿಯದೆ, ಯೋಜನೆ ಕಾರ್ಯವನ್ನು ಮುಂದುವರಿಸಲಾಗುತ್ತಿದೆ. 2000 ಇಸವಿಯೊಳಗಾಗಿ ಈ ಕೃಷ್ಣ ಮೇಲ್ದಂಡೆ ಯೋಜನೆಯ ಕಾರ್ಯ ಮುಗಿಯಬೇಕಾಗಿದೆಂಬ ಅಂಶ ರಾಮಕೃಷ್ಣ ಹೆಗಡೆಯವರಿಗೂ, ಹಿಂದಿನ ಕಾಂಗ್ರೆಸ್ ಸರಕಾರಗಳಿಗೂ ಚೆನ್ನಾಗಿ ಅರಿವಿದ್ದರೂ ಕೂಡ ಅದನ್ನೇ ನಿರ್ಲಕ್ಷಿಸುತ್ತಾ ಬಂದು ಇನ್ನೆರಡು ವರ್ಷಗಳಲ್ಲಿ ಅಥವಾ ಅದಕ್ಕೆ ಮುಂಚೆಯೇ ವಿಧಾನಸಭೆ ಚುನಾವಣೆಯನ್ನೆದುರಿಸಬೇಕಾದ ಸಂದರ್ಭ ಉಂಟಾಗಬಹುದೆಂದು ತಿಳಿದೇ ಕಾಂಗ್ರೆಸ್, ಬಿ.ಜೆ.ಪಿ. ಲೋಕಶಕ್ತಿಗಳೆಲ್ಲ ಸೇರಿ ಆಮರಣ ಉಪವಾಸದಂಥ ಕಠಿಣ ಕ್ರಮಗಳೊಂದಿಗೆ ಬಾಗಲಕೋಟೆಯಲ್ಲಿ ಹೋರಾಟ ನಡೆಸಿದ್ದಾರೆ. ಖುಷ್ಕಿ ಭೂಮಿಗೆ ಪ್ರತಿ ಎಕರೆಗೆ 54 ಸಾವಿರ ರೂಪಾಯಿ ನೀರಾವರಿ ಭೂಮಿಗೆ 90 ಸಾವಿರ ರೂಪಾಯಿ, ಕಬ್ಬು ಬೆಳೆಯುವ ಭೂಮಿಗೆ ರೂ. 1.14 ಸಾವಿರ ರೂಪಾಯಿ ಕೊಡಲು ಸರಕಾರ ಒಪ್ಪಿದೆ. ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗಲೇ ಪರಿಹಾರ ಧನ ಕೊಡಮಾಡಿದ್ದರೆ ಇಷ್ಟು ಪರಿಹಾರ ಕೊಡುವ ಅಗತ್ಯವಿರಲಿಲ್ಲ. ದೊಡ್ಡ ಭೂಮಾಲಕರು ಸರಕಾರ ಕೊಡಲೊಪ್ಪಿರುವ ಈ ಪರಿಹಾರಕ್ಕೆ ಸಮ್ಮತಿಸದೆ ಇನ್ನೂ ಹೆಚ್ಚು ಪರಿಹಾರ ಧನ ಕೇಳಿ ಹೋರಾಡುತ್ತಿದ್ದಾರೆ. ಸಣ್ಣ ಮತ್ತು ಮಧ್ಯಮ ರೈತರಿಗೆ, ಅನಧಿಕೃತವಾಗಿ ಮನೆ-ಗುಡಿಸಲು ಕಟ್ಟಿಕೊಂಡಿರುವವರಿಗೆ ಇಂಥ ಹೋರಾಟದಿಂದ ಹೆಚ್ಚು ಲಾಭ ಸಿಗದೆ ಅನ್ಯಾಯವಾಗುವ ಸಂಭವವಿದೆ. ಇದರ ಕುರಿತು ಎಚ್ಚರಿಕೆ ವಹಿಸುವುದು ಅಗತ್ಯ. ಯಾಕೆಂದರೆ ಈ ಸರಕಾರ ಮೇಲ್ವರ್ಗದ ಜನರ ಒತ್ತಡಕ್ಕೆ ಮಣಿದು ಬಡ-ಮಧ್ಯಮ ವರ್ಗದವರನ್ನು ಕಡೆಗಣಿಸುವ ಸಂಭವವಿದೆ.

ರೈತರ ಆತ್ಮಹತ್ಯೆ ಏಕೆ?

ಪುಟ 1 ರಿಂದ

ಬೆಳೆ ಹಾನಿ ನೆರವಿಗೆ ಸಹಾಯ ಬೇಡುತ್ತಿದ್ದಾರಷ್ಟೆ ಅಲ್ಲದೆ, ರೈತ ಆತ್ಮಹತ್ಯೆ ಯಾಕೆ ಮಾಡಿಕೊಳ್ಳುತ್ತಿದ್ದಾನೆ, ಬೆಳೆ ಹಾನಿ ಯಾಕೆ ಆಗುತ್ತಿದೆ ಎಂಬ ವಿಷಯಗಳ ಕುರಿತು ಗಂಭೀರವಾಗಿ ಚಿಂತನೆ ನಡೆಸಿ ಇನ್ನು ಮುಂದೆ ಅಂಥ ಘಟನೆಗಳು ನಡೆಯದಂತೆ ಉಪಾಯವನ್ನು ಕಂಡುಕೊಳ್ಳುವ ಪ್ರಯತ್ನ ಮಾಡದಿರುವುದು ಖೇದಕರ ಸಂಗತಿ.

ಅಕಾಲಿಕ ಮಳೆ-ನೆರೆ ಹಾವಳಿಯಿಂದ ಬೆಳೆಗಾಗುತ್ತಿರುವ ಹಾನಿಗಾಗಿ ಪರಿಹಾರ ಧನ ಕೊಡಬೇಕೆಂದು ಪ್ರತಿ ವರ್ಷ ನಾವು ಕೇಂದ್ರಕ್ಕೆ ಕೈ ಒಡ್ಡುತ್ತೇವೆ. ಆದರೆ ಈ ವರ್ಷ ಈ ಭಾಗದ ರೈತರಿಗೆ ಹೊಸ ಸಮಸ್ಯೆ ಉಂಟಾಗಿದೆ. ಬೆಳೆ ಹಾನಿಗೆ ಅಕಾಲಿಕ ಮಳೆಯಷ್ಟೇ ಕಾರಣವಲ್ಲ, ಕಳಪೆ ಬೀಜ, ಗೊಬ್ಬರ, ಕ್ರಿಮಿನಾಶಕಗಳು. ಆದರಿಂದಾಗಿ ಸತತ 2-3 ವರ್ಷ ಬೆಳೆಹಾನಿಯಾಗುತ್ತಿದ್ದಂತೆಯೇ ಸಾವುಕಾರ ಮತ್ತು ಸಾಲ ಕೊಟ್ಟವರು ಸಾಲ ಮರುಪಾವತಿಗಾಗಿ ಉಂಟು ಮಾಡುತ್ತಿರುವ ಅಸಹ್ಯ ಕಿರುಕುಳ, ಈ ಅಂಶಗಳತ್ತ ರೈತರು ಗಮನ ಸೆಳೆದಿದ್ದಾರೆ, ಪರಿಹಾರ ಬೇಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರಕ್ಕಾಗಿ ಬೊಬ್ಬಿಡುತ್ತಿರುವವರು ಯಾರೂ ರೈತ ಎಬ್ಬಿಸಿರುವ ಈ ಸಮಸ್ಯೆಗಳ ಕುರಿತು ಕಿಂಚಿತ್ತೂ ಚಿಂತಿಸುತ್ತಿಲ್ಲ. ಕಾಂಗ್ರೆಸ್, ಬಿ.ಜೆ.ಪಿ., ಜನತಾದಳ ಮಾತ್ರವಲ್ಲ ರಾಜ್ಯ ಸರಕಾರವಾಗಲೀ, ರಾಜ್ಯ ಸರಕಾರದ ಕಮಿಟಿಗಳಾಗಲೀ, ಕೇಂದ್ರ ಸರಕಾರದ ತಂಡಗಳಾಗಲೀ, ರೈತರ ಪ್ರತಿನಿಧಿಯಾಗಿಯೇ ಬಿ.ಜೆ.ಪಿ.ಯಲ್ಲಿದ್ದು ಈಗ ಕೇಂದ್ರದಲ್ಲಿ ಮಂತ್ರಿಯಾಗಿರುವ ಬಾಬಾಗೌಡ ಪಾಟೀಲರೇ ಆಗಲಿ ರೈತ ಎದುರಿಸುತ್ತಿರುವ ಸಮಸ್ಯೆಗಳಿಗೆ ಯಾವ ಪರಿಹಾರವನ್ನೂ ಸೂಚಿಸಿಲ್ಲ. ಎಲ್ಲರೂ ರೈತನ ಹೆಸರಲ್ಲಿ ರಾಜಕೀಯ ಮಾಡಲು ಹೊರಟಿದ್ದಾರೆ. ಮುಂದಿನ ವರ್ಷ ವಿಧಾನ ಸಭೆ ಚುನಾವಣೆ ಬರಲಿದೆ. ರೈತನ ಮತ ದಕ್ಕಿಸಿಕೊಳ್ಳುವ ಹೊಂಚಾಗಿ ರೈತನ ಪರಿಹಾರ ಪ್ರಶ್ನೆ ಕಣ್ಣ ಮುಂದಿದೆ. ಈ ರಾಜಕೀಯ ಪಕ್ಷಗಳ ಇಂಥ ರಾಜಕೀಯ ಅತ್ಯಂತ ಖಂಡನೀಯ. ಜೆ.ಹೆಚ್. ಪಟೇಲ್ ಸರಕಾರ ರೈತನ ಆತ್ಮಹತ್ಯೆಯ ಗಂಭೀರತೆಯ ಕುರಿತು ಆಳವಾಗಿ ಚಿಂತಿಸಬೇಕು. ಕೂಡಲೇ ಪರಿಹಾರ ಒದಗಿಸಲು ಮುಂದಾಗಬೇಕು. ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಸಂದಾಯ ಮಾಡಿ ಬೇಗನೇ ಪೂರ್ಣಗೊಳಿಸಬೇಕು. ಪರಿಹಾರ ಕುರಿತು ಯೋಚಿಸಬೇಕು. ಉತ್ತಮ ಬೀಜ, ಗೊಬ್ಬರ, ಕ್ರಿಮಿ ನಾಶಕ ಒದಗಿಸಬೇಕು. ಸಾವುಕಾರರಿಂದ ರೈತರನ್ನು ರಕ್ಷಿಸಿ, ಅವನಿಗೆ ಸುಲಭವಾಗಿ ಸಾಲ ಸಿಗುವಂತೆ, ಸಾಲ ಮರುಪಾವತಿಗೆ ಒಳ್ಳೆ ಅವಕಾಶ ಒದಗಿಸುವಂಥ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಬೇಕು. ರೈತನ ಆತ್ಮಹತ್ಯೆ ತಡೆಹಿಡಿಯಲು ಅದುವೇ ಮಾರ್ಗೋಪಾಯ.

ರಾಜ್ಯಪಾಲರ ನೇಮಕ: ಸಂಕುಚಿತ ಸ್ವಾರ್ಥಕ್ಕಾಗಿ ಅಧಿಕಾರದ

ರಾಜ್ಯಪಾಲರ ಹುದ್ದೆಯನ್ನು ರಾಜಕೀಯಕರಣ ಗೊಳಿಸುವ ಪ್ರಯತ್ನಗಳನ್ನು ಬಿಜೆಪಿ ನೇತೃತ್ವದ ಸರಕಾರ ಮಾಡುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಕೆಲವು ರಾಜ್ಯಪಾಲರಿಂದ ಅವರ ಅಧಿಕಾರಾವಧಿ ಮುಗಿಯುವ ಮೊದಲೇ ರಾಜಿನಾಮೆ ಗಳನ್ನು ಪಡೆದ ರೀತಿ ಹಾಗೂ ಹೊಸ ನೇಮಕಗಳ ಆಯ್ಕೆ ಬಿಜೆಪಿ ಈ ಹುದ್ದೆಯನ್ನು ತನ್ನ ಸಂಕುಚಿತ ಸ್ವಾರ್ಥಕ್ಕೆ ನಗ್ನ ರೀತಿಯಲ್ಲಿ ಬಳಸುತ್ತಿದೆ ಎಂದು ತೋರಿಸಿದೆ. ರಾಷ್ಟ್ರಪತಿಗಳ ಭಾಷಣದ ಮೂಲಕ ಈ ಸರಕಾರ ರಾಜ್ಯಪಾಲರ ಹುದ್ದೆಯನ್ನು ರಾಜಕೀಯ ಸ್ವಾರ್ಥಗಳಿಗೆ ಬಳಸುವುದಿಲ್ಲ ಎಂದು ನೀಡಿದ ವಚನವನ್ನು ಈ ಮೂಲಕ ಮುರಿದಿದೆ ಎಂದು ಸಿಪಿಐ(ಎಂ) ಹೇಳಿದೆ.

ಶ್ರೀಯುತ ಎಸ್.ಎಸ್.ಭಂಡಾರಿಯವರನ್ನು ಬಿಹಾರದ ರಾಜ್ಯಪಾಲರಾಗಿ ನೇಮಿಸಿರುವುದಂತೂ ಅಸಹ್ಯಕರ. ಇವರು ಆರ್.ಎಸ್.ಎಸ್. ನ ಪ್ರಮುಖ ಸದಸ್ಯರು, ರಾಜ್ಯಸಭೆಯಲ್ಲಿ ಬಿಜೆಪಿ ಮುಖಂಡರು ಹಾಗೂ ಅಡ್ವಾಣಿಯವರ ಸ್ಥಾನದಲ್ಲಿ ಬಿಜೆಪಿ ಅಧ್ಯಕ್ಷರಾಗಬಹುದೆಂಬ ನಿರೀಕ್ಷೆಯಿದ್ದ ವ್ಯಕ್ತಿ. ಇಂತಹ ಸಕ್ರಿಯ ರಾಜಕಾರಣವನ್ನು ಬಿಜೆಪಿಯ ದೀರ್ಘಕಾಲದ ಮಿತ್ರ ಪಕ್ಷವೊಂದು ರಾಜ್ಯ ಸರಕಾರದ ವಜಾವನ್ನು ಆಗ್ರಹ ಪಡಿಸುತ್ತಿರುವ ಒಂದು ರಾಜ್ಯಕ್ಕೆ ರಾಜ್ಯಪಾಲರಾಗಿ ನೇಮಿಸಿದು ನಿಜಕ್ಕೂ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಒಂದು ಅತ್ಯಂತ ನಗ್ನ ರೀತಿಯಲ್ಲಿ ಬುಡಮೇಲು ಮಾಡುವ ಕೆಲಸ ಎಂದು ಪೊಲಿಟ್‌ಬ್ಯೂರೋ ಖಂಡಿಸುತ್ತಾ ಈ ರೀತಿ ಬಿಜೆಪಿ ತನ್ನ ಅಧಿಕಾರದ ದುರುಪಯೋಗ ಮಾಡಿಕೊಂಡು ತನ್ನ ಸಂಕುಚಿತ ರಾಜಕೀಯ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುತ್ತಿರುವುದು ಪ್ರಜಾಸತ್ತಾತ್ಮಕ ಸಂಸ್ಥೆಗಳ ಅಧಿಕಾರ ಮತ್ತು ಪಾವಿತ್ರ್ಯವನ್ನು ಬುಡಮೇಲು ಮಾಡುತ್ತದಷ್ಟೇ ಎಂದಿದೆ.

ಗೃಹ ಕಾರ್ಯದರ್ಶಿ ವರ್ಗಾವಣೆ: ಸರ್ವಾಧಿಕಾರೀ ಪ್ರವೃತ್ತಿಯ ಸೂಚಕ

ತಮಿಳುನಾಡಿನ ಕಾನೂನು ವ್ಯವಸ್ಥೆಯನ್ನು ಅಧ್ಯಯನ ಮಾಡಲು ಕಳಿಸಿದ ಕೇಂದ್ರ ತಂಡದಲ್ಲಿದ್ದ ಹಾಗೂ ಕೇಂದ್ರ ಗೃಹ ಇಲಾಖೆಯಲ್ಲಿ ಅಡಿಶನಲ್ ಸೆಕ್ರೆಟರಿ ಆಗಿದ್ದ ಅಶೋಕ್ ಕುಮಾರ್‌ರವರನ್ನು ವರ್ಗಾಯಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತೀವ್ರವಾಗಿ ಟೀಕಿಸಿದೆ. ಈ ತಂಡ ತಮಿಳುನಾಡು ಆಡಳಿತ ಚೆನ್ನಾಗಿ ಕೆಲಸ ಮಾಡಿದೆ ಎಂದು ಹೇಳಿರುವುದರಿಂದ ಅಡ್ವಾಣಿಯವರು ಕುಪಿತರಾಗಿದ್ದರು. ಅದನ್ನು ಅವರು ವ್ಯಕ್ತಪಡಿಸಿದ್ದರು. ಈಗ ಅವರನ್ನು ಯೋಜನಾ ಆಯೋಗಕ್ಕೆ ವರ್ಗ ಮಾಡಿರುವುದು ಇದರ ಫಲ ಎಂಬಂತೆ ಕಾಣುತ್ತದೆ. ಈ ಕ್ರಮ ವಾಜಪೇಯಿ ಸರಕಾರದಲ್ಲಿರುವ ಸರ್ವಾಧಿಕಾರೀ ಅಂಶವನ್ನು ತೋರುತ್ತದೆ, ಹೀಗೆ 'ಕೇಂದ್ರ ತಂಡ'ಗಳನ್ನು ಕಳಿಸುವುದು ಸಂವಿಧಾನದ ಒಕ್ಕೂಟ ಸ್ವರೂಪಕ್ಕೊಂದು ಬೆದರಿಕೆ ಎಂದು ಸಿಪಿಐ(ಎಂ) ಹೇಳಿದೆ.

ಇತ್ತೀಚೆಗೆ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಹೀಗೆ ರಾಜ್ಯಗಳಿಗೆ ಕೇಂದ್ರ ತಂಡಗಳನ್ನು ಕಳಿಸುವ ಕ್ರಮ ಭಾರತೀಯ ಸಂವಿಧಾನದ ಒಕ್ಕೂಟ ಸ್ವರೂಪವನ್ನು ಉಲ್ಲಂಘಿಸುತ್ತದೆ ಎಂದು ಬಲವಾಗಿ ಖಂಡಿಸಿತ್ತು, ಕಾನೂನು-ವ್ಯವಸ್ಥೆ ಒಂದು ರಾಜ್ಯದ ಅಧಿಕಾರ ವ್ಯಾಪ್ತಿಯೊಳಗಿರುವ ವಿಷಯ. ಇದನ್ನು ಮೇಲೆ ಕೇಂದ್ರದ ಗಮನವಿಡಲು ರಾಜ್ಯಪಾಲರ ಹುದ್ದೆ ಮತ್ತಿತರ ವ್ಯವಸ್ಥೆಯಿದೆ. ರಾಜ್ಯಪಾಲರು ರಾಜ್ಯದ ಕಾನೂನು-ವ್ಯವಸ್ಥೆಯ ಬಗ್ಗೆ ನಿಯಮಿತವಾಗಿ ವರದಿಗಳನ್ನು ಕೇಂದ್ರಕ್ಕೆ ಕಳಿಸುತ್ತಿರುತ್ತಾರೆ. ಇವನ್ನೆಲ್ಲಾ ಬದಿಗೊತ್ತಿ ಕೇಂದ್ರ ತಂಡವನ್ನು ಕಳಿಸುವುದು ಅನಗತ್ಯ ಹಸ್ತಕ್ಷೇಪ ಹಾಗೂ ರಾಜ್ಯಗಳ ಸಂವಿಧಾನದತ್ತ ಅಧಿಕಾರಗಳ ಉಲ್ಲಂಘನೆ ಎಂದಿರುವ ಸಿಪಿಐ(ಎಂ) ಕೇಂದ್ರ-ರಾಜ್ಯ ಸಂಬಂಧಗಳ ಈ ನಿರ್ಣಾಯಕ ಪ್ರಶ್ನೆಯಲ್ಲಿ ಬಿಜೆಪಿ ಪ್ರತಿಗಾಮಿ ನಿಲುವು ಪ್ರದರ್ಶಿಸುತ್ತಿದೆ ಎಂದು ಟೀಕಿಸಿದೆ.

'ವಾಜಪೇಯಿ ಸರಕಾರಕ್ಕೆ ಸಂಸತ್ತಿನಲ್ಲಿರುವುದು ಅತ್ಯಲ್ಪ ಬಹುಮತ. ಸಂಸತ್ತು ಮತ್ತು ಜನತೆ ಈಗಾಗಲೇ ರೂಢವಾಗಿರುವ ಕ್ರಮಗಳನ್ನು ಸಂಸ್ಥೆಗಳನ್ನು ಬುಡಮೇಲು ಮಾಡಲು ಬಿಡುವುದಿಲ್ಲ" ಎಂದು ಸಿಪಿಐ(ಎಂ) ವಕ್ತಾರರು ಹೇಳಿದ್ದಾರೆ (ಐಎನ್ಎಸ್)

ಬೆಂಗಳೂರಿನ ಬಿನ್ನಿ ಮಿಲ್ಲಿಗೆ ಬೀಗಮುದ್ರೆ

ಬೆಂಗಳೂರು ನಗರದ ಬಿನ್ನಿ ಮಿಲ್ಲನ್ನು 16.4.98 ರಿಂದ ಬಾಗಶಃ ಬೀಗ ಮುದ್ರೆಗೊಳಪಡಿಸಿ ಅರ್ಧಕ್ಕರ್ಧ ಕಾರ್ಮಿಕರನ್ನು ಬಲವಂತವಾಗಿ ಪಿ.ಆರ್.ಎಸ್. ಹೆಸರಿನಲ್ಲಿ ಮನೆಗೆ ಕಳುಹಿಸಲು ಆಡಳಿತ ಮಂಡಳಿಯು ಸಂಚು ನಡೆಸಿದೆ.


ಹಿಂದೆ 1989 ರಲ್ಲಿ ಒಂದುಬಾರಿ ಮತ್ತು 1994 ರಲ್ಲಿ ಇನ್ನೊಂದು ಬಾರಿ ಒಂಬೊಂಭತ್ತು ತಿಂಗಳ ಕಾಲ ಮಿಲ್ಲಿಗೆ ಬಾಗಿಲು ಹಾಕಿ ಪಿ.ಆರ್.ಎಸ್. ನ್ನು 3000 ಕಾರ್ಮಿಕರ ಮೇಲೆ ಪ್ರಯೋಗಿಸಿ ಇವರ ಕೆಲಸವನ್ನು ಕಸಿದುಕೊಂಡು ಮಿಲ್ಲಿನ ಕಾರ್ಮಿಕ ಸಂಖ್ಯೆಯನ್ನು 1300 ಕ್ಕೆ ಇಳಿಸಿತು. ಆಗ ಮಾನ್ಯತೆ ಪಡೆದ ಬಿನ್ನಿ ಮಿಲ್ ಲೇಬರ್ ಅಸೋಸಿಯೇಷನ್‌ಗೆ ಐಎನ್‌ಟಿಯುಸಿ ಕಾರ್ಯದರ್ಶಿ ಲೀಲಾ ಕೃಷ್ಣನ್ ಮಾರ್ಗದರ್ಶನ ಕೊಡುತ್ತಿದ್ದು. ಸಿಐಟಿಯು ಸಂಘಕ್ಕೆ ಅತ್ಯಧಿಕ ಕಾರ್ಮಿಕರ ಬೆಂಬಲ ವಿದ್ದರೂ, ಕಾರ್ಮಿಕರೆಲ್ಲಾ 9 ತಿಂಗಳ ಹೋರಾಟದ ನಂತರ ಅವರು ಕಾರ್ಮಿಕ ದ್ರೋಹ ಒಪ್ಪಂದ ಮಾಡಿಕೊಳ್ಳುವುದನ್ನು ತಡೆಯಲಾಗಲಿಲ್ಲ.

ಆದರೆ ಈ ಬಾರಿ ಕಾರ್ಮಿಕರೆಲ್ಲಾ ಒಗ್ಗಟ್ಟಾಗಿ ಸಿಐಟಿಯು ಮುಖಂಡರಾದ ಕಾಂ|| ಕೆ.ಎಸ್.ಸುಬ್ರಹ್ಮಣ್ಯರವರ ನೇತೃತ್ವದಲ್ಲಿ ಬಿನ್ನಿ ಮಾಲೀಕರ ದೌರ್ಜನ್ಯವನ್ನು ಪ್ರತಿಭಟಿಸುತ್ತಿದ್ದಾರೆ. ಬೀಗಮುದ್ರೆಗೊಳಪಡದ ಕಾರ್ಮಿಕರೆಲ್ಲಾ ಮುಷ್ಕರದಲ್ಲಿದ್ದಾರೆ. ಮಾನ್ಯತೆ ಪಡೆದ ಬಿಎಂಎಲ್‌ಎ ಸಂಘಕ್ಕೂ ಕಾಂ. ಸುಬ್ರಹ್ಮಣ್ಯನವರೇ ಮಾರ್ಗದರ್ಶನ ಕೊಡುತ್ತಿದ್ದಾರೆ.

17.4.98 ರಂದು 1000 ಕ್ಕೂ ಮಿಕ್ಕಿ ಕಾರ್ಮಿಕರು ಬೃಹತ್ ಮೆರವಣಿಗೆಯಲ್ಲಿ ಕಾರ್ಮಿಕ ಆಯುಕ್ತರ ಕಚೇರಿಗೆ ಹೋಗಿ ಅವರ ಮಧ್ಯಸ್ಥಿಕೆಯನ್ನು ಕೋರಿದ್ದಾರೆ. 20.4.98 ರಂದು ರಾಜಿ ಸಂಧಾನ ಸಭೆ ಪ್ರಾರಂಭವಾಗಿದೆ.

7000 ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದ 110 ವರ್ಷಗಳ ಇತಿಹಾಸವಿರುವ ಬಿನ್ನಿ ಮಿಲ್ಲಿನ ಕಾರ್ಮಿಕರ ಸಂಖ್ಯೆಯನ್ನು ಅತೀವ ಕಮ್ಮಿ ಮಾಡಿ ನೂರಾರು ಏಕರೆ ಆಸ್ತಿಯನ್ನು ಕಬಳಿಸುವುದೇ ಈ ಮಾಲಿಕರ ಕುತಂತ್ರವಾಗಿರುತ್ತದೆ ಎಂದು ಕೆ.ಎಸ್.ಸುಬ್ರಮಣ್ಯ ಹೇಳಿದ್ದಾರೆ.

ಮೈಸೂರಿನಲ್ಲಿ ಇಎಂಎಸ್ ವಿಚಾರಸಂಕಿರಣ



ಕಾಂ. ಇ.ಎಂ.ಎಸ್. ಲಾಲ್‌ಸಲಾಮ್

ಏಪ್ರಿಲ್ 8 ರಂದು ಮೈಸೂರು ಪುರಭವನದಲ್ಲಿ ಇಎಂಎಸ್ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಮಾರ್ಚ್ 19 ರಂದು ಕೊನೆಯುಸಿರೆಳೆದ ಮಹಾನ್ ನಾಯಕ ಕಾಂ. ಇಎಂಎಸ್ ನಂಬೂದರಿಪಾಡ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಮತ್ತು ಅವರ ಚಿಂತನೆ ಪಸರಿಸುವ ಪ್ರಯತ್ನವಾಗಿತ್ತು ಈ ವಿಚಾರಸಂಕಿರಣ.

95 ಹರೆಯದ ಕಂಚಿನ ಕಂಠದ ಶಿವಪುರ ಧ್ವಜ ಸತ್ಯಾಗ್ರಹದ ಧೀರ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಂ. ಎಸ್.ಜೋಯಿಸ್ ಸಭಿಕರನ್ನುದ್ದೇಶಿಸಿ ಮಾತನಾಡುತ್ತಾ ಕಾಂ. ಇಎಂಎಸ್ ಅವರು ರಾಷ್ಟ್ರನಾಯಕರು, ಅವರು ಯಾವದೇ ಪಕ್ಷಕ್ಕೆ ಅಥವಾ ಪಂಥಕ್ಕೆ ಸೀಮಿತರಲ್ಲವೆಂದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಕಮ್ಯುನಿಸ್ಟರು ಜನರನ್ನು ಸಂಘಟಿಸಿದ ರೀತಿಯನ್ನು ಅವರು ಮೆಚ್ಚಿಕೊಂಡರು.

ಮೈಸೂರಿನ ಹೆಸರಾಂತ ವಿಚಾರವಾದಿ ಶ್ರೀ ಕೆ.ರಾಮದಾಸ್‌ರವರು ಮಾತನಾಡುತ್ತ ಇಎಂಎಸ್‌ರವರು ಈ ಶತಮಾನದ ಮಹಾನ್ ಚಿಂತಕರಲ್ಲೆ ಅಗ್ರಗಣ್ಯರು, ಅಂತಹವರ ಚಿಂತನೆಯನ್ನು ಪಸರಿಸುವ ಕಾರ್ಯ ಸ್ತುತ್ಯಾರ್ಹ ಎಂದರು. ನಮ್ಮ ಪತ್ರಿಕೆಗಳಿಗೆ ಸುದ್ದಿಮಾಧ್ಯಮಗಳಿಗೆ ಇಂತಹ ಮಹಾನ್ ಚಿಂತಕ, ಶೋಷಿತ ವರ್ಗದ ದನಿ ತೀರಿಹೋದದ್ದು ದೊಡ್ಡ ಸುದ್ದಿಯಾಗದೇ ಇದ್ದದ್ದು ದುರಂತ ಎಂದು ವಿಷಾದಿಸಿದರು.

ಮಾನಸ ಗಂಗೋತ್ರಿಯ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾದ ಶ್ರೀ ವಿ.ಕೆ.ನಟರಾಜ್‌ರವರು ದೇಶದ ಯೋಜನಾ ಬದ್ಧ ಅಭಿವೃದ್ಧಿಗೆ ಇಎಂಎಸ್‌ರವರು ನೀಡಿದ ಕೊಡುಗೆಯನ್ನು ಸ್ಮರಿಸಿದರು. ಭೂಸುಧಾರಣೆಯ ಅನುಷ್ಠಾನದ ಆದ್ಯ ಪ್ರವರ್ತಕ ಇಎಂಎಸ್ ಎಂದು ಅವರು ಅಭಿಪ್ರಾಯ ಪಟ್ಟರು. ಇಎಂಎಸ್‌ರವರ ಬರಹಗಳನ್ನು ಸ್ಮರಿಸಿಕೊಂಡ ಅವರು 'ಮಹಾತ್ಮ ಮತ್ತು ಅವರ ವಾದ ಮತ್ತು ಭಾರತ ಸ್ವಾತಂತ್ರ್ಯ ಹೋರಾಟದ ಇತಿಹಾಸ ಕೃತಿಗಳನ್ನು ಎಲ್ಲರೂ ಅಭ್ಯಸಿಸಲೇಬೇಕೆಂದು ಹೇಳಿದರು.

ಮೈಸೂರಿನ ಖ್ಯಾತನ್ಯಾಯವಾದಿ ಶ್ರೀ ವಿ.ಹೆಚ್.ಗೌಡರು ಮಾತನಾಡಿ, ಇಎಂಎಸ್ ಅವರು ಆಗ ಮಾಡಿಸಿದ ಭೂಮಿತಿ ಕಾಯ್ದೆ ಅವರ ಮಂತ್ರಿಮಂಡಳ ಈಗ ಮಂಡಿಸಿದ ವಿದ್ಯಾಭ್ಯಾಸ ಮಸೂದೆಯನ್ನು ಶ್ಲಾಘಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯ ಕಾ.ಎಸ್.ವೈ.ಗುರುಶಾಂತ್‌ರವರು ಇಎಂಎಸ್‌ರವರ ಸರಳ ಜೀವನ ಮತ್ತು ತಾವು ಅವರೊಡನೆ ಕಳೆದ ಹಲವು ಕ್ಷಣಗಳನ್ನು ನೆನಪಿಸಿಕೊಂಡರು. ಕರ್ನಾಟಕದಲ್ಲಿ ಇಎಂಎಸ್ ಅವರ ಚಿಂತನೆಗಳು ಹೆಚ್ಚು ಪ್ರಸ್ತುತ, ಕಾರ್ಮಿಕ ರೈತರ ಹೋರಾಟವನ್ನು ರೂಪಿಸಲು ಇದು ಅಗತ್ಯ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಂ. ಎಂ.ಎಸ್.ಉಗ್ರಪ್ಪನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಇಎಂಎಸ್‌ರವರ ಮೈಸೂರು ಭೇಟಿಯ ಕ್ಷಣಗಳನ್ನು ಸಭಿಕರ ಮುಂದಿರಿಸಿದರು. ಕಾಂ. ಕೆ.ಬಸವರಾಜ್ ಸ್ವಾಗತಿಸಿದರೆ ಕಾಂ.ಎನ್.ಎಸ್.ಪ್ರಭಾಕರ್ ವಂದನಾರ್ಪಣೆ ಸಲ್ಲಿಸಿದರು.

ಬಹುದಿನಗಳ ಬೇಡಿಕೆಗಳ ಈಡೇರಿಕೆಗಾಗಿ ಅಂಗನವಾಡಿ ನೌಕರರ ಮೆರವಣಿಗೆ:

ಬೀದರ್: ಬಹುದಿನಗಳಿಂದಲೂ ನೆನೆಗುದಿಯಲ್ಲಿರುವ ಂಗನವಾಡಿ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿ.ಐ.ಟಿ.ಯು) ದ ನೇತೃತ್ವದಲ್ಲಿ ಬೀದರ್‌ನ ನೂರಾರು ಕಾರ್ಯಕರ್ತೆಯರು ಮೆರವಣಿಗೆ ಮುಖಾಂತರ ಜಿಲ್ಲಾ ಪಂಚಾಯಿತ್ ಕಾರ್ಯದರ್ಶಿಗೆ ಮನವಿ ಸಲ್ಲಿಸಿ ಧರಣಿ ನಡೆಸಿದರು.

ಸಮಗ್ರ ಮಹಿಳಾ ಮತ್ತು ಮಕ್ಕಳ ಯೋಜನೆಯಡಿ ಕಳೆದ 20 ವರ್ಷಗಳಿಂದಲು ದುಡಿಯುತ್ತಿರುವ ಅಂಗನ ವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ಗೌರವ ಧನವನ್ನು 800 ರಿಂದ 1120 ರೂ ಹೆಚ್ಚಿಸಬೇಕೆಂದು ಕಾರ್ಯಕರ್ತೆಯರು ಪ್ರಮುಖ ಬೇಡಿಕೆಯ ಜೊತೆಗೆ ಅಂಗನವಾಡಿ ನೌಕರರನ್ನು ಖಾಯಂ ಮಾಡಬೇಕು. ಕೆ.ವಿ.ಟಿ ಆದೇಶವನ್ನು ಸರ್ಕಾರ ಜಾರಿಗೆ ತರಬೇಕು 1000 ಬೋನಸ್ ಕೊಡಬೇಕು. ತಿಂಗಳ 5ನೇ ತಾರಿಖು ಒಳಗೆ ಸಂಬಳ ನೀಡ ಬೇಕೆಂಬ ಹಲವಾರು ಬೇಡಿಕೆಗಳುಳ್ಳ ಮನವಿ ಪಟ್ಟಿಯಲ್ಲಿ ಸೇರಿಸಲಾಗಿತ್ತು.

ಏಪ್ರಿಲ್ 18 ರಂದು ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾದ ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳ ಮುಖಾಂತರ ಮೆರವಣಿಗೆ ನಡೆಸಿ ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಹಾಗೂ ಶಾಸಕ ಹಶ್ಮಿಯವರಿಗೆ ಮನವಿ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ 350 ಕ್ಕೆ ಹೆಚ್ಚು ಕಾರ್ಯಕರ್ತೆಯರು ಭಾಗವಹಿಸಿದ್ದರು.



ಕೃಷ್ಣಾ ನೀರಾವರಿ ಯೋಜನೆ ಸಂತ್ರಸ್ತರ ಹೋರಾಟಕ್ಕೆ ಬೆಂಬಲ

ಕೃಷ್ಣಾ ನೀರಾವರಿ ಯೋಜನೆಯಡಿ ಸಂತ್ರಸ್ತಗೊಂಡ ಕುಟುಂಬಗಳ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸಂಸದ ಶಾಸಕರು ಹಾಗೂ ಸಂತ್ರಸ್ತ ಕುಟುಂಬಗಳು ಮಾಡುವ ಹೋರಾಟಕ್ಕೆ ಸಿಪಿಐ(ಎಂ) ಬಿಜಾಪುರ ಜಿಲ್ಲಾ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

ಏಪ್ರಿಲ್ 13 ರಂದು ಕಾಂ. ಮಳಸಿದ್ದ ನಾಯ್ಕೋಡಿಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯು ಸರಕಾರದ ವಿಳಂಬ ನೀತಿಯನ್ನು ತೀವ್ರವಾಗಿ ಖಂಡಿಸಿ ಸಂತ್ರಸ್ತ ಕುಟುಂಬಗಳಿಗೆ ಶೀಘ್ರವಾಗಿ ಪರಿಹಾರ ನೀಡುವಂತೆ ಸಭೆಯು ಸರಕಾರಕ್ಕೆ ಆಗ್ರಹಿಸಿತು.

ಪರಿಹಾರ ನೀಡುವಾಗ ಬಾಡಿಗೆ ಗುಡಿಸಲು, ಶೆಡ್ಡುಗಳು, ಅಧಿಕೃತ, ಅನಧಿಕೃತ ಈ ಮುಂತಾದ ರೀತಿಯಲ್ಲಿ ವಾಸವಾಗಿರುವ ಎಲ್ಲಾ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಕೊಡಬೇಕು ಎಂದೂ ಸಮಿತಿ ಒತ್ತಾಯಪಡಿಸಿತು.

ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಹೆಚ್ಚು ಸಮಯದವರೆಗೆ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್ ಸರಕಾರವು ಈ ಬಗ್ಗೆ ಹೆಚ್ಚಿನ ಗಮನ ಕೊಡದೇ ಈ ಯೋಜನೆಯ ಅನುಷ್ಠಾನಕ್ಕೆ ವಿಳಂಬವಾಗಿದೆ. ಕಾಂಗ್ರೆಸ್ ಸರಕಾರವು ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡು ಕೃಷ್ಣರಾಜಸಾಗರ ಆಣೆಕಟ್ಟಿನಂತೆ ಕೆಲಸವನ್ನು ಐದೇ ವರ್ಷಗಳಲ್ಲಿ ಮುಗಿಸುವ ರಾಜಕೀಯ ದೃಢ ಸಂಕಲ್ಪದಿಂದ ಕೆಲಸ ಮಾಡಿದ್ದಲ್ಲಿ ಈ ಜಿಲ್ಲೆ ಸಮೃದ್ಧವಾದ ಜಿಲ್ಲೆಯಾಗುತ್ತಿತ್ತು ಎನ್ನುವುದನ್ನು ಈ ಮುಖಂಡರು ತಿಳಿದುಕೊಂಡರೆ ಸಾಕು ಎಂದು ಸಭೆಯು ಕಾಂಗ್ರೆಸ್ಸಿಗೆ ತಿಳಿಸಿತು.

ರೈತ ಸಂಘದ ಹೋರಾಟಕ್ಕೆ ಬೆಂಬಲ

ಬೆಳೆ ವಿಮಾ, ಬೆಳೆನಷ್ಟ ಪರಿಹಾರ, ಮುಳವಾಡ ಏತ ನೀರಾವರಿ, ಗುತ್ತಿ ಬಸವಣ್ಣಾ ಏತನೀರಾವರಿ ಇಂಡಿ ಉಪಕಾಲುವೆ ಭೀಮಾ ನದಿ ಬಾಂದರ ಯೋಜನೆ ಅಡಿಹುಡಿ, ತದಲಬಾಗಿ ಏತ ನೀರಾವರಿ ಮುಂತಾದ ನೀರಾವರಿ ಯೋಜನೆಗಳಿಗಾಗಿ ಹಾಗೂ ರೈತರ ಪಂಪ್‌ಸೆಟ್ ವಿದ್ಯುತ್ ಬೆಲೆ ಮೀಟರ್ ಅಳವಡಿಕೆ ಡಿಪಾಸಿಟ್ ಹಣ ಹೆಚ್ಚಳ ಮುಂತಾದ ರೈತ ವಿರೋಧಿ ನೀತಿಯನ್ನು ತಳೆದಿರುವ ಸರಕಾರದ ಕ್ರಮವನ್ನು ವಿರೋಧಿಸಿ ನಡೆಸಲಿರುವ ಕರ್ನಾಟಕ ಪ್ರಾಂತರೈತ ಸಂಘದ ಹೋರಾಟಕ್ಕೆ ಪಕ್ಷವು ಬೆಂಬಲ ವ್ಯಕ್ತಪಡಿಸಿತು.

ರೈತ ಸಂಘಗಳ ಜಂಟಿ ಹೋರಾಟಕ್ಕೆ ಬೆಂಬಲ

ರೈತರ ಬೇಡಿಕೆಗಳಿಗಾಗಿ ರಾಜ್ಯದಲ್ಲಿ ಜಂಟಿಯಾಗಿ ಹೋರಾಟ ಮಾಡಲು ತೀರ್ಮಾನಿಸಿರುವ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ರಾಜ್ಯ ರೈತ ಸಂಘ(ಎಐಕೆಎಸ್), ಕರ್ನಾಟಕ ರಾಜ್ಯ ರೈತ ಸಂಘಗಳ ಹೋರಾಟವನ್ನು ಸಭೆಯು ಬೆಂಬಲಿಸಲು ತೀರ್ಮಾನಿಸಿತು.

• ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ. ಎನ್.ಕೆ.ಉಪಾಧ್ಯಾಯ, ಕಾಂ. ಭೀಮಸಿ ಕಲಾದಗಿ, ಕಾಂ. ಅಣ್ಣಾರಾಯ ಈಳಗೇರ, ಕಾಂ. ಎನ್.ಎಲ್.ನಧಾಫ, ಕಾಂ. ಸುರೇಖಾ ರಜಪೂತ, ಕಾಂ. ಡಿ.ಎಂ.ಖಿಲಾಸಿ ಮುಂತಾದ ಮುಖಂಡರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಕೇಂದ್ರ ವಾಣಿಜ್ಯ ಸಚಿವರಿಗೆ ಶಿಕ್ಷಣವನ್ನು ವಾಣಿಜ್ಯೀಕರಿಸುವ ತರಾತುರಿ? ಉತ್ತರ ಕನ್ನಡ ವಿದ್ಯಾರ್ಥಿಗಳ ಪ್ರಶ್ನೆ

ಕೇಂದ್ರ ವಾಣಿಜ್ಯ ಸಚಿವ ರಾಮಕಷ್ಣ ಹೆಗಡೆಯವರು ಶಿಕ್ಷಣದ ಖಾಸಗೀಕರಣದಿಂದ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡಲು ಸಾಧ್ಯವೆಂದು ಪ್ರತಿಪಾದಿಸಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಒಪ್ಪುವದಿಲ್ಲ ಎಂದು ಉತ್ತರ ಕನ್ನಡ ಜಿಲ್ಲಾ ಸಮಿತಿ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದೆ.

ಎಲ್ಲರಿಗೂ ಕಡ್ಡಾಯ ಉಚಿತ ಶಿಕ್ಷಣ ಸಿಗಬೇಕಾದರೆ ಅದು ರಾಷ್ಟ್ರೀಕರಣದಿಂದ ಮಾತ್ರ ಸಾಧ್ಯ ಎಂದು ತನ್ನ ಅಭಿಪ್ರಾಯವನ್ನು ಪುನರುಚ್ಚರಿಸಿದೆ.

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಕ್ಷೇತ್ರಕ್ಕೆ ಹೆಚ್ಚು ಮಾನ್ಯತೆ ನೀಡುವುದರಿಂದಲೇ ನಮ್ಮ ರಾಜ್ಯದಲ್ಲಿ ಯುಕೆಜಿ ಪ್ರವೇಶ ಪಡೆಯಲು ಒಂದು ಲಕ್ಷ ದೇಣಿಗೆ ನೀಡಬೇಕಾದ ಪರಿಸ್ಥಿತಿ ಬಂದಿದೆ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಜಾತಿಗೊಂದು, ಮಠಕ್ಕೊಂದು ಇಂಜಿನಿಯರಿಂಗ್, ಮೆಡಿಕಲ್ ಕಾಲೇಜ್ ನೀಡಿ ರಾಜ್ಯವನ್ನು ದೇಶದಲ್ಲಿ ದೊಡ್ಡ ಸುಲಿಗೆ ಶಿಕ್ಷಣ ಕೇಂದ್ರವಾಗಿ ನಿರ್ಮಿಸಿರುತ್ತಾರೆ. ವಾಣಿಜ್ಯ ಸಚಿವರಿಗೆ ಶಿಕ್ಷಣವನ್ನು ಸಹ ವಾಣಿಜ್ಯೀಕರಣಗೊಳಿಸುವ ತರಾತುರಿ ಯಾಕೆಂದು ಎಸ್‌ಎಫ್‌ಐ ಗೆ ಅರ್ಥವಾಗುತ್ತಿಲ್ಲ.

ಸರಕಾರಿ ಶಿಕ್ಷಣ ಸಂಸ್ಥೆಗಳ ಮೂಲಕವೇ ಎಲ್ಲರಿಗೂ ಶಿಕ್ಷಣ ನೀಡಲು ಸಾಧ್ಯವೆನ್ನುವುದನ್ನು ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳು ದೇಶಕ್ಕೆ ತೋರಿಸಿವೆ. ಇದು ನಮ್ಮ ಇವತ್ತಿನ ಕೇಂದ್ರ ಸರಕಾರಕ್ಕೆ ಮಾದರಿ ಯಾಗಬೇಕು. ಶಿಕ್ಷಣವನ್ನು ಖಾಸಗೀಕರಿಸಿ ಬಡ ಜನರಿಗೆ ಶಿಕ್ಷಣ ಗಗನ ಕುಸುಮವಾಗುವಂತೆ ಯಾವುದೇ ಯೋಜನೆ ಜಾರಿಗೊಳಿಸಿದರೆ ಎಸ್.ಎಫ್.ಐ ಶಿಕ್ಷಣ ಪ್ರೇಮಿಗಳನ್ನು ಸೇರಿಸಿ ಕೊಂಡು ದೊಡ್ಡ ರೀತಿಯಲ್ಲಿ ಆಂದೋಲನವನ್ನು ಹಮ್ಮಿಕೊಳ್ಳಲಿದೆ ಎಂದು ಎಸ್.ಎಫ್.ಐ ಉತ್ತರ ಕನ್ನಡ ಜಿಲ್ಲಾ ಅಧ್ಯಕ್ಷರಾದ ಯಮುನಾ ಗಾಂವ್‌ಕರ್ ಎಚ್ಚರಿಸಿದ್ದಾರೆ.

ತರಾತುರಿಯ ಆಮದು ಉದಾರೀಕರಣ

ಬಿ.ಜೆ.ಪಿ.ಯ ನಿಜ ರೂಪವನ್ನು ಮತ್ತೊಮ್ಮೆ ಬಯಲಿಗೆಳೆದಿದೆ

ದೇಶಾದ್ಯಂತ ಪ್ರತಿಭಟಿಸಲು ಸಿ.ಪಿ.ಐ.(ಎಂ) ಕರೆ

ಬಿ.ಜೆ.ಪಿ. ನೇತೃತ್ವದ ಸರ್ಕಾರದ ಪರವಾಗಿ ವಾಣಿಜ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು 1997-2002 ಅವಧಿಗೆ ಘೋಷಿಸಿದ ಆಮದು-ರಫ್ತು ನೀತಿ ಬಿ.ಜೆ.ಪಿ.ಯ 'ಸ್ವದೇಶಿ' ಕೇವಲ ಜನಗಳನ್ನು ಮೋಸಗೊಳಿಸಲು ಎಂಬುದನ್ನು ದೃಢಪಡಿಸಿದೆ ಎಂದು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಈ ನೀತಿಯ ನಿಜವಾದ ಉದ್ದೇಶ ವಿಶ್ವ ವ್ಯಾಪಾರ ಸಂಸ್ಥೆ(WTO), ಐಎಂಎಫ್ ಮತ್ತು ಅಮೆರಿಕಾವನ್ನು ಸಂತುಷ್ಟಗೊಳಿಸುವುದು, ಅದರಿಂದ ಭಾರತೀಯ ಆರ್ಥಿಕಕ್ಕೆ ತೊಂದರೆಯಾದರೇನಂತೆ! ಹೊಸ ಆಮದು-ರಫ್ತು ನೀತಿ ಮಾಡುತ್ತಿರುವುದು ಅದನ್ನೇ ಎಂದು ಸಿಪಿಐ(ಎಂ) ಖಂಡಿಸಿದೆ.

ಉದಾರ ಆಮದಿನಿಂದಾಗಿ ಏರುತ್ತಿರುವ ತೀವ್ರ ವ್ಯಾಪಾರ ಕೊರತೆ ಹಾಗೂ ಕೈಗಾರಿಕಾ ಸ್ಥಗಿತತೆಯ ಹಿನ್ನೆಲೆಯಲ್ಲಿ ಈ ನೀತಿಯ ಘೋಷಣೆಯಾಗಿದೆ. 1996-97 ರ ಏಪ್ರಿಲ್-ಫೆಬ್ರವರಿ ಅವಧಿಯಲ್ಲಿ ರಫ್ತು ಬೆಳವಣಿಗೆ ದರ 5.61% ಇದ್ದರೂ ಇದೇ ಅವಧಿಯಲ್ಲಿ 1997-98 ರಲ್ಲಿ 2.63% ಕ್ಕಿಳಿದಿದೆ. ತದ್ವಿರುದ್ಧವಾಗಿ ತೈಲೇತರ ಆಮದು ಈ ವರ್ಷ 13.65% ರಷ್ಟು ಏರಿದೆ. ವಿಶ್ವ ತೈಲ ಬೆಲೆಗಳಲ್ಲಿ ಕಡಿತದಿಂದಾಗಿ ತೈಲ ಆಮದು ಖರ್ಚು ಕಮ್ಮಿಯಾಗಿದ್ದರೂ ವ್ಯಾಪಾರ ಬಾಕಿ 1995-96 ರ ಈ ಅವಧಿಯಲ್ಲಿ 5.3 ಶತಕೋಟಿ ಡಾಲರುಗಳಿದ್ದದ್ದು, 1996-97 ರಲ್ಲಿ 6.4 ಶತಕೋಟಿ ಡಾಲರುಗಳಾಯಿತು. 1997-98 ರ ಇದೇ ಅವಧಿಯಲ್ಲಿ ಇನ್ನೂ ಏರಿ ಇಡೀ ವರ್ಷದ ವ್ಯಾಪಾರ ಬಾಕಿ 7.7 ಶತಕೋಟಿ ಡಾಲರುಗಳಿಗೇರುವ ಸಂಭವವಿದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ರೂಪಾಯಿ-ಡಾಲರು ದರ ಇಳಿದರೂ (ಈ ವರ್ಷ 4% ಹೆಚ್ಚು) ಕೂಡಾ ರಫ್ತು ಸ್ಥಗಿತತೆ ಉಂಟಾಗಿದೆ. ಆಮದು ಇದ್ದಕ್ಕಿದ್ದಂತೆ ಹೆಚ್ಚಾದ್ದು ಕೈಗಾರಿಕಾ ಬೆಳವಣಿಗೆಯಿಂದಾಗಿ ಅಲ್ಲ, ಬದಲಿಗೆ ಉಕ್ಕು, ಭಾರೀ ರಾಸಾಯನಿಕಗಳು, ಸ್ಥಾವರ ಯಂತ್ರಗಳು ಮತ್ತು ಮಧ್ಯಂತರ ಪೆಟ್ರೋಲಿಯಂ ಉತ್ಪನ್ನಗಳನ್ನೆಲ್ಲಾ ಬೇಕಾಬಿಟ್ಟಿ ಆಮದು ಮಾಡಿದ್ದರಿಂದ. ಈ ವಿದೇಶಿ ಉತ್ಪಾದನೆಗಳು ಬಂದು ನಮ್ಮಲ್ಲಿ ರಾಶಿ ಬಿದ್ದದ್ದರಿಂದ ದೇಶೀ ಉತ್ಪಾದನೆಗಳಿಗೆ ಬೇಡಿಕೆಯಿಲ್ಲದಂತಾಗಿ ಕೈಗಾರಿಕಾ ಸ್ಥಗಿತತೆ ಉಂಟಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ನೆನಪಿಸಿದೆ.

ಏಶ್ಯಾದ ಕರೆನ್ಸಿಗಳ ಮೌಲ್ಯ ಇಳಿತದಿಂದಾಗಿ ಮುಂದೆಯೂ ರಫ್ತು ಹೆಚ್ಚುವ ಲಕ್ಷಣಗಳಿಲ್ಲ. ಐಎಂಎಫ್ ಕೂಡಾ ತನ್ನ ಇತ್ತೀಚಿನ 'ವಿಶ್ವ ಆರ್ಥಿಕ ಕಣ್ನೋಟ' ದಲ್ಲಿ ಮುಂದಿನ ವರ್ಷ ಭಾರತದ ರಫ್ತು ಹೆಚ್ಚಳವಿರುವುದಿಲ್ಲ ಎಂದಿದೆ. ದಕ್ಷಿಣ ಪೂರ್ವ ಏಶ್ಯಾದ ಬಿಕ್ಕಟ್ಟಿನ ಪರಿಣಾಮವಾಗಿ ಭಾರತದ ರೂಪಾಯಿ ಮೇಲೆ ಊಹಾಪೋಹದ ಒತ್ತಡವಿರುವುದರಿಂದ ಭಾರತದ ವ್ಯಾಪಾರ ಬಾಕಿಯನ್ನು ಹತೋಟಿಯಲ್ಲಿಡುವುದು ಅಗತ್ಯವಾಗಿತ್ತು. ಆದರೆ ಬಿಜೆಪಿ ನೇತೃತ್ವದ ಸರಕಾರ ಮಾಡಿರುವುದೇ ಬೇರೆ.

ಇಂತಹ ಕ್ಷಣದಲ್ಲೇ ಸರಕಾರ ದೊಡ್ಡ ಪ್ರಮಾಣದಲ್ಲಿ ಆಮದು ಉದಾರೀಕರಣದ ಕ್ರಮ ಕೈಗೊಂಡಿದೆ. ಸುಮಾರು 340 ಸರಕುಗಳನ್ನು ಓ.ಜಿ.ಎಲ್. (ಬಹಿರಂಗ ಸಾರ್ವತ್ರಿಕ ಪರವಾನಗಿ - ಅಂದರೆ ಆಮದು ಹತೋಟಿ ಇಲ್ಲದ) ಪಟ್ಟಿಗೆ ವರ್ಗಾಯಿಸಿದೆ. ವಿಡಿಯೋ ಕ್ಯಾಮರಾಗಳು, ಕ್ಯಾಮ್ ಕಾರ್ಡ್‌ಗಳು, ರೇಝರ್ ಬ್ಲೇಡ್‌ಗಳು, ಸ್ನಾನದ ಸಾಬೂನು, ಏಡಿ, ಚಿಪ್ಪುಮೀನು, ಸೀಗಡಿ, ಸಂಪೂರ್ಣ ವಿಗ್‌ಗಳು, ಅಡಿಕೆ ಕೋಣೆಯ ಕಲ್ಮಶಗಳನ್ನು ಹೊರಹಾಕುವ ಸಾಧನಗಳು ಇತ್ಯಾದಿ. ಹೀಗೆ ಹೊಸದಾಗಿ ಓ.ಜಿ.ಎಲ್. ಪಟ್ಟಿಗೆ ವರ್ಗಾಯಿಸುವ ಸರಕುಗಳು ಅವಶ್ಯಕ ಸಾಮಾಗ್ರಿಗಳೂ ಅಲ್ಲ, ರಫ್ತನ್ನು ಪ್ರೋತ್ಸಾಹಿಸಲು ಅಗತ್ಯವಾದ ಕಚ್ಚಾಸಾಮಾಗ್ರಿಗಳೂ ಅಲ್ಲ. ಹಸಿರುಮೆಣಸು, ಈರುಳ್ಳಿ, ತರಕಾರಿ, ವಿವಿಧ ಹಣ್ಣುಗಳು, ಸೇಬಿನ ರಸ, ಮಾವಿನ ರಸ, ಹತ್ತಿ ಇತ್ಯಾದಿಗಳೂ ಈ ಪಟ್ಟಿಯಲ್ಲಿವೆ. ಇದು ದೇಶದ ರೈತರ ಹಿತಾಸಕ್ತಿಗಳಿಗೂ ಮಾರಕ. ಈ ಆಮದುಗಳನ್ನು ಉದಾರೀಕರಿಸಲು ಯಾವುದೇ ಸಮರ್ಥನೆಯಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಈ ಹೊಸ ನೀತಿಯಲ್ಲಿ 200% ರಫ್ತು ಹೆಚ್ಚಳದ ಮಾತಿದೆ. ಅದು ಕೇವಲ ಟೊಳ್ಳು ಮಾತು ಎಂದಿರುವ ಪೊಲಿಟ್‌ಬ್ಯೂರೋ ಈ ಉದಾರ ಆಮದು ಅನಿವಾರ್ಯವಾಗಿಯೇ ಹಣವಂತ ವಿಭಾಗಗಳ 'ವಿದೇಶಿ ಸರಕುಗಳ ವ್ಯಾಮೋಹ'ವನ್ನು ಹೆಚ್ಚಿಸಿ ವ್ಯಾಪಾರ ಬಾಕಿಯನ್ನು ಇನ್ನಷ್ಟು ಹೆಚ್ಚಿಸಿ ಕೈಗಾರಿಕಾ ಸ್ಥಗಿತತೆಯನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದಿರುವ ಸಿಪಿಐ(ಎಂ) ಸಟ್ಟಾಕೋರ ಒತ್ತಡಗಳಿಗೆ ದೇಶದ ಆರ್ಥಿಕವನ್ನು ಇನ್ನಷ್ಟು ತೆರೆದಿಟ್ಟಂತಾಗುತ್ತದೆ ಎಂದು ಎಚ್ಚರಿಸಿದೆ.

ಈ ರೀತಿ ದೇಶದ ಹಿತಾಸಕ್ತಿಗಳ ಬಗ್ಗೆ ಆತಂಕದಿಂದಿರಲು ಮುಖ್ಯ ಕಾರಣ ಹೇಗಾದರೂ ಮಾಡಿ ವಿಶ್ವ ವ್ಯಾಪಾರ ಸಂಸ್ಥೆಯನ್ನು ಸಂತುಷ್ಟ ಗೊಳಿಸುವ ಈ ಸರಕಾರದ ಬಯಕೆ ಎಂಬುದಕ್ಕೆ ಸಂದೇಹವೇ ಇಲ್ಲ. ಸದ್ಯಕ್ಕೇ ಸಭೆ ಸೇರಲಿರುವ ಈ ಸಂಸ್ಥೆ ಭಾರತ ತನ್ನ ಆಮದನ್ನು ಇನ್ನಷ್ಟು ಉದಾರೀಕರಿಸಬೇಕು ಎಂದು ಒತ್ತಾಯಿಸುತ್ತಲೇ ಇತ್ತು. ಆ ಒತ್ತಾಯಕ್ಕೆ ತಲೆ ಬಾಗಿದ ನೀತಿಯಿದು. ಆಮದಿನ ಪ್ರಮಾಣದ ಮೇಲಿನ ಹತೋಟಿಯನ್ನು ಕ್ರಮೇಣ ರದ್ದುಪಡಿಸಬೇಕೆಂದು ಜಿನೆವಾದಲ್ಲಿ ನಡೆಯಲಿದ್ದ ಸಭೆಯಲ್ಲಿ ಅಮೆರಿಕಾ ಒತ್ತಾಯಿಸುವ ನಿರೀಕ್ಷೆಯಿದ್ದು, ಏಪ್ರಿಲ್ 13 ರಂದು, ಅಂದರೆ ಆ ಸಭೆಯ ಎಂಟು ದಿನಗಳ ಮೊದಲು ಈ ಆಮದು-ರಫ್ತು ನೀತಿಯನ್ನು ಪ್ರಕಟಿಸಲಾಗಿದೆ ಯೆಂಬುದು ಗಮನಾರ್ಹ.

ಏಶ್ಯನ್ ಬಿಕ್ಕಟ್ಟಿನ ಸಂದರ್ಭದಲ್ಲಿ ವಿಶ್ವಾದ್ಯಂತ ನವ-ಉದಾರೀಕರಣವಾದಿ ಧೋರಣೆಗಳನ್ನು ಅನುಸರಿಸುವುದರ ಬುದ್ಧಿವಂತಿಕೆಯನ್ನು ಪ್ರಶ್ನಿಸುತ್ತಿರುವಾಗ ಬಿಜೆಪಿ ನೇತೃತ್ವದ ಸರಕಾರದ ತರಾತುರಿಯ ಆಮದು ಉದಾರೀಕರಣ ಅದರ ನಿಜ ಸ್ವರೂಪವನ್ನು ಬಯಲು ಮಾಡಿದೆಯಷ್ಟೇ ಎಂದು ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಆಮದು-ರಫ್ತು ನೀತಿಯ ವಿರುದ್ಧ ದೇಶಾದ್ಯಂತ ಪ್ರತಿಭಟಿಸಬೇಕು ಎಂದು ತನ್ನ ಘಟಕಗಳಿಗೆ ಕರೆ ನೀಡಿದೆ.

ಚೆನ್ನೈಗೆ ಕೇಂದ್ರದ ವಿಶೇಷ ತಂಡ

ಅಸ್ಥಿರಗೊಳಿಸುವ ಶಕ್ತಿಗಳಿಗೆ ಪ್ರೋತ್ಸಾಹ ನೀಡುವ ಹುನ್ನಾರವೇ?

ಸಿಪಿಐ(ಎಂ) ಪ್ರತಿಭಟನೆ

ತಮಿಳುನಾಡಿನಲ್ಲಿ ಕಾನೂನು - ವ್ಯವಸ್ಥೆಯ ಪರಿಸ್ಥಿತಿಯನ್ನು ಸ್ಥಳದಲ್ಲೇ ಅಂದಾಜು ಮಾಡಲು' ಎಂದು ಕೇಂದ್ರ ಗೃಹಇಲಾಖೆಯ ವಿಶೇಷ ಕಾರ್ಯದರ್ಶಿಯ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳ ತಂಡವನ್ನು ಕಳಿಸಿದ ಬಿಜೆಪಿ ಸರಕಾರ ಈ ಮೂಲಕ ಏನು ಮಾಡ ಬಯಸುತ್ತಿದೆ? ರಾಜ್ಯದಲ್ಲಿ ಅಸ್ಥಿರಗೊಳಿಸುವ ಶಕ್ತಿಗಳನ್ನು ಪ್ರೋತ್ಸಾಹಿಸಿ ಶಾಂತಿಯನ್ನು ಕದಡಿಸಬಯಸುತ್ತಿದೆಯೇ ಎಂದು ಸಿಪಿಐ(ಎಂ) ತೀಕ್ಷ್ಣವಾಗಿ ಪ್ರಶ್ನಿಸಿದೆ.

ಕೊಯಮತ್ತೂರು ಸ್ಫೋಟಗಳ ನಂತರ ತಮಿಳುನಾಡಿನ ಗಡಿಯಾಚೆಯಿಂದಲೂ ವ್ಯಾಪಕ ಹುಡುಕಾಟ, ಶಸ್ತ್ರಾಸ್ತ್ರಗಳ ವಶಪಡಿಕೆ ಹಾಗೂ ಮುಸ್ಲಿಂ ಮೂಲಭೂತವಾದಿಗಳ ಬಂಧನಗಳನ್ನು ತಮಿಳುನಾಡು ಸರಕಾರ ನಡೆಸಿದೆ. ಸ್ವತಃ ಮುಖ್ಯಮಂತ್ರಿಗಳೇ ವೈಯಕ್ತಿಕವಾಗಿ ಪ್ರಧಾನಮಂತ್ರಿ ಮತ್ತು ಗೃಹಮಂತ್ರಿಗಳಿಗೆ ತಮಿಳುನಾಡಿನ ಸಾಮಾನ್ಯ ಕಾನೂನು ವ್ಯವಸ್ಥೆಯ ಬಗ್ಗೆ, ಮೂಲಭೂತವಾದಿಗಳ ಚಟುವಟಿಕೆಗಳನ್ನು ತಡೆಯುವ ಕ್ರಮಗಳ ಬಗ್ಗೆ ತಿಳಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಹೀಗಿರುವಾಗ ಚೆನ್ನೈಗೆ ಇಂತಹ ಒಂದು ತಂಡವನ್ನು ಕಳಿಸಬೇಕಾದ ಹೊಸ ಬೆಳವಣಿಗೆಯೇನು ಎಂದು ಏಪ್ರಿಲ್ 15 ರಂದು ನೀಡಿದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಪತ್ರಿಕಾ ಹೇಳಿಕೆ ಕೇಳಿದೆ. 'ಅಥವಾ ಇದು ಬಿಜೆಪಿಯ ಸರಕಾರೀ ಮಿತ್ರರ ರಾಜಕೀಯ ಉದ್ದೇಶಪೂರಿತ ಪ್ರೇರಣೆಯಿಂದಾಗಿ ಮಾಡಿರುವ ಕೆಲಸವೇ? ಕೇಂದ್ರದ ಬಿಜೆಪಿ ಸರಕಾರ ರಾಜ್ಯದಲ್ಲಿ ಶಾಂತಿ ಕದಡಿಸಲು ಅಸ್ಥಿರಗೊಳಿಸುವ ಪರಿಸ್ಥಿತಿ ಏರ್ಪಡಿಸಿ ಅಂತಹ ಶಕ್ತಿಗಳಿಗೆ ಪ್ರೋತ್ಸಾಹ ನೀಡ ಬಯಸುತ್ತಿದೆಯೇ?" ಎಂದು ಸಿಪಿಐ(ಎಂ) ಖಾರವಾಗಿ ಪ್ರಶ್ನಿಸಿದೆ.

ಬಿಜೆಪಿ ಸರಕಾರದ ಈ ಕ್ರಮವನ್ನು ಬಲವಾಗಿ ಪ್ರತಿಭಟಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇಂತಹ ಅಸ್ಥಿರಕಾರಿ ಕ್ರಮಗಳಿಂದ ದೂರವಿರಬೇಕೆಂದು ಆಗ್ರಹಪಡಿಸಿದೆ. ತಮಿಳುನಾಡಿನಲ್ಲಿ ಈಗಿರುವ ಸಾಮಾನ್ಯ ಕಾನೂನು-ವ್ಯವಸ್ಥೆಯ ಪರಿಸ್ಥಿತಿಯನ್ನು ರಕ್ಷಿಸಲು ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ಎಲ್ಲಾ ಸಹಕಾರ ನೀಡಬೇಕು ಎಂದು ಅದು ಆಗ್ರಹ ಪಡಿಸಿದೆ.

ಸಾರ್ವಜನಿಕ ವಲಯದ ಚೌಕಟ್ಟಿನಲ್ಲೇ ಇಸ್ಕೋದ ಆಧುನೀಕರಣ-ಖಾಸಗೀಕರಣ ಎಂದೆಂದೂ ಸಲ್ಲದು

ಕಾರ್ಮಿಕ ಸಂಘಗಳ ಆಗ್ರಹ

ಏಪ್ರಿಲ್ 14 ರಂದು ಸಿಐಟಿಯು, ಎಐಟಿಯುಸಿ, ಹೆಚ್.ಎಂ.ಎಸ್., ಬಿ.ಎಂ.ಎಸ್. ಮತ್ತು ಇಂಟಕ್ ಕಾರ್ಮಿಕ ಸಂಘಟನೆಗಳು, 'ಇಸ್ಕೋ ಉಳಿಸಿ ಸಮಿತಿ' ಹಾಗೂ ಇಸ್ಕೋ ಅಧಿಕಾರಿಗಳ ಸಂಘದ ಜಂಟಿ ನಿಯೋಗವೊಂದು ಕೇಂದ್ರ ಉಕ್ಕು ಮಂತ್ರಿ ನವೀನ್ ಪಟ್ನಾಯಕ್‌ಗೆ ಒಂದು ಮನವಿ ಸಲ್ಲಿಸಿ ಬರ್ನಪುರದಲ್ಲಿರುವ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿ(ಇಸ್ಕೋ - ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ) ಯನ್ನು ರಾಷ್ಟ್ರೀಕರಣದ ಆರಂಭದ ದಿನಗಳಿಂದಲೇ ಕೇಂದ್ರದ ಸರಕಾರಗಳು ನಿರ್ಲಕ್ಷಿಸುತ್ತಿದ್ದು ಈಗಲಾದರೂ ಅದನ್ನು ಆಧುನೀಕರಿಸಬೇಕು ಎಂದು ಆಗ್ರಹ ಪಡಿಸಿದೆ.

ಉತ್ತಮ ಕಾರ್ಯನಿರ್ವಹಣೆಗೆ ಅಗತ್ಯವಾದ ಒಳ್ಳೆಯ ಭೌಗೋಳಿಕ ಪರಿಸರದಲ್ಲಿರುವ ದೇಶದ ಈ ಪ್ರಮುಖ ಉಕ್ಕು ಸ್ಥಾವರದ ರಕ್ಷಣೆಗಾಗಿ 1989 ರಿಂದ ಕಾರ್ಮಿಕರು ಹಲವು ತ್ಯಾಗಗಳನ್ನು ಮಾಡಿದ್ದರೂ ಒಪ್ಪಂದದ ಪ್ರಕಾರ ಆಡಳಿತ ವರ್ಗ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮಂತ್ರಿಗಳ ಗಮನಕ್ಕೆ ತಂದಿರುವ ಈ ಮನವಿ ಈ ನಡುವೆ ಇನ್ನಷ್ಟು ಖಾಸಗಿಯವರಿಗೆ ಒಪ್ಪಿಸುವ ಪ್ರಯತ್ನ ನಡೆದಿದ್ದು ಅದನ್ನು ಉದ್ದಿಮೆಗಳ ಕುರಿತಾದ ಸಂಸತ್ತಿನ ಸ್ಥಾಯೀ ಸಮಿತಿ ಸಾರ್ವಜನಿಕ ವಲಯದ ಚೌಕಟ್ಟಿನಲ್ಲೇ ಇದರ ಆಧುನೀಕರಣ ಸಾಧ್ಯ ಎಂದು ಹೇಳಿರುವುದನ್ನು ನೆನಪಿಸಿದೆ.

ಈ ಸ್ಥಾವರದ ಆಧುನೀಕರಣದಲ್ಲಿ ಆಗುತ್ತಿರುವ ವಿಪರೀತ ವಿಳಂಬ 2500 ಕಾರ್ಮಿಕರ ಭವಿಷ್ಯದಲ್ಲಿ ಅನಿಶ್ಚಿತತೆ ಒಡ್ಡಿದೆಯಷ್ಟೇ ಅಲ್ಲ, ರಾಷ್ಟ್ರೀಯ ಆರ್ಥಿಕಕ್ಕೆ ಗಮನಾರ್ಹ ಕೊಡುಗೆ ನೀಡಬಲ್ಲ ಒಂದು ಘಟಕ ಕುಸಿಯುವಂತೆ ಮಾಡುತ್ತಿದೆ, ಆದ್ದರಿಂದ ಇಸ್ಕೋದ ಆಧುನೀಕರಣಕ್ಕೆ ತುರ್ತು ಗಮನ ಅಗತ್ಯ ಎಂದು ಕಾರ್ಮಿಕ ಸಂಘಗಳು ಮಂತ್ರಿಗಳಿಗೆ ಮನದಟ್ಟು ಮಾಡುತ್ತಾ ಆಗ್ರಹ ಪಡಿಸಿವೆ.

ಪುಸ್ತಕ ಪರಿಚಯ

ಪುಟ 5 ರಿಂದ

ಸರ್ಕಾರಗಳು ಎಚ್ಚರಿಕೆಯಿಂದ ಗಮನಿಸಬೇಕಾದ ಮಾತಿದು.

ಷರಿಯತ್‌ನ ಹೆಸರಿನಲ್ಲಿ 'ವಿಕೃತ ಮನಸ್ಸಿನ ಜನ ಎಂಥ ಅಧರ್ಮ ಕ್ಕಿಳಿಯುತ್ತಾರೆ" ಎಂಬುದನ್ನು ತಿಳಿಯಪಡಿಸುತ್ತಾ ಪೈಗಂಬರ್ ಹೇಳಿದ ಒಂದು ಮಾತನ್ನು ಉಲ್ಲೇಖಿಸುತ್ತಾರೆ 'ದೇವರು ಅನುಮತಿ ನೀಡಿದ ಎಲ್ಲವುಗಳಲ್ಲಿ ಆತ ಅತೀವವಾಗಿ ತಿರಸ್ಕರಿಸುವುದೆಂದರೆ ತಲಾಖ್.... ಯಾರು ತಮ್ಮ ಹೆಂಡಂದಿರ ಮೇಲೆ ಅತೀವ ಕರುಣೆಯುಳ್ಳವರಾಗಿರುತ್ತಾರೋ ಅವರೇ ನಿಮ್ಮೊಳಗಿನ ಶ್ರೇಷ್ಠರು'. ಆದರೆ ಪೈಗಂಬರ್ ಮಾತಿನ ವಿರುದ್ಧ ನಡೆಯುವವರೇ ಇಂದು ಈ ಧರ್ಮದ ವಕ್ತಾರರಾಗಿರುವುದು ವಿಪರ್ಯಾಸ.

ಹೀಗೆ ಹೇಳುವಾಗ ಮುಸ್ಲಿಂರಲ್ಲಿ ಪ್ರಗತಿಪರರಿಲ್ಲವೇ? ಎಂದು ಕೇಳಿದರೆ 'ಷರಿಯತ್ ಆಶಯದ' ಪ್ರಕಾರ ಮುಸ್ಲಿಂ ವೈಯುಕ್ತಿಕ ಕಾನೂನಿನಲ್ಲಿ ತಿದ್ದುಪಡಿಯಾಗಿ ಬಹುಪತ್ನಿತ್ವ ಮತ್ತು ತಲಾಕ್‌ನ್ನು ಕಾನೂನುಬಾಹಿರಗೊಳಿಸುವುದು. ಒಂದು ವೇಳೆ ಕೂಡಿಬಾಳುವುದು ಸಾಧ್ಯವೇ ಇಲ್ಲ ಎಂದಾದರೆ ತಲಾಖ್ ಪಡೆದ ಮಹಿಳೆಗೆ ಜೀವನಾಂಶವನ್ನು ಒದಗಿಸುವುದು ಇವು ಪ್ರಜ್ಞಾವಂತ ಮುಸ್ಲಿಮರ ಮುಖ್ಯವಿಚಾರವಾಗಿದೆ ಎಂಬ ಮಾತು ಉಲ್ಲೇಖಾರ್ಹವಾದದ್ದು. ಆದರೆ ಇವರೆಂದೂ ಆಳುವ ಸರಕಾರಗಳಿಗೆ ಸಮುದಾಯದ ವಕ್ತಾರರಂತೆ ಕಾಣದಿರುವುದು ಅವರ ವರ್ಗ-ಹಿತಾಸಕ್ತಿ ದೃಷ್ಟಿದೋಷವೇ?

ಈ ಸಂದರ್ಭದಲ್ಲಿಯೇ ವಿವಿಧ ಮುಸ್ಲಿಂ ರಾಷ್ಟ್ರಗಳಾದ ಟರ್ಕಿ, ಇಜಿಪ್ತ್, ಟ್ಯುನಿಷಿಯಾ, ಸಿರಿಯ, ಪಾಕಿಸ್ತಾನ, ಸಿರಿಯ, ಮೊರಕ್ಕೊ, ಇರಾನ್‌ಗಳಲ್ಲಿ ಭಾರತೀಯ ಮಹಿಳೆಯರಿಗಿಂತ ಉತ್ತಮ ಸ್ಥಿತಿಯಲ್ಲಿ ಅಲ್ಲಿಯ ಮಹಿಳೆಯರು ಬದುಕುತ್ತಿರುವ ಬಗ್ಗೆ ದಾಖಲೆ ಕೊಡುತ್ತಾರೆ. ಬಹುಪತ್ನಿತ್ವ ಜಾರಿಯಲ್ಲಿಲ್ಲದ, ಏಕಪಕ್ಷೀಯ ವಿವಾಹ ವಿಚ್ಛೇದನೆಗೆ ಅನುಮತಿ ಇಲ್ಲದ ಎರಡನೇ ಮದುವೆಗೆ ಸರ್ಕಾರಕ್ಕೆ ಮನವರಿಕೆ ಮಾಡಿ ಅನುಮತಿ ಪಡೆದೇ ವಿವಾಹವಾಗುವ, ತಲಾಖ್ ಕೊಟ್ಟಾಗ ಜೀವನಾಂಶ ಕೊಡುವ ವ್ಯವಸ್ಥೆಗಳ ಬಗ್ಗೆ ಹೇಳುತ್ತಾ ಹೋಗುತ್ತಾರೆ. ಆಗ ನಮ್ಮಲ್ಲಿ ಒಂದು ಪ್ರಶ್ನೆ ಹುಟ್ಟಿದರೇ ಆಶ್ಚರ್ಯ ಇಲ್ಲ. ಈ ದೇಶದಲ್ಲೆಲ್ಲ 'ಷರಿಯತ್' ಗೆ ವಿರೋಧವಾಗಿಲ್ಲದಿರುವುದು ಈ ದೇಶದಲ್ಲಿ ಮಾತ್ರ ವಿರೋಧವೇ?

ಈ ರೀತಿಯ ಹೆಣ್ಣಿನ ಶೋಷಣೆ ಮುಸ್ಲಿಂ ಧರ್ಮದಲ್ಲಿ ಮಾತ್ರ ಅಲ್ಲ, ಹಿಂದೂ ಧರ್ಮದಲ್ಲಿಯೂ ಚಾಲ್ತಿಯಲ್ಲಿರುವಂತಹುದೆ. ಸತಿಪದ್ಧತಿ, ವಿಧವೆ ಪಟ್ಟ, ವಿಧವೆಯ ಕೇಶಮುಂಡನ, ಬಾಲ್ಯ ವಿವಾಹ ಮುಂತಾದ ನಿಯಮದ ಮೂಲಕ ಹೆಣ್ಣನ್ನು ಗಂಡು ಹದ್ದುಬಸ್ತಿನಲ್ಲಿಡಲು ಪ್ರಯತ್ನಿಸಿದ್ದಾನೆ. ಅವಳಿಗೆ ಅಬಲೆ ಪಟ್ಟ ಕಟ್ಟಿ ತನ್ನ ದಾಸಿಯಾಗಿಸಿಕೊಂಡಿದ್ದಾನೆ, ಭೋಗದ ವಸ್ತುವನ್ನಾಗಿಸಿಕೊಂಡಿದ್ದಾನೆ. ಇದಕ್ಕೆ ಧರ್ಮಶಾಸ್ತ್ರಗಳ ಚೌಕಟ್ಟು ಬೇರೆ. ಈ ಧರ್ಮ ಗ್ರಂಥಗಳನ್ನು ಓದಿ ಸತ್ಯ ತಿಳಿಯಬಹುದು ಎನ್ನುವ ಕಾರಣಕ್ಕೆ ಮಹಿಳೆಯರು ಶಿಕ್ಷಣ ಪಡೆಯುವುದನ್ನೇ ನಿರಾಕರಿಸಲಾಗಿದೆ.


ಇಷ್ಟಾಗಿಯೂ ಇದೆಲ್ಲ ಈಗೀಗ ತೀವ್ರವಾದ ಬದಲಾವಣೆಗೆ ಒಳಗಾಗಿದೆ, ಆಗುತ್ತಲಿದೆ. ಹೀಗೆ ಪ್ರತಿಧರ್ಮದ ಒಳಗಿರುವ ಅಂಶಗಳನ್ನು ಹೊರಗಿಡುತ್ತಾ ಹೋದಾಗ ದೇಶದ ಮಹಿಳೆಯರೆಲ್ಲ ಎದುರಿಸುತ್ತಿರುವ ನೋವು, ಸವಾಲುಗಳು ಒಂದೇ ರೀತಿಯವು ಎನ್ನುವ ಪ್ರಜ್ಞೆ ಬರಲು ಸಾಧ್ಯ. ದೇಶದಲ್ಲಿ ಚಿಕ್ಕದಾಗಿಯಾದರೂ ನಡೆಯುತ್ತಿರುವ ಮಹಿಳಾ ಹೋರಾಟದ ಪ್ರವಾಹದಲ್ಲಿ ಪ್ರತ್ಯೇಕವಾಗಿ ನಿಲ್ಲದೇ ಒಂದಾಗಿ ಹೋರಾಟದ ಬಾವುಟ ಹಿಡಿಯಲು ಸಾಧ್ಯ.

ಹೀಗೆ ಸತ್ಯದ ದರ್ಶನ ಮಾಡಿಸುವ, ಕೋಮುವಾದಿಗಳ ಬಣ್ಣ ಬಯಲಾಗಿಸುವ ಇಂಥ ಪುಸ್ತಕಗಳು ಹೆಚ್ಚೆಚ್ಚು ಬರಬೇಕಾಗಿದೆ. ಹೀಗಾದಾಗ ಮಾತ್ರ ಲೇಖಕರೆನ್ನುವಂತೆ 'ಅವಳ ಮುಂಬರುವ ದಿನಗಳು ಕ್ರಾಂತಿಕಾರಕ ದಿನಗಳಾಗಿವೆ. ಜಗತ್ತಿನ ಯಾವ ಶಕ್ತಿಯೂ ಅವಳನ್ನು ತಡೆಯಲು ಸಾಧ್ಯ ಇಲ್ಲ. ವಿಶ್ವದ ಮಹಿಳೆಯರೇ ಒಂದಾಗಿ, ನೋವು, ಅಪಮಾನ, ಶಿಕ್ಷೆ ನಮ್ಮೆಲ್ಲರ ಸಮಾನ ಸಮಸ್ಯೆಗಳಾಗಿವೆ. ಈ ದುರಂತದಿಂದ ಪಾರಾಗಲು ಒಂದಾಗಿ ಹೋರಾಡಲು ಮುಂದಾಗಿ ಎಂದು ಕರೆ ನೀಡುವ ದಿನಗಳು ಹತ್ತಿರ ಹತ್ತಿರ ಬರಲುಸಾಧ್ಯ. ಹೀಗಾಗಬೇಕು ಎನ್ನುವುದೇ ನಮ್ಮ ಆಶಯ ಕೂಡಾ.

ಪುಸ್ತಕ ಚಿಕ್ಕದಾದರೂ ಇಂದಿನ ಸಂದರ್ಭದಲ್ಲಿ ಇದರ ಮಹತ್ವ ಚಿಕ್ಕದಲ್ಲ. ಇದಕ್ಕೊಂದು ಚಾರಿತ್ರಿಕ ಮಹತ್ವ ಇದೆ. ಮತಾಂಧರ ವಿರೋಧವನ್ನು ಪಕ್ಕಕ್ಕೆ ತಳ್ಳಿ ಇಂಥ ಪುಸ್ತಕ ಬರೆದ ರಂಜಾನ್‌ದರ್ಗಾರವರು ಅಭಿನಂದನಾರ್ಹರು.

ವಾರದ ವ್ಯಂಗ್ಯಚಿತ್ರ

ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



REG. No. 17015-1964 KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27